4. ವಿತ್ತೀಯ ಕಾರ್ಯ ಕಲಾಪ

1999-2000ನೇ ಸಾಲಿನ ಆಯವ್ಯಯದ ಮೇಲೆ ಚರ್ಚೆ(ಮುಂದುವರಿದುದು)

+ ಶ್ರೀ ಜೆ.ಸಿ. ಮಾಧುಸ್ವಾಮಿ ಸನ್ಮಾನ್ಯ ಅಧ್ಯಕ್ಷರೆ, 1999-2000ನೇ ಸಾಲಿನ ಆಯವ್ಯಯದ ಮೇಲೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟ ತಮ್ಮನ್ನು ಅಭಿನಂದಿಸುತ್ತೇನೆ. ಮಾನ್ಯ ಸಿದ್ಧರಾಮಯ್ಯನವರು ಹೇಳಿದ ರೀತಿಯಲ್ಲಿ ಇದು ಅವರ ಐದನೇ ಆಯವ್ಯಯವಾಗಿದೆ. ಅವರು ಹೇಳಿದ ಒಂದು ಮಾತನ್ನು ಇಲ್ಲಿ ಉಲ್ಲೇಖ ಮಾಡುತ್ತೇನೆ. ನಾವು ಕೇಂದ್ರ ಸರಕಾರದ ಜೊತೆಗೆ ನೆಗೋಶಿಯೇಟ್ ಮಾಡುತ್ತೇವೆ, ಹೆಚ್ಚು ಕಾರ್ಯಕ್ರಮಗಳನ್ನು ನಾವು ಕೇಂದ್ರ ಸರಕಾರದಿಂದ ರೂಪಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ, ಅಂತೆಯೇ ಟ್ಯಾಕ್ಸ್ ರೂಪದಲ್ಲಿ ನಮ್ಮ ಹಣ ಕೇಂದ್ರ ಸರಕಾರಕ್ಕೆ ಹೋಗುತ್ತಿರುವುದರಲ್ಲಿ ನಮ್ಮ ಭಾಗವನ್ನು ಜಾಸ್ತಿ ಮಾಡಿಕೊಳ್ಳಲು ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಈಗ ಪ್ರಮುಖವಾಗಿ ಒಂದು ವಿಷಯವನ್ನು ತಮ್ಮ ಮೂಲಕ ಪ್ರಸ್ತಾಪ ಮಾಡಬಯಸುತ್ತೇನೆ. ನಾವು ನಮ್ಮ ಸಂವಿಧಾನವನ್ನು ಒಪ್ಪಿಕೊಂಡಿದ್ದೇವೆ. ಈಗಿನ ಕಾಲದಲ್ಲಿ ರಾಜ್ಯದ ಹತೋಟಿಯಲ್ಲಿದ್ದ ಅನೇಕ ಇಲಾಖೆಗಳಲ್ಲಿ ಕೇಂದ್ರ ಸರಕಾರದವರು ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿ ಮಾಡುವಾಗ ರಾಜ್ಯದ ಸಾರ್ವಭೌಮತ್ವವನ್ನು ಬೈಪಾಸ್ ಮಾಡಿ ಜಿಲ್ಲಾ ಮಟ್ಟಕ್ಕೆ, ತಾಲ್ಲೂಕು ಮಟ್ಟಕ್ಕೆ, ಅವರದ್ದೇ ಆದ ವ್ಯವಸ್ಥೆಯಲ್ಲಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕೈ ಹಾಕಿರುವುದು ನಿಜವಾಗಿಯೂ ಈ ಸಂವಿಧಾನ ಪದ್ಧತಿಯಲ್ಲಿ ಪ್ರಶ್ನೆ ಮಾಡಬೇಕಾಗುತ್ತದೆ ಎಂದು ನಾನು ಭಾವಿಸುತ್ತೇನೆ. ರಾಜ್ಯಕ್ಕೆ ಬಂದು ರಾಜ್ಯದ ಸಾರ್ವಭೌಮತ್ವದ ಕೆಳಗೆ, ಹಣಕಾಸು ಖರ್ಚಾಗಬೇಕಾದುದು, ಅಕೌಂಟಬಿಲಿಟಿ ಮೈಂಟೈನ್ ಆಗಬೇಕಾದುದು ವಾಸ್ತವ ಸಂಗತಿಯಾಗಿದ್ದರೂ ಕೂಡ ಇತ್ತೀಚಿನ ದಿನಗಳಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ತಮ್ಮದೇ ಆದ ರೀತಿಯಲ್ಲಿ ಮಾಡುತ್ತಿದ್ದಾರೆ. ಕೆಲವು ಉದಾಹರಣೆಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಯುಬಿಎಸ್ ಸ್ಕೀಮ್ ಎಂದು ಮಾಡುತ್ತಾರೆ. ಮುನ್ಸಿಪಾಲಿಟಿಯವರು, ಅವರು, ಇವರು, ಮಾಡಬೇಕಾದಂಥ ಕೆಲಸವನ್ನು ಅವರುಗಳ ಗಮನಕ್ಕೆ ಬಾರದ ರೀತಿಯಲ್ಲಿ ಮಾಡುವುದು ಮತ್ತು ಯಾವುದೋ ಎನ್‌ಜಿಒಗಳ ಮೂಲಕ ಮಾಡಿದ್ದೇವೆ ಎಂದು ಹೇಳುವುದು ನಡೆದಿದೆ. ಐಡಿಎಸ್‌ಎಂಟಿ ಸ್ಕೀಮನ್ನು ಮುನ್ಸಿಪಲ್ ಏರಿಯಾದಲ್ಲಿ ಮಾಡುತ್ತಾ ಇದ್ದರು. ಅದನ್ನು ಪುರಸಭೆಯವರ ಗಮನಕ್ಕೆ ಬಾರದ ಹಾಗೆ ನಾವು ಅಸಿಸ್ಟೆಂಟ್ ಕಮಿಷನರ್‌ರವರ ಅಧ್ಯಕ್ಷತೆಯಲ್ಲಿ ನಾವು ಮಾಡಿದ್ದೇವೆ ಎಂದು ಹೇಳುತ್ತಾರೆ. ಇಎಎಸ್‌ವಂಟಿ ಸ್ಕೀಂ ಕೂಡ ಹೀಗೆ ಮಾಡುತ್ತಾರೆ. ಇಎಎಸ್‌ಎಂಟಿ ಸ್ಕೀಂನ ವಿಚಾರದಲ್ಲಿ ರಾಜ್ಯ ಸರ್ಕಾರಕ್ಕೆ ಏನಾದರೂ ಹತೋಟಿ ಇದೆಯೋ ಅಥವಾ ಇಲ್ಲವೋ ಎಂದು ಕಾಡುವಂಥ ಸ್ಥಿತಿಗೆ ಬಂದಿದೆ. ಜಿಲ್ಲೆಗಳಿಗೆ ಹಣ ಕೊಡಬೇಕಾಗಿತ್ತು. ಇಲ್ಲಿ ಎರಡನೇ ಕಂತಿನ ಹಣ ಖರ್ಚಾದ ಮೇಲೆ ಮೂರನೇ ಕಂತಿನ ಹಣವನ್ನು ಕಟ್ಟಬೇಕಾಗಿತ್ತು. ಹೋದಸಲ ಇವರು ಇಲ್ಲಿ ಕುಳಿತುಕೊಂಡು

ನೀವು ನಾಲ್ಕು ತಾಲ್ಲೂಕುಗಳಲ್ಲಿ 50 ಲಕ್ಷ ರೂ.ಗಳನ್ನು ಜಾಸ್ತಿ ಖರ್ಚು ಮಾಡಿ ಅಡಿಶನಲ್ ಇಎಎಸ್‌ಗಳಲ್ಲಿ ನಾವು ಫ್ರೊವೈಡ್ ಮಾಡುತ್ತೇವೆ ಎಂದಿದ್ದರು. ಇವೊತ್ತು ಕೂಡ ನಾವು ಜಿಲ್ಲಾಪಂಚಾಯತ್ ಮೀಟಿಂಗ್‌ಗಳಿಗೆ ಹೋದರೆ, ಆ 50 ಲಕ್ಷ ಮತ್ತು ಮೂರನೇ ಇನ್‌ಸ್ಟಾಲ್‌ಮೆಂಟ್ ಬರಲೇ ಇಲ್ಲ, ನಿಮ್ಮ ಕಾನ್ಸಿಟ್ಯೂಯನ್ಸಿಗಳಲ್ಲಿ ಕೊರತೆಯಾಗಿದೆ, ನೀವು ಈ ವರ್ಷ ಮಾಡುವ ಪ್ರಾಜೆಕ್ಟ್‌ಗಳಲ್ಲಿ ಕಡಿಮೆ ಮಾಡಿ ಎಂದು ಹೇಳುತ್ತಾರೆ. ಆದ್ದರಿಂದ ಮಾನ್ಯ ಅರ್ಥ ಸಚಿವರು ಇವುಗಳೆಲ್ಲವನ್ನೂ ಒಂದೇ ಅಂಬ್ರೆಲ್ಲಾದ ಕೆಳಗೆ ತರಬೇಕಾಗುತ್ತದೆ ಸನ್ಮಾನ್ಯ ಮುಖ್ಯಮಂತ್ರಿಗಳೇ ಹೇಳಿ ನಾವು ತೆಗೆದುಕೊಂಡ ಯೋಜನೆಗಳಿಗೆ ಹಣವು ಬರಲಿಲ್ಲ ಅಂದರೆ, ನಮಗೆ ಇರಿಸುಮುರಿಸು ಆಗುತ್ತದೆ. ಈ ವರ್ಷ ಕೂಡ ಹಾಗೆಯೇ ಆಗಿದೆ. ಇಎಎಸ್ ಕಾರ್ಯಕ್ರಮದಲ್ಲಿ ಎಷ್ಟು ಹಣ ಬರುತ್ತದೆಂಬುದು ನಮಗೆ ಗೊತ್ತಾಗುವುದಿಲ್ಲ. ನಮ್ಮ ತುಮಕೂರು ಜಿಲ್ಲೆಗೆ 8.5 ಕೋಟಿ ರೂ.ಗಳು ಬರಬೇಕಾಗಿತ್ತು. ಅವರು ಆಗಲೇ ಎಕ್ಸೀಡ್ ಮಾಡಿ ಬಹಳ ದಿನಗಳು ಆದವು ಮೂರನೇ ಇನ್‌ಸ್ಟಾಲ್‌ಮೆಂಟ್ ಕೊಟ್ಟಿಲ್ಲ ಎಂದು ಅಲ್ಲಿ ಕೇಳಿದರೆ ಶಾಸಕರಾಗಿ ನಾವು ಅವರಿಗೆ ಉತ್ತರ ಹೇಳುವ ಸ್ಥಿತಿಯಲ್ಲಿರುವುದಿಲ್ಲ. ಇದೇ ರೀತಿಯಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು 2, 3, 4 ಏಜನ್ಸಿಗಳು ಮಾಡುವುದರಿಂದ ಮೊದಲನೇದಾಗಿ ಅಕೌಂಟೆಬಿಲಿಟಿ ನಮ್ಮ ರಾಜ್ಯ ಸರ್ಕಾರಕ್ಕೆ ಲಾಸ್ ಆಗುತ್ತದೆ ಎಂದು ನಾನು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ. ಈ ಕುರಿತು ಎಷ್ಟು ಹಣ ಖರ್ಚಾಗುತ್ತಿದೆ, ಯಾವ ಯಾವ ಏಜನ್ಸಿಗಳ ಮೂಲಕ ಖರ್ಚಾಗುತ್ತಿದೆ, ಇಂಡಿಪೆಂಡೆಂಟ್ ಆಗಿ ಯಾರ್‍ಯಾರು ಕೆಲಸ ಮಾಡುತ್ತಿದ್ದಾರೆ, ಇದಕ್ಕೆಲ್ಲಾ ಯಾರು ಜವಾಬ್ದಾರರು ಎಂಬಿತ್ಯಾದಿ ವಿಶಯಗಳನ್ನು ಕೇಳಬೇಕಾಗುತ್ತದೆ. ಈ ಬಗ್ಗೆ ಮಾನ್ಯ ಅರ್ಥ ಸಚಿವರು ಗಮನ ಕೊಡಬೇಕಾಗುತ್ತದೆ. ಅವರು ಒಂದು ಕಸರತ್ತನ್ನು ಮಾಡಿದ್ದಾರೆ. ಒಬ್ಬರು ಕೊಟ್ಟ ಹಾಗೆ ಆಗಬೇಕು ಮತ್ತು ಇಬ್ಬರು ಇಸಿದುಕೊಂಡ ಹಾಗೆ ಆಗಬೇಕೆಂದು ಮಾಡಿದ್ದಾರೆ. ಇದರ ಮೂಲಕ ಕೊಟ್ಟವರು ಕೊಡಂಗಿ ಇಸಿದುಕೊಂಡವರು ವೀರಭದ್ರ ಎಂದ ಹಾಗೆ ಆಗಿದೆ. ಅನೇಕ ಯೋಜನೆಗಳಿಗೆ ತುಂಬಾ ಒಳ್ಳೆಯ ನಾಮಕರಣವನ್ನು ಮಾಡಿದ್ದೀರಿ. ಹೋದ ಸಲ ತಾವುಗಳು ಮಾಂಗಲ್ಯಭಾಗ್ಯ ಯೋಜನೆಯ ಬಗ್ಗೆ ಹೇಳಿದ್ದೀರಿ. ಅದಕ್ಕೆ ಸಮಿತಿಗಳನ್ನು ಕೂಡ ಮಾಡಿದ್ದೀರಿ. ಆದರೆ ಬಾಯಿ ತುಂಬಾ ಹೇಳಿಕೊಂಡ ಆ ಯೋಜನೆಯಲ್ಲಿ 3-4 ಜನರಿಗೂ ಕೂಡ ಯೋಜನೆಯ ಫಲವನ್ನು ಕೊಟ್ಟಿಲ್ಲ. ನೀವು ಇಲ್ಲಿ ಹೇಳಿ ಪೇಪರ್‌ಗಳಲ್ಲಿ ಅನೌನ್ಸ್ ಮಾಡಿದಾಗ ಅಲ್ಲಿನ ಹೆಣ್ಣುಮಕ್ಕಳು ನಮ್ಮ ಹತ್ತಿರ ಬಂದು ನಮಗೆ ಐದು ಸಾವಿರ ರೂ.ಗಳನ್ನು ಕೊಡಿಸಿ ಎಂದು ನಮಗೆ ಕೇಳಿದರೆ, ನಾವು ಯಾರನ್ನು ಕೇಳಬೇಕು, ಯಾರನ್ನು ಹೇಳಬೇಕು. ಎನ್ನುವ ಸ್ಥಿತಿ ನಿರ್ಮಾಣವಾಗುತ್ತದೆ. ಇವೊತ್ತಿಗೂ ಕೂಡ ಅನೇಕ ಕಾರ್ಯಕ್ರಮಗಳನ್ನು ತಾವುಗಳು ಘೋಷಣೆ ಮಾಡಿಕೊಂಡು ಬಂದಿದ್ದೀರಿ. ಇಂಥ ಕಾರ್ಯಕ್ರಮಗಳು ವಾಸ್ತವವಾಗಿ ಅನುಷ್ಠಾನವಾಗುತ್ತಿವೆಯೇ ಎಂದು ಪ್ರಶ್ನಿಸಬೇಕಾಗುತ್ತದೆ. ಅನುಷ್ಠಾನ ಮಾಡುವಂಥ ಕಾರ್ಯಕ್ರಮಗಳನ್ನು, ಸಾಸಹಗಳನ್ನು, ಅನುಷ್ಠಾನ ಮಾಡುವ ಸ್ಥಿತಿಯನ್ನು ನಾವು ವಾಸ್ತವ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಹೀಗೆ ಅನುಷ್ಠಾನವಾಗದಂಥ ಕಾರ್ಯಕ್ರಮಗಳನ್ನು ನಾವು ಘೋಷಣೆ ಮಾಡಿಕೊಂಡು ಹೋದರೆ ಅದನ್ನು ಆಡಳಿತ

ಎಂದು ನಾವು ಕರೆಯುವುದು ಕಷ್ಟವಾಗುತ್ತದೆ. ಇವೊತ್ತು ತಾವುಗಳು ಹೇಳಿದ ಕಾರ್ಯಕ್ರಮಗಳನ್ನು ತಾವುಗಳು ಹೇಗಾದರೂ ಮಾಡಿ ಅನುಷ್ಠಾನ ಮಾಡಬೇಕು. ಅದಕ್ಕೆ ಬಜೆಟ್‌ನಲ್ಲಿ ತಾವುಗಳು ಪ್ರಾವಿಷನ್ ಮಾಡಬೇಕಾಗಿತ್ತು ಎಂದು ಹೇಳಬಯಸುತ್ತೇನೆ. ಹಾಗೆಯೇ ರೀಜನಲ್ ಇಂಬ್ಯಾಲೆನ್ಸನ್ನು ಜಾಸ್ತಿ ಮಾಡುವ ಕ್ರಮವನ್ನು ನಾವು 10-12 ವರ್ಷಗಳ ಬಜೆಟ್‌ಗಳಿಂದ ನೋಡುತ್ತಾ ಇದ್ದೇವೆ. ನೀವು ಗ್ರಾಮೀಣ ಪ್ರದೇಶಗಳಿಗೆ ಮಾಡುತ್ತಿರತಕ್ಕಂಥ ಖರ್ಚುಗಳನ್ನು, ಪಟ್ಟಣ ಪ್ರದೇಶಗಳಿಗೆ ಮಾಡುತ್ತಿರತಕ್ಕಂಥ ಖರ್ಚುಗಳನ್ನು ಜನಸಂಖ್ಯೆಯ ಆಧಾರದ ಮೇಲೆಯೋ, ಭೂಮಿಯ ವಿಸ್ತೀರ್ಣದ ಆಧಾರದ ಮೇಲೆಯೋ, ಇನ್‌ಕಂ ಆಧಾರದ ಮೇಲೆಯೋ, ತುಲನೆ ಮಾಡಿ ನೋಡಿದರೆ, ನಾವು ರಾಜಕಾರಣಿಗಳು ಭಾಷಣ ಮಾಡುತ್ತಿರುತ್ತೇವೆ. ನಾವುಗಳು ಮಾಡುವ ಒಂದು ಪಾಪ ಅಂದರೆ ನಮ್ಮ ಅಧಿಕಾರಿಗಳು ಮಾಡುವ ಎಲ್ಲಾ ಪಾಪಗಳನ್ನು ನಮ್ಮ ಮುಖದ ಮೇಲೆ ಹಾಕಿಕೊಂಡು ಏನಾದರೂ ಮಾಡಿ ತಿಂಗಳಿಗೊಮ್ಮೆ ಕಷ್ಟಪಟ್ಟು ಹಣವನ್ನು ಒಟ್ಟು ಮಾಡಿ ಅಧಿಕಾರಿಗಳಿಗೆ ಸಂಬಳ ಕೊಡುವುದು ಮಾತ್ರ ನಮ್ಮ ಕೆಲಸವಾಗಿದೆ. ಆ ಒಂದೆರಡು ಪರ್‌ಸೆಂಟ್‌ನಷ್ಟು ಜನರನ್ನು ಸಾಕಲಿಕ್ಕೋಸ್ಕರವಾಗಿ ನಾವು ಸಮಾಜ ಸೇವೆಯ ಹೆಸರಿನಲ್ಲಿ ರಾಜಕಾರಣವನ್ನು ಮಾಡುತ್ತಾ ಇದ್ದೇವೆ; ಎಂದು ಅನಿಸುತ್ತದೆ. ಸಂಬಳಕೊಡುವುದಕ್ಕಾಗಿ 30ನೇ ತಾರೀಖಿನೊಳಗೆ ಖಜಾನೆಗೆ ಹಣವನ್ನು ತುಂಬುವುದು ಒಂದು ಕೆಲಸ. ಅವರು ಮಾಡಿದ ಎಲ್ಲಾ ಪಾಪವನ್ನು ನಮ್ಮ ಮೇಲೆ ಎಳೆದುಕೊಳ್ಳುವುದು ಇನ್ನೊಂದು ಕೆಲಸ. ಈ ಎರಡು ಕೆಲಸಗಳನ್ನು ಬಿಟ್ಟು ವಾಸ್ತವವಾಗಿ ನಮ್ಮನ್ನು ಇಲ್ಲಿಗೆ ಯಾರು ಕಳುಹಿಸಿದ್ದಾರೋ ಅವರಿಗಾಗಿ ಏನಾದರೂ ಒಂದು ಕಾರ್ಯಕ್ರಮವನ್ನು ಮಾಡಬೇಕೆಂದರೆ, ಅದು ನಮ್ಮಿಂದ ಆಗುತ್ತಾ ಇಲ್ಲ. ಇವೊತ್ತು ನೀವು ಅಮೌಂಟ್‌ನ್ನು ಜಾಸ್ತಿಮಾಡಬೇಕೆಂದು ಏನು ಹೇಳುತ್ತಿದ್ದೀರಿ ಅದು ಕನಿಷ್ಟ ನಾನ್ -ಪ್ಲಾನ್‌ನಲ್ಲಿ ಅನಿವಾರ್ಯತೆಯಿಂದ ಮಾಡುತ್ತಾ ಇದ್ದೀರಿ. ಅವರಿಗೆ ಬರಬೇಕಾದ ಹೆಚ್ಚುವರಿ ಸಂಬಳ, ಭತ್ಯ, ಇನ್‌ಕ್ರೀಮೆಂಟ್‌ಗಳ ಬಗ್ಗೆ ಕೆಲಸ ಮಾಡಿದ್ದನ್ನು ಬಿಟ್ಟರೆ ಕಾರ್ಯಕ್ರಮಗಳ ಬಗ್ಗೆ ಹೆಚ್ಚು ಹಣವನ್ನು ನಿಮ್ಮ ಬಜೆಟ್‌ನಲ್ಲಿ ಇಡಲು ಆಗಲಿಲ್ಲ ಎಂದು ಹೇಳಬಯಸುತ್ತೇನೆ. ತಾವುಗಳು ಹಿಂದೆ ಪಶುಸಂಗೋಪನ ಸಚಿವರಾಗಿ ಕೆಲಸ ಮಾಡಿದ್ದೀರಿ. ಆಗ ಪಶು ಸಂಗೋಪನ ಇನ್‌ಸ್ಟಿಟ್ಯೂಶನ್ಸ್ ಎಷ್ಟು ಇತ್ತು ಮತ್ತು ಔಷಧಿಗಾಗಿ ಎಷ್ಟು ಖರ್ಚು ಮಾಡುತ್ತಿದ್ದೀರಿ ಎಂಬುದು ತಮಗೆ ಗೊತ್ತಿತ್ತು. ಒಂದು ಆಸ್ಪತ್ರೆ ಅಂದರೆ ಅಲ್ಲಿಗೆ ಇಷ್ಟು ಹಣವನ್ನು ಇಡಬೇಕು, ಆಸ್ಪತ್ರೆಗೆ ಇಷ್ಟು ಔಷಧಿ ಇಡಬೇಕೆಂದು ಇರುತ್ತದೆ. ಇವೊತ್ತು ಆಸ್ಪತ್ರೆಗಳು ಜಾಸ್ತಿಯಾದವು. ಔಷಧಿ ಇಲ್ಲದ ಹಾಗೆ ಆಯಿತು. ಉದಾಹರಣೆಗೆ ಕುರಿ ಮಂಡಳಿಯಲ್ಲಿ ಹೋದ ವರ್ಷ ಮೇ ತಿಂಗಳಲ್ಲಿ ಹಣ ರಿಲೀಸ್ ಮಾಡಿ ವ್ಯಾಕ್ಸಿನ್ ಕೊಡಿಸಿದ್ದಾರೆ. ಆದರೆ ಇವೊತ್ತಿನವರೆಗೂ ಇರಲಿಲ್ಲ ಅಂದರೆ ಈ ಮಂಡಳಿಯನ್ನು ನೀವು ಏಕೆ ಮಾಡಿದ್ದೀರಿ? ಮಂಡಳಿಗೆ ಒಂದಿಷ್ಟು ಜನ ಡಾಕ್ಟರ್‌ಗಳನ್ನು ಏಕೆ ಹಾಕಿದ್ದೀರಿ? ಹೀಗೆ ನಾವು ಇಲ್ಲಿ ಕುಳಿತುಕೊಂಡು 85-90 ಸಾವಿರ ಜನ ಟೀಚರ್ಸ್‌ನ್ನು ನೇಮಕ ಮಾಡಿಕೊಂಡು ಸಮಗ್ರ ಅಭಿವೃದ್ಧಿಯನ್ನು ಮಾಡಿದ್ದೇವೆ ಎಂದು ಹೇಳಿಕೊಳ್ಳುತ್ತೇವೆ. ಆದರೆ ನಾನು ಹಾಗೆ

ಭಾವಿಸುವುದಿಲ್ಲ. ಯಾಕೆಂದರೆ ಅದಕ್ಕೆ ತಕ್ಕ ಹಾಗೆ ಇನ್‌ಫ್ರಾಸ್ಟ್ರಕ್ಚರ್‌ನ್ನು ನಾವು ಕ್ರಿಯೇಟ್ ಮಾಡುತ್ತಾ ಇದ್ದೇವೆಯೇ? ಅದಕ್ಕೆ ತಕ್ಕ ಹಾಗೆ ಸೌಲಭ್ಯಗಳನ್ನು ನಾವು ಕ್ರಿಯೇಟ್ ಮಾಡುತ್ತಾ ಇದ್ದೇವೆಯೇ? ಇಲ್ಲ ಎಂದು ಹೇಳಬೇಕಾಗುತ್ತದೆ. ಮಾನ್ಯ ಸಿದ್ದರಾಮಯ್ಯನವರು ಪಶುಸಂಗೋಪನ ಸಚಿವರಾಗಿದ್ದ ಸಮಯದಲ್ಲಿ ಎಷ್ಟು ಹಣವನ್ನು ಇಟ್ಟಿದ್ದರು? ಈಗ ಎಷ್ಟು ಇಟ್ಟಿದ್ದಾರೆ? ಆಗಿನ ಔಷದಿಗಳ ಬೆಲೆಗೂ ಈಗಿನ ಬೆಲೆಗೂ ಏರಿಕೆ ಇಲ್ಲವೇ? ಹೆಚ್ಚುವರಿಯಾದ ಬೆಲೆಯ ಬಗ್ಗೆ ಪರಿಶೀಲಿಸ- ಬೇಕಾಗಿದೆಯಲ್ಲವೇ? ಅದರ ಪ್ರಕಾರ ಹಣವನ್ನು ಹೆಚ್ಚಿಸಲಾಗಿದೆಯೇ? ಅದಕ್ಕೆ ಸರಿಯಾಗಿ ಯೋಚನೆ ಮಾಡಿದಾಗ ಅದಕ್ಕೆ ಸಮಾನಾಂತರವಾಗಿ ಏನಾದರೂ ಅಲೋಕೇಶನ್ ಮಾಡಬೇಕೇ, ಈ ಎಲ್ಲಾ ವಿಚಾರಗಳನ್ನು ಮಾಡಿದಾಗ, ಅವಲೋಕಿಸಿದಾಗ ತಾವುಗಳು ಬಜೆಟ್ಟನ್ನು ಇಲ್ಲಿ ಇಡಲು ಸಮರ್ಥರಾಗಿಲ್ಲವೋ ಏನೋ ಎಂದು ನನ್ನ ಭಾವನೆ. ನಾವುಗಳು ತಮ್ಮಿಂದ ಬಹಳ ನೀರಿಕ್ಷೆ ಮಾಡಿದ್ದೆವು. ಗ್ರಾಮೀಣ ಪ್ರದೇಶಗಳಿಗೆ ತಾವುಗಳು ಧಾರಾಳ ಮನೋಭಾವದಿಂದ ಇದು ಕೊನೆಯ ವರ್ಷವಾದ ಕಾರಣದಿಂದಾದರೂ ಸಹಾಯ ಮಾಡುತ್ತೀರಿ ಎಂಬ ಆಶೆ ನಮ್ಮಲ್ಲಿತ್ತು. ನಾವು ನಿಮ್ಮ ಆರ್ಥಿಕ ಸಮೀಕ್ಷೇಯನ್ನು ಓದಿದ್ದೇವೆ. ಇವೊತ್ತು ಫರ್ಟಿಲೈಸರ್ಸ್ ಸೇಲ್ಸ್ ಜಾಸ್ತಿಯಾಗುತ್ತಿದೆ ಮತ್ತು ಪ್ರಾಡಕ್ಷನ್ ಆಫ್ ಫುಡ್‌ಗ್ರೈನ್ ಕಡಿಮೆಯಾಗುತ್ತಿದೆ. ಹೀಗೆ ಏಕೆ ಆಗುತ್ತಿದೆ? ಫರ್ಟಿಲೈಜರ್ ಬಳಕೆ ಜಾಸ್ತಿಯಾದಾಗ, ಅದರ ಮೇಲೆ ಕೊಡುವ ಸಬ್ಸಿಡಿಯು ಜಾಸ್ತಿಯಾದಾಗ, ಫರ್ಟಿಲೈಜರ್ ಯುಟಿಲೈಸೇಶನ್ ಜಾಸ್ತಿಯಾದಾಗ, ಅದಕ್ಕೆ ಸಮನಾಗಿ ಕೃಷಿ ಉತ್ಪನ್ನಗಳು ಏಕೆ ಬರುತ್ತಾ ಇಲ್ಲ? ಅದು ದುಬಾರಿಯಾಗಿದೆ. ಆದರಿಂದಾಗಿ ನಮಗೆ ಏನೂ ಬರುತ್ತಾ ಇಲ್ಲ. ರಾಜ್ಯದ ಯೋಜನೆಯಲ್ಲಿ ಇದನ್ನು ಯೋಚನೆ ಮಾಡಬೇಕು. ಇವೊತ್ತು ಯಾರು ಬಂಡವಾಳವನ್ನು ಹಾಕಲು ಯೋಚನೆ ಮಾಡುತ್ತಿದ್ದಾನೆ, ಅವನು ಹಾಕುವ ಬಂಡವಾಳಕ್ಕೆ ಏನಾದರೂ ಸಮನಾಗಿ, ಸ್ವಲ್ಪ ಹೆಚ್ಚಾಗಿ ರೆಮ್ಯುನರೇಟಿವ್ ಪ್ರೈಸಸ್‌ನ್ನು ನಾವು ಕೊಡುತ್ತಿದ್ದರೆ ರಾಜ್ಯವು ಚೆನ್ನಾಗಿರುತ್ತಿತ್ತು. 80 ಪರ್‌ಸೆಂಟ್‌ನಷ್ಟು ಜನರು ನಾವು ಅಲ್ಲೇ ಬದುಕಿರುವುದು, 10-20 ಪರ್‌ಸೆಂಟ್ ಜನರಿಗಾಗಿ ನಾವು ಬಜೆಟ್ ಮಾಡುವುದು, ಇದಾದರೆ ಹೇಗೆ? ಇದೇ ಸ್ಥಿತಿಯನ್ನು ಮಾನ್ಯ ಸಿದ್ದರಾಮಯ್ಯನವರೂ ಮುಂದುವರಿಸಿಕೊಂಡು ಹೋಗುವುದಾದರೆ ನಾವು ನಮ್ಮ ಸ್ಥಿತಿಯನ್ನು ಮತ್ತು ನಮ್ಮ ಶಾಪದ ವಿಮೋಚನೆಯನ್ನು ಮುಕ್ತಗೊಳಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಬೇಕಾಗುತ್ತದೆ. ಇವೊತ್ತು ಗ್ರಾಮಿಣ ಪ್ರದೇಶಗಳ ಪರಿಸ್ಥಿತಿಯನ್ನು ತಾವುಗಳು ಬಂದು ನೋಡಿದ್ದೀರಾ? ನಗರಗಳಿಗೆ ಮಾತ್ರ ಹೈಟೆಕ್ ಸೌಲಭ್ಯಗಳು ಬೇಕು ಎಂಬಿತ್ಯಾದಿ ಒತ್ತಾಯಗಳು ಎಲ್ಲಾ ಕಡೆಯಿಂದಲೂ ಬರುತ್ತಿರುತ್ತದೆ. ನಮ್ಮ ಹಳ್ಳಿಗಳಲ್ಲಿ ಹೆರಿಗೆಗೆ ಬಂದ ಹೆಣ್ಣುಮಕ್ಕಳಿಗೆ ಆಸ್ಪತ್ರೆಯಲ್ಲಿ ಎಎಸ್‌ಎಂಗಳೂ ಕೂಡ ಇರುವುದಿಲ್ಲ. ಆದರೆ ಅದೇ ನಗರ ಪ್ರದೇಶಗಳಿಗೆ ಇನ್‌ಕ್ಯುಬೇಟರ್ ವ್ಯವಸ್ಥೆಗೆ ಪ್ಲ್ಯಾನ್ ಮಾಡಿಕೊಂಡಿದ್ದೀರಿ. ಶರೀರದಲ್ಲಿ ಇಟ್ಟುಕೊಂಡು ಕಷ್ಟ ಪಡುವ ಬದಲು ಇನ್‌ಕ್ಯುಬೇಟರ್‌ನಲ್ಲಿಟ್ಟು ಸಾಕೋಣ ಎಂದು ಆಲೋಚನೆ ಮಾಡುವುದು ಒಂದು ಕಡೆಯಾದರೆ, ಹೆರಿಗೆ ಹೇಗೆ ಮಾಡಿಸುವುದು ಯಾರೂ ಇಲ್ಲವಲ್ಲ ಎಂದು

ಗೋಳಾಡುತ್ತಿರುವ ತಾಯಂದಿರು ಇನ್ನೊಂದು ಕಡೆ ಇದ್ದಾರೆ. ಈ ಎಲ್ಲಾ ಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ಕನಿಷ್ಠ ಸೌಲಭ್ಯಗಳನ್ನು ನಮ್ಮ ಜನರಿಗೆ ಒದಗಿಸಿಕೊಡುವ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕಾಗಿತ್ತು. ಇವೊತ್ತೂ ಕೂಡ ಅನೇಕ ಆಸ್ಪತ್ರೆಗಳಲ್ಲಿನ ಅವ್ಯವಸ್ಥೆಯನ್ನು ಹೇಳುವುದೂ ಕಷ್ಟವಾಗುತ್ತದೆ. ನಮ್ಮ ತುಮಕೂರು ಜಿಲ್ಲಾ ಆಸ್ಪತ್ರೆಗಳಲ್ಲಿ ಎಲ್‌ಎಂಓಗಳನ್ನು ಹಾಕಲೇ ಇಲ್ಲ. ಇವೊತ್ತು ನೀವು ಒದಗಿಸಿರುವ ಕಾಂಟ್ರಾಕ್ಟ್ ಡಾಕ್ಟರ್‌ಗಳು ದಿನವಿಡಿ ಕೆಲಸ ಮಾಡುತ್ತಾ ಇಲ್ಲ. ಇವೆಲ್ಲವನ್ನೂ ನೀವು ಆಲೋಚನೆ ಮಾಡಬೇಕು. ಎಲ್ಲಿ ತಪ್ಪಿದ್ದೀರಿ ಎಂಬುದನ್ನು ಕಂಡುಕೊಳ್ಳಬೇಕು. ಯಾರೋ ಸಂಸ್ಥೆಯವರು ಸಾಲವನ್ನು ಕೊಟ್ಟರು, ನೀವು ಆಸ್ಪತ್ರೆ ಕಟ್ಟಡಗಳನ್ನು ಕಟ್ಟುತ್ತಾ ಇದ್ದೀರಿ. ಆದರೆ ಅಲ್ಲಿಗೆ ಔಷಧಿಯನ್ನು ಸಾಕಾಗುವಷ್ಟು ಕೊಟ್ಟಿದ್ದೀರಾ, ಅಲ್ಲಿನ ಸಮಸ್ಯೆಗಳಿಗೆ ಪರಿಹಾರವೇನಾದರೂ ಒದಗಿಸಿಕೊಟ್ಟಿದ್ದೀರಾ? ಹಳದಿ ಕಾರ್ಡ್ ಕೊಟ್ಟು ಅವರಿಗೆ ಉಚಿತವಾದ ಸೇವೆಯನ್ನು ಕೊಡುತ್ತೇವೆ ಎಂದು ಹೇಳಿಬಿಟ್ಟಿದ್ದೀರಿ. ಆದರೆ ಅಂಥವರಿಗೆ ಸೇವೆಯು ಲಭ್ಯವಾಗಿದೆ ಎಂದು ನೋಡಿದ್ದೀರಾ? ಖಂಡಿತವಾಗಿಯೂ ಇಲ್ಲ, ಆದಕ್ಕೆ ಬೇಕಾಗುವಷ್ಟು ಹಣದ ಲಭ್ಯವಾಗಿಲ್ಲ. ಡಾಕ್ಟರ್‌ಗಳು ಹಳದಿ ಕಾರ್ಡ್‌ನವರಿಗೂ ಕೂಡ ಉಚಿತವಾಗಿ ಔಷಧಿಗಳನ್ನು ಕೊಡುತ್ತಾ ಇಲ್ಲ. ಇನ್ನೊಂದು ಕಡೆ ಸಂಬಳಸಾರಿಗೆಗಳ ಹೆಚ್ಚಳವಾಗುತ್ತಾ ಇದೆ. ಸ್ವಾಮಿ ತಾವು ಕೂಡ

5.20 ಪಿ.ಎಂ.

ಸಮಾಜವಾದಿ ಸಿದ್ಧಾಂತವನ್ನು ಒಪ್ಪಿಕೊಂಡಿದ್ದೀರಿ. ಯಾವುದೇ ಸಿದ್ಧಾಂತದ ಕೆಳಗೆ ಒಬ್ಬ ಮನುಷ್ಯನ ವರಮಾನ ಇನ್ನೊಬ್ಬನ ವರಮಾನಕ್ಕೆ ಅಂತರ ಬಹಳ ಆಗಬಾರದು ಇವತ್ತು ನಿಮ್ಮಲ್ಲೇನಾಗಿದೆ, 30, 40, ಸಾವಿರ ಸಂಬಳ ತೆಗೆದುಕೊಳ್ಳುವ ಅಧಿಕಾರಿಗಳು ಒಂದು ಕಡೆ 3, 4, 2 ಸಾವಿರ ಸಂಬಳ ತೆಗೆದುಕೊಳ್ಳುವ ಅಧಿಕಾರಿಗಳು ಒಂದು ಕಡೆ. ತಮ್ಮಿಂದ ನಾನು ನೀರಿಕ್ಷೆ ಮಾಡಿರಲಿಲ್ಲ. ದೊಡ್ಡವರದ್ದು ಸ್ವಲ್ಪ ಕಟ್ ಮಾಡಿ. ಅವರು ಏನೂ ಉಪವಾಸ ಮಲಗಿಕೊಳ್ಳುವುದಿಲ್ಲ. ಮಾಡಲೇಬೇಕು ಅಂದರೆ ಕೆಳವರ್ಗದ ಜನರಿಗೆ ಏನಾದರೂ ಸಹಾಯಮಾಡಿ. ಇದರ ಬಗ್ಗೆ ನೀವು ಚಿಂತನೆ ಮಾಡಿರುವ ಸೂಚನೆಗಳಿಲ್ಲ. ಮೇಲುಗಡೆಯವರಿಗೇ ಕೊಟ್ಟುಕೊಂಡು ಹೋಗುತ್ತೀರಿ. ಮತ್ತೆ 20 ಸಾವಿರ ಜಾಬ್‌ಗಳನ್ನು ನಾವು ಕಡಿಮೆ ಮಾಡುತ್ತೇವೆ ಅಂತೀರಿ. ಸಾರ್ ಪ್ರಮೋಷನ್ಸ್ ಎಷ್ಟು ಆಗುತ್ತಿದೆ? ಯಾಕೆ ಆಗುತ್ತಿದೆ? ಇದು ನಮಗೆ ಅರ್ಥವಾಗುತ್ತಿಲ್ಲ. ನಾವು ಅನೇಕ ಸಲ ಹೇಳಿದ್ದೇವೆ. ಅನೇಕ ಅನಗತ್ಯ ದೊಡ್ಡ ಹುದ್ದೆಗಳನ್ನು ಮೊದಲು ರದ್ದುಮಾಡಿಬಿಡಿ ಎಂದು. ಡಿವೈಎಸ್‌ಪಿ, ಅಡಿಷನಲ್ ಎಸ್‌ಪಿ ಡಿಸಿ ಎಕ್ಸೈಜ್ ತೆಗೆಯಿರಿ. ಏನು ಮಾಡುತ್ತಿದ್ದಾರೆ ಸಾರ್ ಅವರು.

ಶ್ರೀ ಸಿದ್ದರಾಮಯ್ಯ :— ಕೆಲವು ಡಿವಿಷನಲ್ ಕಮಿಷನರ್‌ಗಳು ಸೇರಿವೆ. ಹಾಗೇನೇ ಕೆಲವು ಉಪಕಾರ್ಯದರ್ಶಿಗಳು ಸೇರಿವೆ. ಕೆಲವು ಡಿವಿಜನಲ್ ಲೆವೆಲ್ ಆಫಿಸರ್ಸ್ ಪೋಸ್ಟ್‌ಗಳೂ ಸೇರಿವೆ. ಕೆಲವು ಕಡೆ ಅಡಿಷನಲ್ ಎಸ್‌ಪಿಗಳು ಸೇರಿವೆ. ಆ 20 ಸಾವಿರದಲ್ಲಿ ಎಲ್ಲೆಲ್ಲಿ ಅನಗತ್ಯ ಹುದ್ದೆಗಳು ಇವೆಯೋ ಅವೆಲ್ಲಾ ಸೇರಿವೆ.

ಶ್ರೀ ಜೆ.ಸಿ ಮಾಧುಸ್ವಾಮಿ :— ಜಿಲ್ಲೆಗಿಬ್ಬರು ಡಿಡಿಪಿಐಗಳು, ಜಿಲ್ಲೆಗೊಬ್ಬ ಜಂಟಿ ನಿರ್ದೇಶಕರು ಕಡತಿ, ಇದನ್ನೆಲ್ಲಾ ನೀವು ಬಂದ ಮೇಲೇ ಮಾಡಿರುವುದು. ಕನಿಷ್ಠ ಇಬ್ಬರು ಡಿಡಿಪಿಐ ಮಾಡುದ್ದು ನಿಮ್ಮ ಸರ್ಕಾರವೇ. ಕೃಷಿ ಜಂಟಿ ನಿರ್ದೇಶಕ ಹುದ್ದೆಯನ್ನು ಜಿಲ್ಲೆ ಮಟ್ಟಕ್ಕೆ ಇಳಿಸಿದವರು ನೀವೇ. ಉಪನಿರ್ದೇಶಕ ಸಾಕಾಗಿತ್ತು. ಈಗ ಜಿಲ್ಲೆಗಿಬ್ಬರು ಉಪನಿರ್ದೇಶಕರು ಕೃಷಿಗೆ. ಏಕೆ ಮಾಡಿದಿರಿ ನಮಗೆ ಅರ್ಥವಾಗಲಿಲ್ಲ. ಏನು ಕೆಲಸ ಕೊಡುತ್ತೀರಿ ಅರ್ಥವಾಗುವುದಿಲ್ಲ. ಫಾರೆಸ್ಟ್‌ನಲ್ಲಿ, ನಿಮ್ಮ ಎಸಿಎಫ್‌ಗಳಿಗೇನು ಕೆಲಸ? ಫಾರೆಸ್ಟ್‌ನಲ್ಲಿ ಇವತ್ತು ಮೂರು ಮೂರು ಜನ ಡಿಎಫ್‌ಓಗಳಿದ್ದಾರೆ. ಇವತ್ತು ನಮಗೆ ಶೇಕಡ 11ರಷ್ಟು ಅರಣ್ಯವೂ ಇಲ್ಲ ಇಲಾಖೆ ಒಪ್ಪಿಕೊಳ್ಳುತ್ತದೆ. ಫಾರೆಸ್ಟ್ ಇನ್‌ವೆಸ್ಟ್‌ಮೆಂಟ್ ಜಾಸ್ತಿಯಾಗುತ್ತಿದೆ, ಗ್ರೋತ್ ಕಡಿಮೆಯಾಗುತ್ತಿದೆ. ಅಕಸ್ಮಾತ್ ಅಲ್ಪಸ್ವಲ್ಪ ಕೆಲಸ ಆಗುತ್ತಿದ್ದರೆ ಸೋಷಿಯಲ್ ಫಾರೆಸ್ಟ್ರಿಯಲ್ಲಿ ಆಗುತ್ತಿದೆ, ಜನಕ್ಕೂ ಮರಗಿಡ ಬೆಳೆಸಬೇಕೆಂಬ ಭಾವನೆ ಬಂದಿದ್ದರಿಂದ ಇದಾಗುತ್ತಿರುವುದು ಬಿಟ್ಟರೆ ಹಣವೆಲ್ಲಾ ಖರ್ಚಾಗುತ್ತಿದೆ. ಈ ಫಾರೆಸ್ಟ್ ಇಲಾಖೆ ಖರ್ಚಿನ ಬಗ್ಗೆ ಯಾವತ್ತಾದರೂ ಕುಳಿತು ಮೌಲ್ಯಮಾಪನ ಮಾಡಬೇಕು. ಹೈಯರ್ ಕೇಡರ್‌ನಲ್ಲಿ ಬಹಳ ಹಣ ಹೋಗುತ್ತಿದೆ. ಆದೇ ಆರ್‌ಎಫ್‌ಓಗಳಿಗೆ ಒಂದು ಬಂದೂಕು ಕೇಳಿದರೆ ಕೊಡಿಸೋಲ್ಲ ಅಂತೀರಿ. ಅಲ್ಲಿ ಯಾವುದಾದರೂ ವೈಲ್ಡ್‌ಪ್ರಾಣಿ ಬಂದರೆ ರಕ್ಷಣೆಗಿಲ್ಲ. ಈ ಸ್ಥಿತಿ ಬಗ್ಗೆ ಯೋಚನೆ ಮಾಡಬೇಕಾಗಿದೆ. ತಾವು ದಯಮಾಡಿ ಗಮನಹರಿಸಬೇಕು. ನೌಕರಿ ಮಾಡುತ್ತಿರುವವರಲ್ಲಿ ಅಂತರ ಏನಿದೆ, ಕೆಳಗಡೆಯವರಿಗೂ ಮೇಲಿನವರಿಗೂ ಸಂಬಳದಲ್ಲಿರುವ ತಾರತಮ್ಯ ಕಡಿಮೆ ಮಾಡಬೇಕು. ಮತ್ತೆ ಒಂದು ಪಾಲಿಸಿ ಆಗಬೇಕು. ಯಾರೋ ರೈಸ್ ಮಾಡಿದರು ಅಂದರೆ ನಾವು ರೈಸ್ ಮಾಡುವ ಸ್ಥಿತಿ ತಂದಿಟ್ಟುಕೊಂಡಿದ್ದೇವೆ. ಇವತ್ತು ವಿಶ್ವವಿದ್ಯಾಲಯಗಳಲ್ಲೇನಾದರೂ ಸಂಬಳ ಕೊಡುತ್ತಿರುವುದನ್ನು ಲೆಕ್ಕಾ ಹಾಕಿಕೊಂಡು ನಾಳೆ ಏನಾದರೂ ಕಾಲೇಜಿನವರಿಗೆ ಅದೇ ಸಂಬಳ ಕೊಡುತ್ತೇವೆ ಅಂದರೆ ನಿಮ್ಮ ಖಜಾನೇಲಿ ದುಡ್ಡಿರುವುದಿಲ್ಲ. ಟೀಚರ್ಸ್ ಜಾಸ್ತಿ ಮಾಡಿದ್ದೇವೆ ಎಂದು ಈವತ್ತು ಹೇಳುತ್ತಿದ್ದೀರಿ. ಸ್ಕೀಂ ವೈಂಡ್ ಆಫ್ ಆಗಿ ನಾಳೆ ಸಂಬಳ ಎಲ್ಲಾನೂ ನೀವೇ ಕೊಡಬೇಕೆಂದು ಹೇಳಿದಾಗ ಕೊಡಲು ದುಡ್ಡಿರುವುದಿಲ್ಲ. ಡ್ಯಾನಿಡಾ ಸ್ಕೀಮ್ ಬಗ್ಗೆ ಬಹಳ ಚೆನ್ನಾಗಿ ಇಲ್ಲಿ ಭಾಷಣದಲ್ಲಿ ಹೇಳಿದ್ದೀರಿ. ಡ್ಯಾನಿಡಾ ಸ್ಕೀಂ ವೈಂಡ್ ಆಫ್ ಆದಾಗ ಲೇಡಿ ಕೃಷಿ ಅಧಿಕಾರಿಗಳಿಗೆ ಮೂರು ನಾಲ್ಕು ತಿಂಗಳು ಸಂಬಳ ಸಿಕ್ಕಲಿಲ್ಲ. ಏಕೆಂದರೆ ಇಲ್ಲಿ ನೀವು ಪ್ರಾವಿಶನ್ ಮಾಡಿಕೊಂಡಿಲ್ಲ. ದಿಡೀರ್ ಎಂದು ಗ್ರಾಂಟನ್ನು ನಿಲ್ಲಿಸಿಬಿಟ್ಟರೆ.. ಅಧ್ಯಕ್ಷರೇ, ಈ ಗ್ರಾಮಿಣಾ ಬದುಕಿನ ಬಗ್ಗೆ ಹೆಚ್ಚು ಒತ್ತನ್ನು ಮಾನ್ಯ ಸಿದ್ದರಾಮಯ್ಯನವರು ಕೊಡಬೇಕಾಗಿತ್ತು ಎಂದು ಕೇಳಿ ಕೆಲವು ಅನುಪಯುಕ್ತ ಕಾರ್ಯಕ್ರಮ, ಇಲಾಖೆಗಳನ್ನೇ ತಾವು ಮುಚ್ಚುವ ತೀರ್ಮಾನ ಮಾಡಬೇಕಾಗಿತ್ತು. ನಾನು ಯಾರನ್ನೂ ದೂಷಣೆಮಾಡಿ ಮಾತನಾಡುವುದಿಲ್ಲ. ತಮ್ಮ ಕಾಲದಲ್ಲಿ ತಮಗೆ ಭಾರಿ ದೊಡ್ಡ ಹೆಸರೇನು ಬಂದಿದೆ, ಲೆಜಿಸ್ಲೇಚರ್ ಕೂಡ ಎರಡು ಸೆಕ್ರೆಟರಿಯೇಟಾಗಿದೆ. ಇಲ್ಲಿ 224, ಅಲ್ಲಿ 75 ಸದಸ್ಯರಿಗೆ 800 ಸಿಬ್ಬಂದಿ ಇದೆ. ನಾವು ಮಾಡಲ್ ಆಗಿರಬೇಕು. ಒಬ್ಬೊಬ್ಬ ಎಂಎಲ್‌ಎ

ಎಂಎಲ್‌ಸಿಗೆ ಮೂರು ಸಿಬ್ಬಂದಿಗಳ ಅಗತ್ಯ ಇತ್ತೇ ಎಂದು ಕೇಳಬೇಕಾಗುತ್ತದೆ. ನಾನು ಈ ಶಾಸನಸಭೆಗೆ ಗೌರವ ಕೊಟ್ಟು ಮಾತನಾಡುತ್ತಿದ್ದೇನೆ. ಇಡೀ ದೇಶದಲ್ಲಿ ಲೆಜಿಸ್ಲೇಚರ್‌ನಲ್ಲಿ ಎರಡು ಕಾರ್ಯಾಲಯಗಳು. ಇದೂ ನೀವು ಕೊಡೋ ಹಣನೇ. ಇದೇನು ಆಕಾಶದಿಂದ ಸುರಿಯುವ ಹಣವಲ್ಲ. ಅಗತ್ಯ ಇತ್ತಾ? ಅಲ್ಲಿಗೊಬ್ಬ ಸೆಕ್ರೆಟರಿ, ಇಲ್ಲಿಗೊಬ್ಬ ಸೆಕ್ರೆಟರಿ, ಅಲ್ಲಿಗೊಬ್ಬ ಅಡಿಷನಲ್ ಸೆಕ್ರೆಟರಿ, ಇಲ್ಲಿಗೊಬ್ಬ ಅಡಿಷನಲ್ ಸೆಕ್ರೆಟರಿ, ಅಗತ್ಯ ಇತ್ತಾ? ಫೀಲ್ಡ್‌ನಲ್ಲಿರುವ ಸ್ಟಾಫ್ ತೆಗೆಯಲು ತಮಗೆ ಗೊತ್ತಾಗುತ್ತದೆ. ಇಲ್ಲಿ ಸಾರ್? ಇಲ್ಲಿಂದ ಶುರುಮಾಡಿ ಸಾರ್. ಯಾವ ಸುಧಾರಣೆಯೂ ಇಲ್ಲಿಂದ ಆರಂಭವಾಗಲಿ. ನಾನು ಇದನ್ನು ಖಂಡಿತ ಯಾರನ್ನು ಟೀಕೆ ಮಾಡುವುದಕ್ಕೆ ಆಡುತ್ತಿಲ್ಲ. ಸುಧಾರಣೆನೇ ಮಾಡುತ್ತೇವೆ ಅಂದರೆ ಇಲ್ಲಿಂದ ಆರಂಭವಾಗಬೇಕು. ಖಂಡಿತಾ ನಮ್ಮ ವಿಧಾನಸೌಧದಲ್ಲಿ ಇವತ್ತು ಇಷ್ಟು ಸಿಬ್ಬಂದಿ ಅಗತ್ಯ ಇಲ್ಲ ಸಾರ್. ನೀವು ಇಲ್ಲಿಂದ ಆರಂಭಮಾಡಿ ಏತಕ್ಕೆ ಇಷ್ಟೊಂದು ಜನ? ಏನು ಮಾಡುವುದಕ್ಕೆ? ನಾಳೆ ಜನರಿಗೆ ನಾವು ಉತ್ತರಬಲೇ? ನಾಳೆ ಉತ್ತರ ಹೇಳಬೇಕಾಗುತ್ತದೆ. ಒಬ್ಬ ಎಂಎಲ್‌ಎಗೆ ನಾಲ್ಕು ಜನ ಸಿಬ್ಬಂದಿ ಇದ್ದಾರೆ ಅಂದರೆ ಏನು ಅರ್ಥ ಇವತ್ತು? ಆ ಕಡೆ ಯೋಜನೆ ಮಾಡಬೇಕು. ಎರಡನೆಯದು, ಇವತ್ತು ಡಿಸ್ಪ್ಯಾರಿಟಿ. ಬಹುಶ ನಿಮಗೆ ಗೊತ್ತು, ಕೇಂದ್ರ ಸರ್ಕಾರಿ ನೌಕರರು, ರಾಜ್ಯ ಸರ್ಕಾರಿ ನೌಕರರು. ಯಾವುದೋ ಆಸೆಗೆ ಯಾರೋ ಸಂಬಳ ಜಾಸ್ತಿ ಮಾಡಿದರೆ ನಾವು ಸಂಬಳ ಜಾಸ್ತಿ ಮಾಡಬೇಕಾ? ಆದರೆ ಬೇರೆ ದಿಕ್ಕಿನಲ್ಲಿ ಯೋಚನೆ ಮಾಡಿ. ಸಾರ್, ಇವತ್ತು ನಿಮ್ಮ ದೂರದರ್ಶನದವರು ಟ್ಯಾಕ್ಸಿನಲ್ಲಿ ಬರಬೇಕು. ಆದರೆ ನಮ್ಮ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳು ಕಾರ್‌ನಲ್ಲಿ ಹೋಗುತ್ತಾರೆ. ಅವರಿಗೆ ನಾವು ಸ್ಟೇಟ್ಸ್‌ನಲ್ಲಿ ಕೊಟ್ಟಿರುವ ಬೆನಿಫಿಟ್ ಬಗ್ಗೆ ಅವರೆಂದೂ ಮಾತನಾಡಲಿಲ್ಲ. ಸಂಬಳದ್ದೊಂದು, ಕೇಂದ್ರ ಸರ್ಕಾರ ಹೆಚ್ಚು ಮಾಡಿತು, ನೀವು ಹೆಚ್ಚು ಮಾಡಿರಿ ಅನ್ನುವುದನ್ನು ಬಿಟ್ಟರೆ ಇಲ್ಲಿ ಕಾರ್‌ನಲ್ಲಿ ಹೋಗುತ್ತಿದ್ದರೆ ಅಲ್ಲಿ ಯಾವ ವಾಹನವೂ ಇಲ್ಲ, ಕನಿಷ್ಠ ಎಸ್ಟಾಬ್ಲಿಷ್‌ಮೆಂಟ್‌ನಲ್ಲಾದರೂ ಅವರು ಸೇವ್ ಮಾಡಿದ್ದಾರೆ. ಕೇಂದ್ರ ಸರ್ಕಾರ ಕಛೇರಿಗಳೇನಿವೆ ಅಲ್ಲಿ ನಿಮ್ಮ ಕಛೇರಿಯಷ್ಟು ಖರ್ಚು ಆಗುವುದಿಲ್ಲ, ಅವರು ಲಗ್ಜುರಿಯಸ್ಸಾಗಿ ಆಫೀಸ್‌ಗಳನ್ನು ಮೇನ್ಟೆನ್ ಮಾಡುತ್ತಿಲ್ಲ. ಅದರ ಅಗತ್ಯವಿಲ್ಲ, ಗೊತ್ತು ಅವರಿಗೆ. ಕೈಗೊಂದು ಕಾರು, ಕಾಲಿಗೊಂದು ಕಾರು. ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳು ಈ ರಾಜ್ಯದಲ್ಲಿ ಕಾರಿನಲ್ಲಿ ಓಡಾಡುತ್ತಿದ್ದಾರೆ. ಏನು ಇವರು ಕಾರಿನಲ್ಲಿ ಸೈಟ್ ನೋಡುವುದಕ್ಕೆ ಆಗುತ್ತದೆ? ಜಿಲ್ಲಾ ಪಂಚಾಯಿತಿಗಳಲ್ಲಿ ಮುಂದೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಿಗೆ ಕಾರ್ ಟ್ರಾನ್ಸ್‌ಫರ್ ಆಗುತ್ತದೆ. ಏತಕ್ಕೆ ಹೊಸ ಕಾರ್ ತೆಗೆದುಕೊಳ್ಳಬೇಕು ನೋಡಿ. ನೀವು ವಾಹನಗಳನ್ನು ಕಡಿತ ಮಾಡುತ್ತೇವೆ ಎಂದು ಹೇಳಿದ ಮಾತಿಗಾಗಿ ನಾನು ಹೇಳುತ್ತಿದ್ದೇನೆ. ನೀವು ಅವಲೋಕನ ಮಾಡಬೇಕು. ಎಕ್ಸಿಕ್ಯೂಟಿವ್ ಇಂಜಿನಿಯರ್ಸ್ ಡಿಎಫ್‌ಓಸ್ ಕಾರ್‌ನಲ್ಲಿ ಹೋಗಲು ಆಗುತ್ತದೆಯಾ? ಕಾಡೊಳಗೆ, ಗುಡ್ಡದೊಳಗೆ, ಎಲ್ಲೋ ಸೈಟಿಗೆ, ಬರೀ ಸ್ಟೇಟಸ್‌ಗೆ ಹೋಗುತ್ತೇವೆ ಅಂದರೆ ನನ್ನದೇನಿಲ್ಲ. ವಾಸ್ತವವಾಗಿ ಅವರು ಮಾಡುವ ಕೆಲಸಕ್ಕೆ ಆ ವಾಹನ ಲಾಯಕ್ಕಾಗಿದೆಯಾ? ನೋಡಿ. ಅದು ಮಾಡದೆ

ಎಲ್ಲರಿಗೂ ಕಾರು, ಗೂಟ, ಈಗ ಬಿಡಿ, ಅಸಿಸ್ಟೆಂಟ್ ಕಮೀಷನರ್‌ರಿಂದ ಹಿಡಿದು ಎಲ್ಲರಿಗೂ ಮೇಲುಗಡೆ ಲೈಟ್ ಕೊಟ್ಟುಬಿಟ್ಟಿದ್ದೀರಿ. ಏಕೆ ಕೊಟ್ಟಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಜನಕ್ಕೆ ಬಾರಿ ಗೊಂಲ, ಅಂಬುಲೆನ್ಸ್ ಯಾವುದೋ ಎಸಿ ಕಾರ್ ಯಾವುದೋ, ಡಿಸಿ ಕಾರ್ ಯಾವುದೋ, ಎಸ್‌ಪಿ ಕಾರ್ ಯಾವುದೋ, ನಿಮ್ಮ ಅಧ್ಯಕ್ಷರುಗಳ ಕಾರ್ ಯಾವುದೋ, ಎಲ್ಲಾ ಕೆಂಪಗೆ ಬಣ್ಣ, ನೀವೇ ರೆಡ್ ಡೇಂಜರ್, ಯಾವಾಗಲೂ ಆ ಡೆಂಜರ್‌ನಲ್ಲೇ ಇದ್ದೀರಿ. ಆ ಡೇಂಜರ್ ಲೈಟ್ ತೆಗೆಸಿ. ಯಾವುದಾದರು ಒಂದು ಲೈಟ್ ಹಾಕಿಸಿ ಸಾರ್. ನಮ್ಮ ನಂಜುಂಡಸ್ವಾಮಿಯವರು ಒಂದು ಹಸಿರು ಲೈಟ್ ಹಾಕ್ಕೊಂಡು ತಿರುಗುತ್ತಿದ್ದರು, ರೈತ ಸಂಘದಲ್ಲಿದ್ದಾಗ. ಹಾಗೆ ಬೇರೆ ಬಣ್ಣದ ಲೈಟ್ ಹಾಕಿಸಿಬಿಟ್ಟರೆ ಈ ಸರ್ಕಾರ ಡೇಂಜರ್ ಅಲ್ಲ ಎಂದು ಅನಿಸುತ್ತದೆ. ಇಲ್ಲದೇ ಇದ್ದರೆ ಡೇಂಜರೇನೆ. ದಯಮಾಡಿ ಇದನ್ನು ಕಡಿತ ಮಾಡಬೇಕು. ಇನ್ನು ತಮಗೆ ವರಮಾನಗಳ ಮೂಲ. ಸಾರ್, ನಾನು ನಿಮ್ಮ ಬಗ್ಗೆ ಭಾರಿ ಅಭಿಮಾನ ಗೌರವ ಇಟ್ಟುಕೊಂಡಿರುವವನು. ತಮಗೆ ಅಬ್ಕಾರಿಯಿಂದ ಬರಬೇಕಾದ ಹಣ, ಅದರಲ್ಲೂ ಲಿಕರ್ ಲಾಬಿಯಿಂದ ಬರಬೇಕಾಗಿರುವ ಹಣದಲ್ಲಿ ಕನಿಷ್ಠ 30ರಿಂದ 40 ಪರ್ಸೆಂಟ್ ಹೋಗುತ್ತಿದೆ. ಎವೇಷನ್ ಆಗುತ್ತಿದೆ. ನೀವು ಇದನ್ನು ಒಪ್ಪಿಕೊಳ್ಳಲೇಬೇಕು. ನೀವು ತರಿಸಬೇಕು. ಈ ರಾಜ್ಯದಲ್ಲಿರುವ ಉತ್ಪಾದನಾ ಸಾಮರ್ಥ್ಯವೆಷ್ಟು? ಬಿಎಂಎಲ್ ಐಎಂಎಫ್‌ಎಲ್ ಬಿಯರನ್ನು ಉತ್ಪಾದಿಸಬೇಕಾದ ಸಾಮರ್ಥ್ಯವೆಷ್ಟು? ಅವರು ಬಳಸುತ್ತಿರುವ ನ್ಯೂಟ್ರಲ್ ಸ್ಪಿರಿಟೆಷ್ಟು ರೆಕ್ಟಿಫೈಡ್ ಸ್ಪಿರಿಟೆಷ್ಟು? ಉತ್ಪಾದನೆ ತೋರಿಸುತ್ತಿರುವುದೆಷ್ಟು? ನಾನು ತಮ್ಮ ಮುಂದೆ ಒಂದು ಪತ್ರ ಓದುತ್ತೇನೆ: 5-9-98ರಲ್ಲಿ ದೊಡ್ಡಬಳ್ಳಾಪುರದಲ್ಲಿ ಆ ರೇಂಜ್‌ನಲ್ಲಿ ಇನ್ಸ್‌ಪೆಕ್ಟರ್ ಆಫ್ ಎಕ್ಸೈಜ್ ಮಾಡಿರುವ ರೈಡ್‌ನಲ್ಲಿ ಹೇಳುತ್ತಾರೆ.

"Illegal procurement, possession, transaction and sale of 1,95,739 litres of non-duty paid IML of JPN Quawasji Distilleries, Bangalore by evading the Excise duty and Sales Tax etc.,

Illegal procurement and sale of 42,211 litres of non duty paid IML and 9858 litres of Beer in excess of the books of accounts and wilful creation of shortage of 20879 litres of Beer, thus evading excise duty, Sales Tax etc.,

Wilful creation of shortages of 39,135 litres of IML and 2,14,613 litres of Beer by submitting incorrect monthly consumption statements, thus evading last point Sales Tax and Surcharge in voilation

of Sections 11, 13 and 14 read with 32, 34, 35, 36, 39 and 41 off K.E. Act, 1965." ಏನು ಸಾರ್ ಇದು. ಒಂದು ತಾಲ್ಲೂಕಿನಲ್ಲಿ ಇಷ್ಟು ಲಕ್ಷ. ನಿಮ್ಮವನು ಹಾಕಿರುವ ಎಫ್.ಐ.ಆರ್. ಕಾಪಿ ಕೋರ್ಟ್ ಮುಂದಿದೆ. ಇಂಥ ಎಷ್ಟು ಲಕ್ಷಗಳು ಇವತ್ತು ಎವೇಷನ್ ಆಗಿದೆ ಎಂದು ಉತ್ತರ ಕೊಡುತ್ತೀರಾ. ಇದರಲ್ಲಿ ನಾನು ಯಾರನ್ನು ದೂರಲಿಕ್ಕೆ ಹೋಗುವುದಿಲ್ಲ.

This is the F.I.R. filed by Mr. S. Mariswamy, Instector of Excise, Doddaballapur Range, Doddaballapur ಆಮೇಲೆ ಬೀಳಗಿಯಲ್ಲಿ ನನಗೆ ಯಾರೋ ಮಾಹಿತಿಯನ್ನು ಕೊಟ್ಟರು. ಜಮಖಂಡಿ, ಮುಧೋಳ್‌ನಲ್ಲಿ ಎಕ್ಸೈಜ್ ಪ್ರಾಪರ್ಟಿ ಹರಾಜು ಆಗಿದೆ. 20 ಲಕ್ಷ ರೂಪಾಯಿಗಳನ್ನು, ಕಟ್ಟಬೇಕಾಗಿತ್ತಂತೆ. ಟೋಟಲ್ ಡ್ಯೂಸ್ 90 ಲಕ್ಷ ತಮಗೆ ಗೊತ್ತು. ಅದನ್ನು ಹರಾಜು ಮಾಡಿದರೆ ಇವತ್ತಿನವರೆಗೆ ಆ ಲ್ಯಾಂಡನ್ನು ಪೊಸಿಷನ್‌ಗೆ ತೆಗೆದುಕೊಳ್ಳುವುದಕ್ಕೆ ಬಿಡುವುದು ಬೇಡ ಎಂದು ಮೇಲಿಂದ ಆದೇಶ ಇದೆ ಎಂದು ಹೇಳುವ ಸ್ಥಿತಿಗೆ ಬಂದರೆ ಎಲ್ಲಿಂದ ಈ ರಾಜ್ಯಕ್ಕೆ ರೆವೆನ್ಯೂ ಬರುತ್ತದೆ?

ಮೇಡಂ, ಶುರುಮಾಡಿದ್ದೇನೆ, ಮಾತನಾಡಬೇಡಿ ಎಂದರೆ ಆಗುವುದಿಲ್ಲ. ಅದು ಅಪ್ರಸ್ತುತ ಎಂದರೂ ಮಾತನಾಡುವುದಿಲ್ಲ. ಈ ರಾಜ್ಯಕ್ಕೆ ಬರಬೇಕಾಗಿರುವ ರೆವೆನ್ಯೂ ಹೀಗೆ ಎವೇಡ್ ಆಗುತ್ತಿದೆ ಎಂದಾಗ ತಾವು ಬೆಲ್ ಮಾಡುವ ಸ್ಥಿತಿಗೆ ಬಂದರೆ ತಮಗೆ ಕನ್ನಡ ಬರುವುದಿಲ್ಲ ಎಂದು ನಾನು ತಿಳಿದುಕೊಳ್ಳಬೇಕಾಗುತ್ತದೆ.

ಛೇರ್ಮನ್ :— ಇನ್ನು ಎರಡು-ಮೂರು ಜನರು ಮಾತನಾಡುವವರು ಇದ್ದಾರೆ. ಆ ರೀತಿಯಲ್ಲಿ ಏನೂ ಇಲ್ಲ.

ಶ್ರೀ ಜಿ.ಸಿ. ಮಾಧುಸ್ವಾಮಿ :— ಸನ್ಮಾನ್ಯ ಸಿದ್ಧರಾಮಯ್ಯನವರೇ, ನಾನು ಅನೇಕ ಸಲ ಹೇಳಿದ್ದೇನೆ, ಇಬ್ಬರು-ಮೂರು ಎಕ್ಸೈಜ್ ಕಂಟ್ರಾಕ್ಟರ್‌ಗೋಸ್ಕರ ಈ ರಾಜ್ಯ ನಡೆಯುತ್ತಿದೆ ಎನ್ನುವ ಸ್ಥಿತಿಯನ್ನು ನಿರ್ಮಾಣ ಮಾಡುವುದು ಬೇಡ. ಅವರ್ಯಾರೂ ಏನೂ ಬಹುಶಃ ನಿಮ್ಮನ್ನು ನಮ್ಮನ್ನು ಸಾಕಿಲ್ಲ. ನನಗೆ ಗೊತ್ತು, ನೀವು ಯಾವ ಸಿದ್ಧಾಂತದಲ್ಲಿ ಹೋರಾಟದಲ್ಲಿ ಬಂದಿರಿ ಎಂದು. ನಿಮ್ಮ ಇಂಟೆಗ್ರಿಟಿಯನ್ನು ಪ್ರಶ್ನೆ ಮಾಡುವ ಹಂತಕ್ಕೆ ನಾನು ಇನ್ನೂ ಇಳಿದಿಲ್ಲ. ಆದರೆ ನಿಮಗೆ ಗೊತ್ತಿಲ್ಲದಂತೆ ಇವೆಲ್ಲಾ ನಡೆಯುತ್ತಿರುವುದರ ಮೇಲೆ ಸ್ವಲ್ಪ ನಿಗಾ ಇಡಬೇಕು. ನನ್ನ ತಾಲ್ಲೂಕಿನ ಕತೆಯನ್ನು ಹೇಳುತ್ತೇನೆ. ನನ್ನ ತಾಲ್ಲೂಕಿನಲ್ಲಿ ಅರ್ಕ್ಯಾಕ್ ಇವತ್ತು ಹರಾಜಾಗಿದೆ. ಅದಕ್ಕಿಂತ ಹಿಂದೆ ಎರಡು ವರ್ಷ ಸರ್ಕಾರದ ಹೆಸರಿನಲ್ಲಿ ಅವರೇ ಹರಾಜು ಮಾಡಿದ್ದಾರೆ. ಸತ್ಯವಾದ ಮಾತನ್ನು ಹೇಳುತ್ತಿದ್ದೇವೆ, ಅವರು ಮಾಡುವ ವಿಸ್ಕಿಯನ್ನು ನಂ.2ರಲ್ಲಿ ಮಾಡುವ ಒಂದೇ ಒಂದು ಕಾರಣಕ್ಕೆ ಇವತ್ತು ಆ ತಾಲ್ಲೂಕು

ಹರಾಜು ಮಾಡುತ್ತಾರೆ. ಅಲ್ಲಿ ಬಂದು ಎಲ್ಲಾ ಡಂಪ್ ಮಾಡುತ್ತಾರೆ. ಅಲ್ಲಿಂದ ಡಿಸ್ಟ್ರಿಬ್ಯೂಟ್ ಮಾಡುತ್ತಾರೆ. ಅವರದೇ ಸ್ವಂತ ವಾಹನಗಳು, ಅವರದೇ ಮಿಲಿಟರಿ ಇಟ್ಟುಕೊಂಡಂತೆ ಇಟ್ಟುಕೊಂಡು ಅವರಿಗೆ ಬೇಕಿಲ್ಲದವರನ್ನು ತಂದು ನಿಮ್ಮ ಎಕ್ಸೈಜ್ ಇನ್ಸ್‌ಪೆಕ್ಟರ್‌ಗಳಿಗೆ ಕೊಟ್ಟು ಕೇಸನ್ನು ರಿಜಿಸ್ಟರ್ ಮಾಡಿಸುತ್ತಾರೆ. ರಾತ್ರಿ ತೆಗೆದುಕೊಂಡು ಬಂದು ಎಕ್ಸೈಸ್‌ನವರು ಆಫೀಸ್‌ಗಳಿಗೆ ಹಾಕಿಕೊಳ್ಳುತ್ತಾರೆ. ಇಷ್ಟು ಹಣ ಲೂಟಿಯಾಗಿ ಹೋಗುತ್ತಿದ್ದರು ಯಾರೂ ನೋಡಲಿಲ್ಲ ಎಂದರೆ ಹೇಗೆ? ಇನ್ನು ಹೊಸದೊಂದು ಯುಗವಾಗಿದೆ ಸಿಎಲ್-9 ನ್ನು ಕೊಡುತ್ತಿದ್ದಾರೆ. ಯಾರಿಗೆ ಕೊಡುತ್ತಿದ್ದೀರಿ ಸ್ವಾಮಿ? ಟೂರಿಸಂ ಡೆವೆಲಪ್‌ಮೆಂಟ್ ಯಾರೊಂದು ಟೂರಿಸ್ಟ್ ಲಾಡ್ಜ್ ಮಾಡುತ್ತಾರೆ, ಅದರಲ್ಲಿ ಇನ್‌ಕಾರ್ಪೊರೇಟ್ ಮಾಡಿ ಒಂದು ಬಾರ್ ಅಂಡ್ ರೆಸ್ಟೋರೆಂಟ್‌ಗೆ ಸಿಎಲ್-9 ಕೊಡುತ್ತೇವೆ ಎಂದು ಹೇಳಿದ್ದೀರಿ ಮೂರು ತಿಂಗಳಿಂದ ಎಷ್ಟು ಕೊಟ್ಟಿದ್ದೀರಿ ಎಂಬ ಲೆಕ್ಕವನ್ನು ಹೇಳುತ್ತೀರಾ? ಸಿಎಲ್-9 ಗಳಿಗೆ ಲೆಕ್ಕ ಇಲ್ಲ ಸನ್ಮಾನ್ಯ ಸಿದ್ದರಾಮಯ್ಯನವರರೇ, 5 ಕಿಲೋಮೀಟರ್ ವ್ಯಾಪ್ತಿ ಎಂದು ಇಟ್ಟಕೊಂಡು 5-6-7 ಕಿಲೋಮೀಟರ್‌ವರೆಗೂ ಕೊಡುತ್ತಿದ್ದೀರಿ. ಇವತ್ತು ಕೇಳುವವರಿಗೆಲ್ಲಾ ಸಿಎಲ್-9 ಸಿಗುತ್ತಿದೆ. ತುಮಕೂರಿನಂಥ ಊರಿನಲ್ಲಿ ಏನೂ ಬಾರ್‌ಗಳಿಗೆ ರೆಸ್ಟೋರೆಂಟ್‌ಗಳಿಗೆ ಅಡಚಣೆ ಇರಲಿಲ್ಲ. ನೀವು ಟೂರಿಸಂ ಸೆಂಟರ್ ಮಾಡುವ ಜಾಗದಲ್ಲಿ ನಾವು ಇರಲಿಲ್ಲ. ಅಲ್ಲಿ ಪ್ರವಾಸದಲ್ಲಿ ಕುಡಿಸುವುದೇ ಅನಿವಾರ್ಯ ಎಂದು ಹೇಳಿದರೆ ಮತ್ತು ಅಲ್ಲಿಗೆ ಕೊಟ್ಟಿದ್ದರೆ ನಾನು ಪ್ರಶ್ನೆ ಮಾಡುತ್ತಿರಲಿಲ್ಲ. ನಗರ ಪ್ರದೇಶ ಮತ್ತು ಬೆಂಗಳೂರಿನಲ್ಲಿ ಕೂಡ ಇವತ್ತು ಟೂರಿಸಂ ಸೆಂಟರ್ ಕೆಳಗೆ ಕೊಡಬೇಕಾದ ಸಿಎಲ್-9 ರಲ್ಲಿ ಲೈಸನ್ಸ್ ಕೊಟ್ಟು ಈ ಸರ್ಕಾರ ಲಿಕ್ಕರ್ ಶಾಪ್‌ಗಳಿಗೆ ಬಾರ್‌ಗಳಿಗೆ ಲೈಸನ್ಸ್ ಕೊಡುವುದಿಲ್ಲ ಎಂದು ಹೇಳಿ ಘೋಷಣೆ ಮಾಡಿದ್ದೇವೆ ಎಂದರೆ ಇದಕ್ಕೇನಾದರೂ ಅರ್ಥ ಇದೆಯಾ? ತಾವು ಇದನ್ನು ತರಿಸಬೇಕು. ತಮ್ಮ ರಿಪ್ಲೈಯಲ್ಲಿ ಹೇಳಬೇಕು. ಈ ಮಧ್ಯೆ ಈ ವರ್ಷದಲ್ಲಿ ಫೆಬ್ರವರಿಯಿಂದ ಇಲ್ಲಿಗೆ ಸಿಎಲ್-9ಕ್ಕೆ ಎಷ್ಟು ರೆಕಮೆಂಡ್ ಆಗಿವೆ? ಯಾರು ಕೊಟ್ಟರು? ತುಮಕೂರಿಗೆ ಕೊಡುವ ಅವಶ್ಯಕತೆ ಏನಿತ್ತು? ಎಲ್ಲರೂ ಇವತ್ತು ನಮ್ಮನ್ನು ಕೇಳುತ್ತಿದ್ದಾರೆ. ಸಿಎಲ್-9ನಲ್ಲಿ ಬಾರ್ ಅಂಡ್ ರೆಸ್ಟೋರೆಂಟ್‌ಗೆ ಅವಕಾಶ ಇದೆ ಮಾಡಿಸಿಕೊಡಿ ಎಂದು ಕೇಳುತ್ತಾರೆ. ಇದನ್ನು ತಪ್ಪಿಸದೇ ಹೋದರೆ ಹೇಗೆ? ಒಂದು ಕಡೆ ಭಾಷಣ ಮಾಡುವುದು, ಇದನ್ನು ಕಡಿಮೆ ಮಾಡುತ್ತೇವೆ ಎಂದು ಹೇಳುವುದು. ಎರಡನೆಯದು ಕನ್‌ಸಂಷನ್. ಇದೇನು ಹೊಸವಿಷಯವಲ್ಲ. ನೋಡಿ ಯಾವುದೇ ವೈನ್ ಷಾಪ್‌ನವನಿಗೆ ನಿಮ್ಮವರು ಅವನು ಮಾರುತ್ತಿರುವ ವ್ಯಾಪಾರದ ಮೇಲೆ ಕಲೆಕ್ಷನ್‌ನ್ನು ನಿಮಗೆ ತರುತ್ತಿಲ್ಲ. ಕನ್‌ಸಂಷನ್‌ನ್ನು ಫಿಕ್ಸ್ ಮಾಡಿದ್ದಾರೆ. ನೀನು ಇಷ್ಟು ಲೀಟರ್ ಮಾರಲೇಬೇಕು ಎಂದು. ಅವನು ಜಾಸ್ತಿ ಮಾರುತ್ತಿದ್ದಾನೇ, ಕಡಿಮೆ ಮಾರುತ್ತಿದ್ದಾನೋ ಗೊತ್ತಿಲ್ಲ. ನೀನು ಇಷ್ಟು ಲೀಟರ್ ಮಾರಿದಕ್ಕೆ ಡ್ಯೂಟಿ ಕಟ್ಟಬೇಕು, ರಾಜ್ಯ ಸರ್ಕಾರಕ್ಕೆ ನಾವು ದುಡ್ಡು ಕೊಡಬೇಕು. ಅಷ್ಟೆ. That is not regular collection at all. ಇಷ್ಟು ಕಂಸಂಷನ್ ಎಂದು ಫಿಕ್ಸ್ ಮಾಡಿ ನಡೆಯುತ್ತಿರುವ ದಂಧೆ ಇದು ಇವತ್ತು ಈ ರಾಜ್ಯದಲ್ಲಿ ಎಕ್ಸೈಜ್ ಈ ರೀತಿ ನಡೆಯುತ್ತಿದೆ. ಇದನ್ನು

ಎಲ್ಲಿಯಾದರೂ ಸರಿಮಾಡಿ ಎಂದರೆ ಅದಕ್ಕೇನು ಮಾಡಿದರು ಎಂದರೆ ದೊಡ್ಡರರು ಬಾರ್ ಅಂಡ್ ರೆಸ್ಟೋರೆಂಟ್‌ನವರನ್ನು ಹಿಡಿದುಕೊಂಡರು. ವೈನ್ ಷಾಪೆಲ್ಲಾ 9 ಗಂಟೆಗೆ ಕ್ಲೋಸ್ ಆಗಬೇಕು. ಇನ್ನುಳಿದವರು 11-12 ಗಂಟೆಯವರೆಗೆ ತೆಗೆದುಕೊಂಡಿರಬೇಕೆ. ಏಕೆ? ಬಾರ್ ಅಂಡ್ ರೆಸ್ಟೋರೆಂಟ್‌ಗಳಿಗೆ ಬಿಸಿನೆಸ್ ಕಡಿಮೆಯಾಗುತ್ತದೆ. ಬೆಳಿಗ್ಗೆ 9ಕ್ಕೆ ತೆಗೆಯಿರಿ ಎನ್ನುತ್ತಾರೆ. ಮಧ್ಯಾಹ್ನ ಅವರಿಗೆ ಲಂಚ್ ಅವರ್ಸ್ ಇಲ್ಲ ಎನ್ನುತ್ತಾರೆ. ಅದೇ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಊಟ ಮಾಡಬಹುದಾಗಿತ್ತು. ಅವನಿಗೆ ಮಧ್ಯಾಹ್ನ ಬ್ರೇಕ್ ಅಂತೆ. ವೈನ್ ಶಾಪ್‌ಗಳಿಗೆ ಬ್ರೇಕ್ ಇಲ್ಲ. ಬೆಳ್ಳಿಗೆ 9 ರಿಂದ ರಾತ್ರಿ 9. ಬಾರ್ ಅಂಡ್ ರೆಸ್ಟೋರೆಂಟ್‌ನವರಿಗೆ ಬೆಳ್ಳಿಗೆ 9 ರಿಂದ 2-30 ಮತ್ತೆ ಸಂಜೆ 5-30 ರಿಂದ ರಾತ್ರಿ 11 ಗಂಟೆಯವರೆಗೆ. ಸಾರ್, ನೀವೇನಾದರೂ ಈ ರಾಜ್ಯದ ಜನರು ಮನೆ ಸೇರಿಕೊಳ್ಳಬೇಕು, ರಾತ್ರಿ 9 ಗಂಟೆ 10 ಗಂಟೆ ಒಳಗೆ ನಗರ ಪ್ರದೇಶದಲ್ಲಿರುವವರು ಸಂಸಾರಸ್ಥರಾಗಿ ಉಳಿಯಬೇಕೆಂದರೆ ಎಲ್ಲರನ್ನೂ 9 ಗಂಟೆಗೆ ಕ್ಲೋಸ್ ಮಾಡಿಸಿ. ಇಲ್ಲಾ ಎಲ್ಲಿ ತೆಗೆದುಬಿಟ್ಟಬಿಡಿ ರಾತ್ರಿ 11 ಗಂಟೆ, 12 ಗಂಟೆವರೆಗೂ ಕುಡಿದುಕೊಂಡಿರಲಿ. ಏಕೆ ಈ ರಿಸ್ಟ್ರಿಕ್ಷನ್. ಇಬ್ಬರೂ ಮಾಡುವುದೂ ಒಂದೇ ದಂಧೆ. ಅವನು ಮಾರುವುದೇ ಲಿಕ್ಕರ್. ಇವನು ಮಾರುವುದೇ ಲಿಕ್ಕರ್. 9 ಗಂಟೆಗೆ ಬಾಗಿಲು ಮುಚ್ಚು ಎನ್ನುವುದು. ಮುಚ್ಚಲಿಲ್ಲ ಎನ್ನುವುದು. ಕೊಂಡುಕೊಂಡು ಹೋಗುವರು ಮೊದಲೇ ಕೊಂಡುಕೊಳ್ಳಬೇಕಂತೆ. ಅದೇ ಅಲ್ಲೇ ಕುಡಿಯುವವರು 11 ಗಂಟೆಯವರೆಗೂ ಅಲ್ಲೇ ಇರಬಹುದು. ಕೊಂಡುಕೊಂಡು ಹೋಗಿ ನಾನು ಮನೆಯಲ್ಲಿ ಕುಡಿಯುತ್ತೇನೆ, ನಾನು ಗೌರವಸ್ಥ ಎನ್ನುವವನಿಗೆ 9 ಗಂಟೆ ಮೇಲೆ ಸಿಗುವ ಹಾಗೆ ಇಲ್ಲ. ಬಾರ್‌ನಲ್ಲಿಯೇ ಕುಡಿಯುತ್ತೇನೆ ಎನ್ನುವವನಿಗೆ ಮಾತ್ರ 11 ಗಂಟೆಯವರೆಗೆ ಸಿಗುತ್ತದೆ. ತಾವು ಕನಿಷ್ಟ ಈ ಕಡೆಯಾದರೂ ಗಮನ ಹರಿಸಿದ್ದಿದ್ದರೆ ಇನ್ನು 200-300 ಕೋಟಿ ರೂಪಾಯಿಗಳು ನಿಮಗೆ ವರಮಾನ ಬಂದಿರುವುದು. ಆ 200-300 ಕೋಟಿ ನಮ್ಮ ಬಯಲು ಸೀಮೆಗೆ ನೀವು ಕೊಟ್ಟಿದ್ದರೆ ನಾವು ಇಲ್ಲಿ ಧರಣಿ ಮಾಡುವುದು ತಪ್ಪುತ್ತಿತ್ತು. ಸ್ವಲ್ಪ ಆ ಕಡೆ ಗಮನ ಕೊಡಿ ಸಾರ್. ಇನ್ನು ಎರಡನೆಯದಾಗಿ ತಮಗೆ ಕೆಲವು ಇನ್ಸ್‌ಟಿಟ್ಯೂಷನ್. ಸನ್ಮಾನ್ಯ ಇಂಡಸ್ಟ್ರೀಸ್ ಮಿನಿಸ್ಟರ್ ಉತ್ತರ ಹೇಳಬೇಕಾದರೆ ನಾನು ಇಲ್ಲಿದ್ದೆ. ಇಂಡಸ್ಟ್ರೀಯಲ್ ಡೆವೆಲಪ್‌ಮೆಂಟ್ ಏರಿಯಾ ಬೋರ್ಡಿನವರು ಜಮೀನನ್ನು ತೆಗೆದುಕೊಳ್ಳುವುದು. ಅದನ್ನು ಅಭಿವೃದ್ಧಿ ಮಾಡುವುದು. ಅದಕ್ಕೆ ನಿಗಧಿ ಮಾಡಿರುವ ಧಾರಣೆ ಕಡೆ ತಾವು ಗಮನ ಹರಿಸಬೇಕು. ಇಂಡಸ್ಟ್ರೀಯಲ್ ಏರಿಯಾ ಡೆವಲಪ್‌ಮೆಂಟ್ ಈ ರಾಜ್ಯದಲ್ಲಿ ಹೇಗೆ ಕೆಲಸ ಮಾಡುತ್ತಿದೆ ಎಂದು ತಾವು ಅರ್ಥ ಸಚಿವರಾಗಿ ಒಂದು ದಿವಸ ಖುದ್ದು ಪರಿಶೀಲನೆ ಮಾಡಬೇಕು. 20-30-40 ಸಾವಿರ ರೂಪಾಯಿಗಳಿಗೆ ಮಾರಬಹುದಾದ ಒಂದೊಂದು ಜಮೀನನ್ನು ಪರ್ಸೆಂಟೇಜ್ ಬಗ್ಗೆ ಮಾತನಾಡಿಕೊಂಡು, ಕಮೀಷನ್ ಬಗ್ಗೆ ಮಾತನಾಡಿಕೊಂಡು ಎಕರೆಗೆ 3 ಲಕ್ಷ 4 ಲಕ್ಷದವರೆಗೆ ಕೊಡುತ್ತಿದ್ದಾರೆ. ಅವರು ಕೇಳಿದ್ದು ನಿಜ. ನಾನು ಕೆ.ಎಂ.ಎಫ್. ಅಧ್ಯಕ್ಷನಾಗಿದ್ದಾಗ ಕೇಳುತ್ತಿದೆ. ನೀವೇನು ನಿಗದಿ ಮಾಡುತ್ತಿದ್ದೀರಿ ಎರಡು ಲಕ್ಷ ಚಿಲ್ಲರೆ ಡೆವಲಪ್‌ಮೆಂಟ್ ಛಾರ್ಜಸ್ ಸೇರಿ ಎಂದು, ಅದೇ ಪಕ್ಕದಲ್ಲಿ ಖಾಸಗಿಯವನು

30-40 ಸಾವಿರ ರೂಪಾಯಿಗಳಿಗೆ ಒಂದು ಎಕರೆ ಜಮೀನನ್ನು ಮಾರುವುದಕ್ಕೆ ತಯಾರಾಗಿದ್ದಾನೆ. ಇದನ್ನೆಲ್ಲಾ ಇಂಡಸ್ಟ್ರೀಯಲ್ ಏರಿಯಾ ಬೋರ್ಡ್ ಕೆಳಗೆ ತಂದು ಹಾಕಿದ್ದೀರಿ, ಈಗದೇನೆ ನಡೆಯುತ್ತಿದೆ ಸಾರ್ ಆ ಬೋರ್ಡ್ ಏಕೆ ಸಾರ್ ನಮ್ಮ ಭಾರಿ ಗೌರವಸ್ಥ ಶಂಕರಲಿಂಗೇಗೌಡರಂಥವರನ್ನು ತೆಗೆದುಕೊಂಡು ಹೋಗಿ ಅಲ್ಲಿಗೆ ಹಾಕಿದ್ದೀರಿ? ನಮಗೆ ಭಾರೀ ಹೆಮ್ಮೆ ಇತ್ತು ಆತನ ಬಗ್ಗೆ, ಯಾವುದೋ ತಿಮಿಂಗಲಗಳ ಬಾಯಿಗೆ ತೆಗೆದುಕೊಂಡು ಹೋಗಿ ಇಂಥ ಅಧಿಕಾರಿಗಳನ್ನೆಲ್ಲಾ ಹಾಕಿಬಿಡುತ್ತೀರಲ್ಲಾ ಎಂದು ನನಗೆ ಇವತ್ತು ನೋವಾಗುತ್ತಿದೆ. ನಿಮಗೆ ನಾನು ಮಾಹಿತಿಯನ್ನು ಕಳುಹಿಸಿಕೊಡುತ್ತೇನೆ. Everything goes on some head. ಸೆಕ್ಯೂರಿಟ್ ಹೆಡ್‌ನಲ್ಲಿ ಸ್ಟೆನೊಗ್ರಾಫರ್ ರೆಕ್ರೂಟ್ ಆಗುತ್ತಾರೆ. ಸೆಕ್ಯೂರಿಟಿ ಹೆಡ್‌ನಲ್ಲಿ ಇಂಜಿನೀಯರ್ಸ್ ರೆಕ್ರೂಟ್ ಆಗುತ್ತಾರೆ. ಸೆಕ್ಯೂರಿಟಿ ಹೆಡ್‌ನಲ್ಲಿ ಆಫಿಸರ್ಸ್ ರೆಕ್ರೂಟ್ ಆಗುತ್ತಾರೆ. ನಾನು ಆಫಿಸ್ ಫೈಲನ್ನು ಕಳುಹಿಸಿಕೊಡುತ್ತೇನೆ. ಅವರು ಯಾರನ್ನು ಬೇಕಾದರೂ ರೆಕ್ರೂಟ್ ಮಾಡಬಹುದು. ನಾವು ದಿನಗೂಲಿ ಆಧಾರದ ಮೇಲೆ ಯಾರಾದರೂ ಇನ್ನು ಮುಂದಕ್ಕೆ ಕೆಲಸಕ್ಕೆ ತೆಗೆದುಕೊಂಡರೆ ನಿಮ್ಮ ಸಂಬಳದಲ್ಲಿ ಕಟಾಯಿಸುತ್ತೇವೆ ಎಂದು ಇಲ್ಲಿ ಬಜೆಟ್ ಭಾಷಣದಲ್ಲಿ ಹೇಳುತ್ತಾರೆ. ಹಾಗಾದರೆ ಇವರು ನಿಮ್ಮ ರಾಜ್ಯ ಸರ್ಕಾರದೊಳಗೆ ಇಲ್ಲವೇ? ಇವರಿಗೆ ಈ ನ್ಯಾಯಗಳು, ನೀತಿಗಳು ಅನ್ವಯಿಸುವುದಿಲ್ಲವೇ? ಸಧ್ಯಕ್ಕೆ ತಾವು ಒಂದು ಮಾಹಿತಿ ಕೊಡಿ ಇಂಡಸ್ಟ್ರೀಯಲ್ ಡೆವಲಪ್‌ಮೆಂಟ್ ಏರಿಯಾ ಬೋರ್ಡ್‌ನವರು ಸೆಕ್ಯೂರಿಟಿ ಹೆಸರಿನಲ್ಲಿ they have done illegal recruitment, to the tune of Engineers. ಏಕೆ ಏಲೋ ಮಾಡುತ್ತೀದ್ದೀರಿ? ನಿಮಗೆ ಗೊತ್ತಿಲ್ಲವೇ. ಗೊತ್ತು ಏಕೆ ಸುಮ್ಮನೆ ಇದ್ದೀರಿ? ಅದು ನನಗೆ ಅರ್ಥವಾಗಿಲ್ಲ. ಯಕ್ಷ ಪ್ರಶ್ನೆ. ಆ ಕಡೆ ಸ್ವಲ್ಪ ಗಮನ ಹರಿಸಬೇಕು. ಆಮೇಲೆ ಕುಡಿಯುವ ನೀರು. ನಿಮಗೆ ಗೊತ್ತು. ನೀವು ಹೇಳಿದ್ದೀರಿ ಈ ವರ್ಷವೆಲ್ಲಾ ಕರ್ನಾಟಕವನ್ನು ಜಲಾವೃತ ಮಾಡಿ ಹಾಕುತ್ತೇವೆ, ಅದು ನಮ್ಮ ಭಾರಿ ಆಂಬಿಷಿಯಸ್ ಪ್ರೋಗ್ರಾಮ್ ಎಂದು ಅಂದುಕೊಂಡು ಏನೊ ನಾಮಕರಣವನ್ನು ಮಾಡಿದ್ದೀರಿ. ಎಲ್ಲಿದೆ ಸ್ವಾಮಿ ನೀರು? ನಮ್ಮ ಹತ್ತಿರ ಬಂದು ನೋಡಿ. ನೀವು ನೋಡಿದ್ದೀರಿ, ಭಾಷಣ ಮಾಡಿದ್ದೀರಿ. ನೀರು ಕೊಡುತ್ತೇವೆ ಎಂದು ಹೇಳಿ ನಮ್ಮ ಜನರು ಅದೇ ನೀರು ನಂಬಿಕೊಂಡು ಕಣ್ಣಲ್ಲಿ ನೀರು ಹಾಕುತ್ತಾ ಇದ್ದಾರೆ. ನಾಳೆ ಆ ನೀರು ಬರುತ್ತದೆ. 400 ಅಡಿ 500 ಅಡಿಯಲ್ಲಿ ನೀರು ಇದೆ ಸನ್ಮಾನ್ಯ ಸಚಿವರೇ. ಹ್ಯಾಂಡ್ ಪಂಪ್‌ಗಳು ಕೆಲಸ ಮಾಡುವ ಸ್ಟೇಜ್‌ನಲ್ಲಿಲ್ಲ ನಮ್ಮ ಭಾಗದಲ್ಲಿ. ಅವೆಲ್ಲಾ ಪವರ್ ಪಂಪನ್ನು ನೀವು ಅಳವಡಿಸಲೇಬೇಕಾಗಿದೆ. ಕೆ.ಇ.ಬಿ. ಕಣ್ಣಾಮುಚ್ಚಾಲೆ ಆಡುತ್ತಿದೆ. ಕುಡಿಯುವ ನೀರಿಗೆ ನಾವು ಎಷ್ಟು ಯಾತನೆಪಡುತ್ತಿದ್ದೇವೆ ಕೋಲಾರ ತುಮಕೂರು ಜನರು ಎಂದರೆ ಬಹುಶ: ತಮಗೆ ಅರ್ಥವಾಗುವುದಿಲ್ಲ. ಒಂದು ಸಲ ಬನ್ನಿ ದಯವಿಟ್ಟು ಆ ಕಡೆ ನೋಡುವಿರಂತೆ. 100 ಅಡಿ 200 ಅಡಿ ಮೇಲೆ ಹ್ಯಾಂಡ್ ಪಂಪ್‌ನಲ್ಲಿ ನೀರು ಎತ್ತುವುದಕ್ಕಾಗುವುದಿಲ್ಲ ಸಾರ್. ಇವತ್ತು ನಿಮಗೆ ಇರುವ ಮೆಕಾನಿಸಂ ನಿಮ್ಮ ಹ್ಯಾಂಡ್ ಪಂಪ್ಸ್ ಇದೇಯಲ್ಲಾ, ಭಾರಿ ಎಂದರೆ 150 ಅಡಿ ಪಂಪ್ ಮಾಡಬಹುದು. ನಾವು ಈಗ ಕೊರೆಯುತ್ತಿರುವ ಬೋರ್‌ವೆಲ್‌ಗಳೇ

400 ಅಡಿ 500 ಅಡಿ. ಅವಕ್ಕೇನಾದರೂ ಸ್ಪೆಷಲ್ ಆಲೋಚನೆ ಮಾಡಿ, ಅಲ್ಲಿಗೆಲ್ಲಾ ಏನಾದರೂ ಎಂ.ಡಬ್ಲ್ಯು.ಎಸ್. ಮತ್ತೊಂದು ಮಾಡುವ ಆಲೋಚನೆ ಮಾಡಿ. ನೀವು ಆ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿದರೆ ಹಳ್ಳಿಯ ಜನರಿಗೆ ಸ್ವಲ್ಪ ನೀರು ಸಿಗುತ್ತದೆ. 10 ಸಾವಿರ ಚಿಲ್ಲರೆ ಕೋಟಿ ಬೆಂಗಳೂರಿಗೆ ನೀರು ತರುವ ಬಗ್ಗೆ ನೀವು ಯೋಚನೆ ಮಾಡುತ್ತೀರಿ. ಒಂದು ಸಾವಿರ ಕೋಟಿ ನೀವು ಇಡೀ ಸಮಗ್ರ ಕರ್ನಾಟಕ ಗ್ರಾಮೀಣ ಪ್ರದೇಶಕ್ಕೆ ನೀರು ಕೊಡುವುದಕ್ಕೆ ಆಲೋಚನೆ ಮಾಡುವುದಿಲ್ಲ ಎಂದರೆ ನಾವೇನು ಭಾಷಣ ಮಾಡಬೇಕು? ನಮಗೆ ಅರ್ಥವಾಗಿಲ್ಲ. ಆಮೇಲೆ ನಿಮ್ಮ ಈ ಸಮೀಕ್ಷೆ ಓದಿ. Every year agricultural production is reduced. Every year oil seed production is reduced. ಏನು ಮತ್ತಿ ವರಮಾನ. ಯಾರು ದುಡಿದು ಬದುಕುತ್ತಿದ್ದ, ಅವರ ಶಕ್ತಿಯನ್ನು ಕಳೆದಿದ್ದೀರಿ. ಸಾರ್, ನಾನು ನಿಮಗೊಂದು ಪ್ರಶ್ನೆ ಕೇಳುತ್ತೇನೆ. ಲೆವಿ ಕಲೆಕ್ಷನ್ ಸಿಸ್ಟಂಗೆ ವಿರುದ್ಧವಾಗಿ ನೀವೇನಾದರೂ ರೈತನ ಮಗನಾಗಿದ್ದರೆ ಒಂದು ರೆಸಲ್ಯೂಷನ್‌ನನ್ನು ಕೇಂದ್ರಕ ಸರ್ಕಾರದ ವಿರುದ್ಧವಾಗಿ ಪಾಸ್ ಮಾಡಿಸಬೇಕಾಗಿತ್ತು. why only a farmer should be levied. ಭತ್ತ ಬೆಳೆಯುವವನೇ ನೀವು ಪಾಯಿಂಟ್‌ನಲ್ಲಾದರೂ ಲೆವಿಯನ್ನು ಕಲೆಕ್ಟ್ ಮಾಡಿ. ರೈತರೇ ಕೊಡುತ್ತಿರುವುದು ಇವತ್ತು. ಯಾರೂ ರೈಸ್ ಮಿಲ್ ಓನರ್ಸ್ ಲೆವಿ ಕೊಡುತ್ತಿಲ್ಲ. ನಮ್ಮ ಹತ್ತಿರ ಹಿಡಿದುಕೊಂಡೇ ಲೆವಿ ಕೊಡುವುದು. ಹಾಗಾದರೆ ಬಾಟಾ ಚಪ್ಪಲಿ ಮಾಡುವವನು ಲೆವಿ ಕೊಡಲಿ, ಬಡವರಿಗೆ ಕೊಡಿಸೋಣ. ನಿಮ್ಮ ರಿಲಯನ್ಸ್‌ನವನು ಬಂದು ಲೆವಿ ಕೊಡಲಿ, ಯಾರಾದರೂ ಬಡವರಿಗೆ ಬಟ್ಟೆ ಕೊಡಿಸೋಣ. ರೈತ ಬೆಳೆದಿದ್ದಕ್ಕೆ ಲೆವಿ ಕೊಡಬೇಕು. ಇನ್ನ್ಯಾರೂ ಬೆಳೆದಿದ್ದಕ್ಕೆ ಕೊಡುವುದಕ್ಕಾಗುವುದಿಲ್ಲವೇ? ಲೆವಿ ಕೊಡುವ ಬದಲು ನಮ್ಮ ರೇಟನ್ನು ಕೊಟ್ಟು ಕೊಂಡುಕೊಳ್ಳಲಿ. ಸಬ್‌ಸಿಡೀಸ್ ಮಾಡಿಕೊಡಲಿ. ತಾವೊಂದು ಹೋರಾಟವನ್ನು ಆರಂಭ ಮಾಡಬೇಕು. ನಮ್ಮ ಬೈರೇಗೌಡರು ಇದ್ದರೆ ಹೇಳುತ್ತಿದ್ದೆ. ಸಮಗ್ರವಾದ ಕೃಷಿ ನೀತಿ ಬಗ್ಗೆ. ಈ ದೇಶದ ಮೊದಲನೇ ಕೃಷಿ ನೀತಿ ಬರೆದರನು ಹೇಳಿದ್ದಾನೆ, ಯಾವಾಗ ನೀವು ಈ ಲೆವಿ ಸಿಸ್ಟಂ ತಂದಿರಿ, ಯಾವಾಗ ನೀವು ಇಂಟರ್-ಸ್ಟೇಟ್ ಟ್ರಾನ್ಸ್‌ಪೋರ್ಟೇಷನನ್ನು ರದ್ದುಮಾಡಿದ್ದೀರಿ, ಯಾವಾಗ ನೀವು ಇಂಟರ್-ಡಿಸ್ಟ್ರಿಕ್ಟ್ ಟ್ರಾನ್ಸ್‌ಪೋರ್ಟೇಷನನ್ನು ರದ್ದು ಮಾಡಿದಿರಿ, ಅವತ್ತು ಈ ದೇಶದ, ಆ ರಾಜ್ಯದ ರೈತರನ್ನು ಕೊಂದಿರಿ. ನಮಗೆ ಮಾರುಕಟ್ಟೆ ಮಾಡುವ ಫೆಸಿಲಿಟೀಸ್ ಅನ್ನು ರಿಸ್ಟ್ರಿಕ್ಟ್ ಮಾಡಿದಿರಿ. ನಮಗೆ ಲೆವಿ ಸಿಸ್ಟಂ ತಂದಿರಿ. ಯಾರೋ ಊಟ ಮಾಡಲಿಕ್ಕೆ ನಾನು ಲೆವಿ ಕೊಡಬೇಕಾ? ನಾನು ಬಳಸುವುದಕ್ಕೂ ಲೆವಿನಲ್ಲಿ ಅನುಕೂಲ ಕೊಡಿಸಿ. ಈ ಆಲೋಚನೆಗಳನ್ನು ನೀವು ಮಾಡದೇ ಹೋದರೆ ಅನಾನುಕೂಲ ಆಗುತ್ತದೆ. ಹಾರೆ ಕೊಡಿಸಿ, ಗುದ್ದಲಿ ಕೊಡಿಸಿ, ಟ್ರ್ಯಾಕ್ಟರ್ ಕೊಡಿಸಿ, ಪಿಕಾಸಿ ಕೊಡಿಸಿ. ಏನಾದರೂ ಒಂದು ಲೆವಿನಲ್ಲಿ ಮಾಡಬೇಕಲ್ಲಾ. ನೀವು ಒಂದು ಸ್ಟೀಲ್ ಇಂಡಸ್ಟ್ರೀ ಇಟ್ಟುಕೊಂಡಿದ್ದೀರಿ ಇಷ್ಟು ಪರ್ಸೆಂಟ್ ಲೆವಿ ಕೊಡಿ ಎಂದು ಸನ್ಮಾನ್ಯ ಶಂಕರ್ ಅವರಿಗೆ ಹೇಳಿ ನಮಗೆ ಕೊಡಿಸಿ. ಟ್ರ್ಯಾಕ್ಟರ್ ಕೊಡಿಸಿ ಲೆವಿನಲ್ಲಿ ಒಂದಿಷ್ಟು ಟ್ರ್ಯಾಕ್ಟರ್ ತೆಗೆದುಕೊಳ್ಳಿ. ನೀವು ಹತ್ತು ಸಾವಿರ, ಮೂವತ್ತು

ಸಾವಿರ ಕೊಡುತ್ತಿರುವ ಸಬ್ಸಿಡಿ ಬದಲು ನಮಗೆ ಒಂದಿಷ್ಟು ಲೆವಿನಲ್ಲಿ ಇಂಕ್ರಿಮೆಂಟ್ಸ್ ಬರುವ ಹಾಗೆ ಮಾಡಿ ; ನಾವು ಸಂತೋಷಪಡುತ್ತೇವೆ. ಯಾರಿಗೆ ನೀವು ಸಬ್ಸಿಡಿ ಕೊಡುತ್ತೀರಿ? ಯಾರಿಗೆ ನೀವು ಇನ್‌ಫ್ರಾಸ್ಟ್ರಕ್ಚರ್ ಕ್ರಿಯೇಟ್ ಮಾಡಿ ಕೊಡುತ್ತೀರಿ? ಯಾರನ್ನು ಹೋಗಿ ಕೈಕಾಲು ಕಟ್ಟಿಕೊಂಡು ಬಂದು ಇಲ್ಲಿ ಇಂಡಸ್ಟ್ರೀ ಮಾಡಿಸುತ್ತೀರಿ? ಅವರಿಗೆ ಎಲ್ಲಾ ಸಹಾಯ ಮಾಡುತ್ತೀರಿ. ಯಾರು ಈ ದೇಶದ ಮಗ ಎಂದು ಭಾವಿಸಿಕೊಂಡು ಬದುಕಿದ್ದು, ಅವನಿಗೆ ಯಾವುದೇ ರೀತಿಯ ಸಪೋರ್ಟ್‌ನ್ನು ಇವತ್ತು ರಾಜ್ಯ ಸರ್ಕಾರದಿಂದ, ಕೇಂದ್ರ ಸರ್ಕಾರದಿಂದ ನಿರೀಕ್ಷಣೆ ಮಾಡದಂತಹ ಸ್ಥಿತಿಗೆ ತಂದು ತಲುಪಿಸಿ ಬಿಟ್ಟಿದ್ದೀರಿ. ಎಲ್ಲಿಯವರೆಗೆ ಆ ಮಗ ನಿಮ್ಮ ಅಮರ್ತ್ಯಸೇನ್ ಅವರು ಬರೆದ ಹಾಗೆ, ಆ ಗ್ರಾಮೀಣ ಪ್ರದೇಶದಲ್ಲಿ ಬದುಕಿರುವ ಮಗ, ಆ ಗ್ರಾಮೀಣ ಪ್ರದೇಶದಲ್ಲಿ ಉಸಿರಾಡುತ್ತಿರುವ ಜೀವ ಸಮಾಧಾನ ಪಡುವುದಿಲ್ಲ, ಅಲ್ಲಿಯವರೆಗೆ ಎಕನಾಮಿಕ್ಸ್‌ಗೆ, ಫೈನಾನ್ಸ್‌ಗೆ ಈ ಬಜೆಟ್‌ಗೆ ಯಾವುದೇ ಅರ್ಥ ಉಳಿಯುವುದಿಲ್ಲ. ನಮಗೆ ಗೊತ್ತು. ನೀವು ಇವತ್ತು ಏನೂ ಮಾಡುವ ಸ್ಥಿತಿಯಲ್ಲಿಲ್ಲ. ಆದರೆ ಕೆಲಸವನ್ನು ನಾವು ಮಾತನಾಡಲೇ ಬೇಕಾಗುತ್ತದೆ. ಏಕೆಂದರೆ ನಿಮ್ಮಿಂದ ನಾವೆಲ್ಲಾ ನಿರೀಕ್ಷೆ ಮಾಡಿದ್ದೆವು. ಕೊನೆಯ ವರ್ಷ ಆದರೂ ಕನಿಷ್ಟ ತಿರುಗಿ ಓಟು ಕೇಳುವ ಆಸೆಗಾದರೂ ಏನಾದರೂ ನಮಗೆ ಮಾಡಿ ಹೋಗುತ್ತೀರಿ ಎಂದು ತಿಳಿದುಕೊಂಡಿದ್ದೆವು. ಆದರೆ ನಾವು ಆ ಆಸೆಯನ್ನೂ ಏಕೋ ಬಿಟ್ಟ ಹಾಗೆ ಕಾಣುತ್ತದೆ. ಈ ವರ್ಷದ ಬಜೆಟ್ಟ ಅನ್ನು ನಾವು ನಿರೀಕ್ಷೆ ಮಾಡುತ್ತಿದ್ದೆವು. ನಿಮಗೆ ಎರಡು ಮಾತು ಹೇಳಿ ಹೊಗುತ್ತೇನೆ. ಕನಿಷ್ಟ ಈ ಕೆಇಬಿ ಇಲಾಖೆಯನ್ನ ನೀವು ಕಂಟ್ರೋಲಿಗ್ ತೆಗೆದುಕೊಂಡಿದ್ದರೆ, ಕನಿಷ್ಟ ಅವರು ಅನಾವಶ್ಯಕವಾಗಿ ಮಾಡಿರತಕ್ಕಂಥ ಗೊಂದಲವನ್ನು ನಿವಾರಣೆ ಮಾಡಿದ್ದರೆ ಒಂದು ಐದರಿಂದ ಹತ್ತು ಪರ್ಸೆಂಟ್ ಓಟು ಜಾಸ್ತಿ ನಿಮಗೆ ಬರುತ್ತಿತ್ತು. ಸುಮ್ಮ ಸುಮ್ಮನೇ ಕ್ರಿಯೇಟ್ ಮಾಡುತ್ತಾರೆ ಗೊಂದಲವನ್ನು. ಯಾರಿಗೆ ಬೇಕಿತ್ತು ಇವತ್ತು ಈ ಸ್ಟೋರ್ ಶಿಫ್ಟ್ ಮಾಡುವುದು ನೀವು ಒಪ್ಪಿಕೊಳ್ಳುತ್ತೀರಾ? ಇವತ್ತು ಅದರ ಅವಶ್ಯಕತೆ ಇತ್ತಾ? ಇವತ್ತು ನೋಡಿ ಬನ್ನಿ, 40, 45, ತಾಲ್ಲೂಕುಗಳಲ್ಲಿ ಸ್ಟ್ರೈಕ್ ನಿಮ್ಮ ಪಾರ್ಟಿಗೆ ಧಿಕ್ಕಾರ, ಎಂಎಲ್‌ಎಗಳಿಗೆ ಧಿಕ್ಕಾರ. ನಾವೆಲ್ಲಾ ಅಶಕ್ತರು. ಕನಿಷ್ಕ ನೀವು ಮೀಟರ್ ಹಾಕುತ್ತೀರಾ? ಹಾಕುವುದಕ್ಕೆ ಆಗುತ್ತದಾ? ಏಕೆ ಸಾರ್ ನೀವು ಗೊಂದಲವನ್ನು ಮಾಡಿ ರೈತರ ಓಟುಗಳನ್ನು ಕಳೆದುಕೊಂಡಿರಿ? ಇದು ನನಗೆ ಅರ್ಥ ಆಗಲಿಲ್ಲ. ನಾನು ಅವತ್ತು ಹೇಳಿದ್ದೆ. ನೀವು ನಿಮಗೆ ಓಟು ಹಾಕಿರುವಂತಹ ಜನಕ್ಕೆ ತಲುಪಲು ದೂರ ಆಗುತ್ತಿದ್ದೀರಿ, ಇದು ಚೆನ್ನಾಗಿ ಕಾಣುವುದಿಲ್ಲ. ಏನಾದರೂ ಮುಂದಿನ ವರ್ಷಗಳಲ್ಲಾದರೂ ಹೋಗುವುದಕ್ಕೆ ಪ್ರಯತ್ನ ಮಾಡಿ ಎಂದು ಹೇಳಿದ್ದೇ. ನಿಮಗೆ ಆ ಆಸೆ ಇಲ್ಲ. ನಿಮಗೆ ಅವರ ಹತ್ತಿರ ಹೋಗಲು ಮನಸ್ಸೂ ಇಲ್ಲ. ನಮಗೆಲ್ಲಾ ಇವತ್ತು ಎನ್‌ಆರ್‌ಡಬ್ಲ್ಯೂಎಸ್, ಎಲಆರ್‌ಡಬ್ಲ್ಯೂಎಸ್ ಸ್ಕೀಮ್‌ಗಳು ಸ್ಯಾಂಕ್ಷನ್ ಆಗಿವೆ. ದುಡ್ಡು ಇಲ್ಲದೇ ವರ್ಷಕ್ಕೆ ಇಷ್ಟಿಷ್ಟು ಮಾತ್ರ ಇಂಕ್ರಿಮೆಂಟ್ ಮಾಡಬೇಕೆಂದು ಹೇಳಿ ಸ್ಯಾಂಕ್ಷನ್ಡ್ ಪ್ಲಾನ್‌ಗಳನ್ನೂ ಪೆಂಡಿಂಗ್ ಇಟ್ಟಿದ್ದಾರೆ. ದಯಮಾಡಿ ಅದನ್ನು ತರಿಸಿ ಬಿಟ್ಟು ಆ ಸ್ಕೀಮ್‌ಗಳಿಗೆ ನೀರು ಕೊಡಿ. ಒಂದು

ಸಾವಿರದಿಂದ ಎರಡು ಸಾವಿರ ಜನಸಂಖ್ಯೆ ಇರುವಂತಹ ಊರಿನಲ್ಲಿ ಓವರ್‌ಹೆಡ್ ಟ್ಯಾಂಕ್ ಸ್ಕೀಮ್‌ನಲ್ಲಿ ನೀರು ಕೊಡುತ್ತೇವೆ. ಈ ವರ್ಷಕ್ಕೆ ಸೇರಿಸುವುದಿಲ್ಲ, ಮುಂದಿನ ವರ್ಷಕ್ಕೆ ಸೇರಿಸುತ್ತೇವೆಂದು ಮಾತನಾಡುತ್ತಾರೆ. ಮುಂದಿನ ವರ್ಷಕ್ಕೆ ಸೇರಿಸುವುದಕ್ಕೆ ಆಗುವುದಿಲ್ಲ, ಅದರ ಮುಂದಿನ ವರ್ಷಕ್ಕೆ ಸೇರಿಸುತ್ತೇವೆಂದು ಮಾತನಾಡುತ್ತಾರೆ. ಜನ ಇವತ್ತು ಯಾರಿಗೂ ಕಾಯುವ ಸ್ಥಿತಿಯಲ್ಲಿಲ್ಲ. ತಂತ್ರಜ್ಞಾನ, ಕಾಲ ಎರಡೂ ವೇಗವಾಗಿ ಹೋಗುತ್ತಿದೆ. ಅದರ ಜೊತೆಗೇ ತಾವು ಕಾಲು ಹಾಕಿದರೆ ಮತ್ತೆ ಈ ಕಡೆಯ ಕುರ್ಚಿ ಆಸೆ ಇಟ್ಟುಕೊಳ್ಳಬಹುದು. ಇಲ್ಲದಿದ್ದರೆ ಕಷ್ಟ ಆಗುತ್ತದೆ. ನಾನು ನಿರ್ಧಾಕ್ಷಿಣ್ಯವಾಗಿ ಹೇಳುತ್ತಿರುವುದು ಏಕೆ ಎಂದರೆ ಇನ್ನೊಂದು ಆರು ತಿಂಗಳು ಇದೆ. ಮನಸ್ಸು ಮಾಡಿದರೆ ಏನಾದರೂ ಮಾಡಬಹುದು. ಸ್ವಲ್ಪ ಗ್ರಾಮೀಣ ಸೊಗಡಿಗೆ ಆಸೆ ಇಟ್ಟುಕೊಂಡು ಆ ಕಡೆಗೆ ಕೊಡಬೇಕು. ಎರಡನೆಯದು ಕೆಲವು ಎಕ್ಸೆಂಪ್‌ಷನ್ ಹಾಗೂ ಕೆಲಸಕ್ಕೆ ಟ್ಯಾಕ್ಸ್ ಹಾಕುವ ವಿಚಾರವನ್ನು ತಾವು ಮಾಡಿದ್ದೀರಿ. ನಾನು ಒಂದು ವಿಷಯಕ್ಕೆ ಸಂತೋಷಪಡುತ್ತೇನೆ. ಕಾಯರ್ ಮೇಲೆ ಇದ್ದಿದ್ದು, ಹಸ್ಕ್ ಮೇಲೆ ಇದ್ದ ಟ್ಯಾಕ್ಸ್ ತೆಗೆದಿರಿ. ಮೊಟ್ಟೆ ಮೇಲೆ ಏಕೆ ಸಾರ್ ಟ್ಯಾಕ್ಸ್ ಹಾಕುವುದಕ್ಕೆ ಹೋದಿರಿ?

Charcoal is charged. Charcoal is under your taxation. ನಾವೇನು ಇದ್ದಿಲು ಮಾಡುತ್ತಿದ್ದೆವು, ಅದಕ್ಕೆ ನೀವು ಟ್ಯಾಕ್ಸ್ ಹಾಕಿದ್ದೀರಿ. ನಿಮಗೆ ಗೊತ್ತಿಲ್ಲ. ನಾನು ವ್ಯಾಲ್ಯೂ ಆಡೆಡ್ ಟ್ಯಾಕ್ಸ್ ಸಿಸ್ಟಂ ತರುತ್ತೇನೆ, ಬೇಸ್ ವೈಡ್ ಮಾಡುತ್ತೇನೆಂದು ಹೇಳಿ ಮೊಟ್ಟೆಗೆ ಇದ್ದಿದ್ದು ಈ ವರ್ಷ ತೆಗೆದಿದ್ದೀರಿ. ಚೊಟ್ಟೆಗೆ ಹೋದ ವರ್ಷ ಹಾಕಿಂದತಹ ಕರ ಹಾಗೆಯೇ ಮುಂದುವರಿಸಿಕೊಂಡು ಹೋಗಿದ್ದೀರಿ. ತೆಂಗಿನಕಾಯಿ ಚಿಪ್ಪು ಮಾರುವ ವ್ಯಕ್ತಿಗಳ ವಿಚಾರ. ನಾನು ಒಬ್ಬ ತೆಂಗಿನಕಾಯಿ ಬೆಳೆಯುವವನು ಹೇಳುತ್ತಿದ್ದೇನೆ. ನಿಮ್ಮ ವಿಧಾನಸಭೆಯ ಶಾಸಕನಾಗಿ ಹೇಳುತ್ತಿದ್ದೇನೆ. ನೀವು ಚಾರ್‌ಕೋಲ್ ಮೇಲೆ ಟ್ಯಾಕ್ಸ್ ಹಾಕಿದ್ದೀರಿ. ಅದಕ್ಕಾಗಿ ನಮ್ಮ ಹತ್ತಿರ ಚಿಪ್ಪುಕೊಳ್ಳುವವರು ದಿಕ್ಕು ಇಲ್ಲದ ಹಾಗೆ ಆಗಿದ್ದಾರೆ. ನಮಗೆ ಏನು 100 -150 ರೂಪಾಯಿ ತೆಂಗಿನ ಕಾಯಿ ಕೊಬ್ಬರಿ ಚಿಪ್ಪಿನಲ್ಲಿ ಬರುತ್ತಿತ್ತು, ಆ ವರಮಾನ ಬಂದ್ ಆಗಿದೆ. ಕೊಳ್ಳುವವರೆ ಇಲ್ಲ. ದಯಮಾಡಿ ಅದನ್ನು ನೀವು ತೆಗೆಯಬೇಕಾಗುತ್ತದೆ. ಈಗ ನೀವು ಕೆಲವು ಕಡೆ ಹೇಳಿದಿರಿ. ಹೋದಸಾರಿ ನಾವು ಹೇಳಿದೆವು, ಬೇಡಿಕೊಂಡೆವು, ವೀಟ್ ಅಂಡ್ ವೀಟ್ ಪ್ರಾಡಕ್ಟ್ಸ್ ಮೇಲೆ ಕರ ಹಾಕಬೇಡಿ ಎಂದು ಬೇಡಿಕೊಂಡೆವು. ಕೇಳಲಿಲ್ಲ. ಸುಮಾರು 30 ರಿಂದ 40 ಇಂಡಸ್ಟ್ರೀಗಳು ಸಫರ್ ಆಯಿತು. ನಾವೇನಾದರೂ ಹೇಳಿದರೆ ನೀವು ಒಂದೇ ಸಿದ್ಧಾಂತ ಹೇಳುತ್ತಿರಿ. ನಾನು ಯಾರ ಮಾತೂ ಕೇಳುವುದಿಲ್ಲ, ಹೋಗಿ, ಎಲ್ಲರನ್ನೂ ಕುಳಿತುಕೊಂಡು ಚರ್ಚೆ ಮಾಡಿದ್ದೇನೆಂದು ಹೇಳುತ್ತೀರಿ. ಸಾರ್ ನಿಮಗೆ ಒಳ್ಳೆಯ ಹೆಸರು ಬರಬೇಕಾದ ಕಡೆ ಎರಡು ಪರ್ಸೆಂಟ್, ಒಂದು ಪರ್ಸೆಂಟ್ ಟ್ಯಾಕ್ಸ ಅನ್ನು ಕಾಂಟ್ರಿಬ್ಯೂಟ್ ಮಾಡುವುದಕ್ಕೆ ಬಿಡುವುದಿಲ್ಲ ಅಂದರೆ ಸರ್ಕಾರ ಅಷ್ಟೊಂದು ಒಳ್ಳೆಯ ಹೆಸರನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ನಾನು ನಿಮಗೆ ವಿನಂತಿ ಮಾಡುತ್ತಿದ್ದೇನೆ. ತಾವು ತೆಂಗಿನಕಾಯಿ ಚಿಪ್ಪಿನ ಮೇಲೆ ಕರ ಹಾಕಿದ್ದೀರಿ,

ಚಾರ್‌ಕೋಲ್ ಮೇಲಿನ ಕರವನ್ನು ತಾವು ವಾಪಸ್ ತೆಗೆದುಕೊಳ್ಳಬೇಕಾಗುತ್ತದೆ. ಚಾರ್‌ಕೋಲ್ ಅನ್ನು ಏನು ಕೊಂಡು ಕೊಂಡು ಹೋಗುತ್ತಿದ್ದರು, ಅವರು ನಮ್ಮ ಮನೆಯ ಹತ್ತಿರ ಬಂದು ಚಿಪ್ಸ್ ತೆಗೆದುಕೊಂಡು ಹೋಗುವಂತಹ ವ್ಯವಸ್ಥೆಯನ್ನು ನಿರ್ಮಾಣ ಮಾಡಬೇಕಾಗುತ್ತದೆ. ನಾನು ನಿಮಗೆ ಆಮೇಲೆ ಡೀಟೇಲ್ ಆಗಿ ಬರೆದು ಕಳುಹಿಸುತ್ತೇನೆ. ಎರಡನೆಯದು, ನೀವು ಇವತ್ತು ಏನು ಎಕ್ಸ್‌ಪೋರ್ಟ್ ಓರಿಯೆಂಟೆಡ್ ಇಂಡಸ್ಟ್ರೀ ಇದ್ದವರಿಗೆ ಎಲ್ಲಾ ಫೆಸಿಲಿಟೀಸ್ ಕೊಟ್ಟು ಅವರನ್ನು ಆಚೆಗೆ ಕಳುಹಿಸುವುದಕ್ಕೆ ಮಾಡುತ್ತಿದ್ದೀರಿ. ನಮ್ಮ ಅಗ್ರಿಕಲ್ಚರಲ್ ಪ್ರಾಡಕ್ಟ್ಸ್ ಹೊರಗಡೆ ಹೋಗಬೇಕಾದರೆ (ಸಿ) ಫಾರ್ಮ್ ತೆಗೆದುಕೊಂಡು ಬನ್ನಿ. ಅಲ್ಲಿ ಯಾರಿಗೆ ಮಾರುತ್ತೀರಿ ತನ್ನಿ, ಇಲ್ಲಿ ಯಾರಿಗೆ ಮಾರುತ್ತೀರಿ ಎಂದು ವಿವರ ತನ್ನಿ. ಇದನ್ನು ತೆಗೆದುಕೊಂಡು ಬಂದು ಈ ದೇಶದ ಅಗ್ರಿಕಲ್ಚರಲ್ ಪ್ರಾಡ್ಯೂಸ್ ಅನ್ನು ಇಲ್ಲೇ ಉಳಿಸುವುದಕ್ಕೆ ವ್ಯವಸ್ಥೆ ಮಾಡಿದರೆ ನಮಗೆ ಮಾರ್ಕೆಟಿಂಗ್ ಫೆಸಿಲಿಟೀಸ್ ಸಿಗುತ್ತದೆ. ನಾವು ಪ್ರಾಡ್ಯೂಸರ್ ಆಗಿ ಹೊರಗೆ ಹೋಗಬೇಕು. ನಾನು ನಿಮಗೆ ವಂದನೆ ಸಲ್ಲಿಸುತ್ತೇನೆ. ತಾವು ಹೋದ ವರ್ಷ ಅಡಿಕೆಗೆ (ಸಿ) ಫಾರ್ಮ ತೆಗೆದಿರಿ. ಅಡಿಕೆಯನ್ನು ಮುಕ್ತ ಮಾಡಿದಿರಿ. ಹಾಗಾಗಿ ಅಡಿಕೆಗೆ ಮತ್ತೆ ರೇಟ್ ಬಂತು. ಕೊಬ್ಬರಿಗೆ ತೆಗೆಯಿರಿ. ನಾನು ತಮಗೆ ಬಂದು ಕೇಳಿಕೊಂಡಾಗ ಎರಡು ವರ್ಷದ ಕರ ತೆಗೆದು ಕೊಟ್ಟಿರಿ. ಧಾರಣೆ ಬಂತು; ಈಗ ಮತ್ತೆ ನಿಮ್ಮ ಇಲಾಖೆಯವರು ಕನ್‌ಫ್ಯೂಷನ್ ಕ್ರಿಯೇಟ್ ಮಾಡಿದ್ದಾರೆ. ಇಲ್ಲ ಅದು ಸರ್ಕಾರಿ ಆದೇಶ ಆಗಿಲ್ಲ. ಕೋರ್ಟ್ ಡಿಸಿಷನ್ ಆಗಿದೆ, ಸಿ ಫಾರ್ಮ್ ಈಸ್ ಎ ಮಸ್ಟ್ ಎಂದು ಹೇಳಿ, ಮೂವ್‌ಮೆಂಟ್ ಆಗಲೇ ರಿಸ್ಟ್ರಿಕ್ಟ್ ಆಗಿದೆ. ಸಿ ಫಾರ್ಮ ಇದೊಂದು ರಾಜ್ಯದಲ್ಲಿ ಹಾಕಿ ಪಕ್ಕದ ರಾಜ್ಯಗಳೆಲ್ಲೆಲ್ಲಾ ಹಾಕಲಿಲ್ಲ ಎಂದರೆ ನಿಮ್ಮ ಮಾಲು ಆಚೆಗೆ ಹೋಗುವುದಿಲ್ಲ. ಏನಾದರೂ ನೀವು ಈ ರಾಜ್ಯಕ್ಕೆ ಒಳ್ಳೆಯದು ಮಾಡಬೇಕು. ರೈತರಿಗೆ ಅನುಕೂಲ ಆಗಬೇಕು ಎಂದರೆ ಹೊರಗಡೆಯಿಂದ ಬರುವಂತಹ ವಸ್ತುಗಳಿಗೆ ಟ್ಯಾಕ್ಸ್ ಹಾಕಿ. ಇಲ್ಲಿಂದ ಹೊರಗಡೆ ಹೊಗುವಂತಹ ವಸ್ತುಗಳಿಗೆ ಏಕೆ ಟ್ಯಾಕ್ಸ್ ಹಾಕುತ್ತಿದ್ದೀರಿ? ಕಡಿಮೆ ಮಾಡಬೇಕಾಗುತ್ತದೆ. ಈ ಟ್ಯಾಕ್ಸನ್ನು ನೀವು ಕಡಿಮೆ ಮಾಡದೇ ಹೋದರೆ ರಿಸ್ಟ್ರಿಕ್ಟೆಡ್ ಮಾರ್ಕೆಟ್‌ನಲ್ಲಿ ನಮಗೆ ಲಾಭದಾಯಕವಾದಂತಹ ಸ್ಥಿತಿ ಸಿಗುವುದಿಲ್ಲ. ಅದನ್ನು ಏನಾದರೂ ತಾವು ಆಲೋಚನೆ ಮಾಡಬೇಕು. ಇನ್ನು ಅನೇಕ ಐಟಂಗಳು ಇವೆ. ಈ ವ್ಯಾಲ್ಯೂ ಆಡೆಡ್ ಟ್ಯಾಕ್ಸ್ ಸಿಸ್ಟಂನಲ್ಲಿ ತರುತ್ತೇವೆಂದು ಹೇಳಿ ಶೆಡ್ಯೂಲ್ 5(ಎ) ಇವಕ್ಕೆಲ್ಲಾ ನೀವು ಟ್ಯಾಕ್ಸ್ ಹಾಕುವುದಕ್ಕೆ ಹೊರಟಿದ್ದು ಅಂತಹ ಒಳ್ಳೆಯ ತೀರ್ಮಾನ ಎಂದು ನಾನೇನೂ ಭಾವಿಸಿಲ್ಲ. ಕೆಲವು ಐಟಂಗಳಿಗೆ ಟ್ಯಾಕ್ಸ್ ಹಾಕಬಾರದು ಎಂದು ಏನು ಇತ್ತು, ಅಮೆಂಡ್‌ಮಾಡಿ ಕೊಂಡು ನಾವು ಟ್ಯಾಕ್ಸಿಂಗ್ ಏರಿಯಾದೊಳಗೆ ತಂದುಬಿಟ್ಟಿರಿ. ಎರಡು ಪೈಸೆ, ಮೂರು ಪೈಸೆ ಹಾಕಿದ್ದಾರೆ ನಿಮಗೆ ಏನಾಗುತ್ತಿರಲಿಲ್ಲ. ದಯಮಾಡಿ ಮರು ಚಿಂತನೆ ಮಾಡಬೇಕು. ಅದನ್ನು ಯೋಚನೆ ಮಾಡಬೇಕಾಗುತ್ತದೆ. ಅದರ ಜೊತೆಗೆ ನಾನೀಗ ನಿಮಗೆ ಕೇಳುತ್ತಿದ್ದೇನೆ. ಈಗ ಅನೇಕ ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ್ದೀರಿ. ಸಿನೆಮಾದರರಿಗೆ ನಾವು 15 ಲಕ್ಷದವರೆಗೆ ಒಳ್ಳೆಯ ಸಿನೆಮಾಗೆ ಸಬ್ಸಿಡಿ ಕೊಡುತ್ತೇವೆ ಎಂದು

ಹೇಳಿದ್ದೀರಿ. ನಿಜ. ಅಷ್ಟೊಂದು ಕೊಡುವ ಅಗತ್ಯ ಇತ್ತಾ ಎಂದು ಇನ್ನೊಮ್ಮೆ ಪರಿಶೀಲನೆ ಮಾಡಬೇಕಾಗುತ್ತದೆ. ಏಕೆಂದರೆ ಯಾರಿಗೋ ಒಬ್ಬರಿಗೆ ನೀವು 15 ಲಕ್ಷ ಕೊಡುವುದರಿಂದ ಏನಾಗುತ್ತದೆ ಎಂದು ಹೇಳಿ ನನಗೆ ಗೊತ್ತಿಲ್ಲ. ಅದರ ಬದಲು ಇನ್ನೊಂದು ಕಡೆ ಯೋಚನೆ ಮಾಡಿ. ಈ ದೇಶದ ಭಾಷೆ ಬೆಲೆಯಬೇಕು. ಈ ದೇಶದ ಕಲೆ ಉಳಿಯಬೇಕು ಎನ್ನುವ ದೃಷ್ಟಿಯಿಂದ ಮಾಡಿದ್ದೀರಿ ಎಂದು ಭಾವಿಸುತ್ತೇನೆ. ಪುಸ್ತಕ ಬರೆಯುವರಿಗೆ ಏನಾದರೂ ಮಾಡಿ. ಒಳ್ಳೆಯ ಪುಸ್ತಕ ಬರೆದವನಿಗೆ ನೀವು ಸಬ್ಸಿಡೈಜ್ಡ್ ಮಾಡಿ ಸ್ವಲ್ಪ ಮಾರುಕಟ್ಟೆ ಮಾಡಲಿಕ್ಕೆ ಅನುಕೂಲ ಆದರೆ ನಾವೆಲ್ಲಾ ಒಂದು ಕೊಂಡು ಇಟ್ಟು ಕೊಳ್ಳಬಹುದಾ? ಈಗ ಕನ್ನಡದಲ್ಲಿ ಇವತ್ತು ಬರೆಯುತ್ತಿರುವ ಪುಸ್ತಕಗಳ ಸಂಖ್ಯೆಗೆ ಕೊರತೆಯೇ ಇಲ್ಲ. ಅದಕ್ಕೆ ಓದುವವರು ಏಕೆ ಕಡಿಮೆ ಆಗುತ್ತಿದ್ದಾರೆ ಎಂದರೆ ಕೊಳ್ಳುವ ಶಕ್ತಿ ನಮಗೆ ಇವತ್ತು ಕಡಿಮೆ ಆಗಿದೆ.

ಶ್ರೀ ಸಿದ್ಧರಾಮಯ್ಯ :— ಎಲೆಕ್ಟ್ರಾನಿಕ್ ಮಾಧ್ಯಮಗಳು ಬಂದಿರುವುದರಿಂದ ಓದುಗರ ಸಂಖ್ಯೆ ಕಡಿಮೆ ಆಗಿದೆ. ಇಂಟರ್‌ನೆಟ್‌ನಲ್ಲಿ ಇವತ್ತು ಅಮೇರಿಕಾದಲ್ಲಿರುವುದನ್ನು ಇವತ್ತು ಇಲ್ಲಿ ನೋಡಲಿಕ್ಕೆ ಸಾಧ್ಯವಾಗುತ್ತಿದೆ. ಅಲ್ಲೇ ನೋಡಿಕೊಂಡು ಬಿಡುತ್ತಾರೆ. ಪುಸ್ತಕ ಓದಿಕೊಂಡು ಏಕೆ ಕಷ್ಟ ಪಡುತ್ತಾರೆ? ಆ ಪರಿಸ್ಥಿತಿಯಾಗಿ ಪುಸ್ತಕಗಳು ಕಡಿಮೆ ಆಗುತ್ತಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ತಾವು ಪಬ್ಲಿಷರ್ಸ್ ಪುಸ್ತಕಗಳಿಗೆ ಫಿಕ್ಸ್ ಮಾಡಿರುವ ಪ್ರೈಸ್ ಅನ್ನು ತೆಗೆದುಕೊಂಡು ನೋಡಿದರೆ, ಸಾಧಾರಣ ಮನುಷ್ಯರು ಇವತ್ತು ಪುಸ್ತಕವನ್ನು ಕೊಂಡು ಓದುವಂತಹ ಸ್ಥಿತಿಯಲ್ಲಿ ಇಲ್ಲ. ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ನಿಮಗೆ ಗೊತ್ತಿರುವ ಸಿಡಿಗಳಲ್ಲಿ ನಿಮಗೆ ಬರುತ್ತಿರುವ ಇಂಟರ್‌ನೆಟ್‌ನಲ್ಲಿ ಅಮೇರಿಕಾವನ್ನು ಚಿತ್ರಿಸುವುದು ಬಿಟ್ಟರೆ ಕರ್ನಾಟಕ ಚಿತ್ರಿಸುವುದಕ್ಕೆ ಆಗುವುದೇ ಇಲ್ಲ. ನಾನು ಕುಳಿತುಕೊಂಡು ನಮ್ಮ ಮನೆಯ ಕಂಪ್ಯೂಟರ್ ಆನ್ ಮಾಡಿದರೆ ಜಾನ್ಸನ್ ಆಫ್ ಕೆನಡಿ ಅವರದ್ದು ಎರಡು ಸೆಕೆಂಡ್ ಭಾಷಣ ಬರುವುದು ಬಿಟ್ಟರೆ ನಿಮ್ಮ ಭಾಷಣ ಬರುವ ಸ್ಥಿತಿಯನ್ನು ನಾವು ನಿರ್ಮಾಣ ಮಾಡಿಲ್ಲ. -ನಾನು ಯೂಸ್ ಮಾಡುವವನು ಹೇಳುತ್ತಿದ್ದೇನೆ. ಅವರು ಮಾಡಿದ್ದಾರೆ ಇಂಟರ್‌ನೆಟ್‌ನಲ್ಲಿ ನಾವೆಲ್ ಬಂದಿದೆ. ನೀವು ಭಗವದ್ಗೀತೆಯಿಂದ ಹಿಡಿದು ರಾಮಾಯಣದವರೆಗೆ ಸಿಡಿಯಲ್ಲಿ ತರುತ್ತಿದ್ದೀರಿ. ಅದ್ಯಾರಿಗೆ ಎನ್ನುವುದು ಪ್ರಶ್ನೆ? ನಾನು ಕೇಳುತ್ತಿರುವುದು ನಿಜವಾಗಿಯೂ ಇವತ್ತು ಬರಹಗಾರರು ಜಾಸ್ತಿ ಆಗಿದ್ದಾರೆ. ಪಬ್ಲಿಷರ್ಸ್ ಜಾಸ್ತಿ ಆಗಿದ್ದಾರೆ. ಸ್ವಲ್ಪಮಟ್ಟಿಗೆ ತಾವು ಸಬ್ಸಿಡೈಸ್ಡ್ ಮಾಡುವ ಆಲೋಚನೆಯನ್ನು ಮಾಡಬೇಕು. ಈ ಸಿನಿಮಾಗೆ ಕೊಟ್ಟ ಹಾಗೆ ಪ್ರೋತ್ಸಾಹ ಕೊಡಿ. ಎಲ್ಲಾ ಪುಸ್ತಕವನ್ನೂ ನಾನು ಸಬ್ಸಿಡೈಜ್ಡ್ ಮಾಡು ಎಂದು ಕೇಳುವುದಿಲ್ಲ. ಒಳ್ಳೆಯ ಪುಸ್ತಕಕ್ಕೆ ನಾವು ಕನಿಷ್ಠ ಇಷ್ಟು ಪರ್ಸೆಂಟ್ ರಿಯಾಯಿತಿ ಕೊಡುತ್ತೇವೆಂದು ಹೇಳಿ. ಪಬ್ಲಿಷ್ ಮಾಡಲಿಕ್ಕೆ ಅನುಕೂಲ ಮಾಡಿ ಕೊಡಿ. ಅಥವಾ ನಿಮ್ಮದೇ ಯಾವುದಾದರೂ ಪಬ್ಲಿಷಿಂಗ್ ಪ್ರಿಂಟಿಂಗ್ ಪ್ರೆಸ್‌ನಿಂದ ಪ್ರಿಂಟ್ ಮಾಡಿಸಿಕೊಡಿ. ಸಾಹಿತ್ಯ ಏನಾದರೂ ನಾವು ಹೀಗೆಯೇ ಬಿಟ್ಟುಕೊಂಡಿ ಹೋದರೆ ಬಹಳ

ದಿವಸ ಪುಸ್ತಕ ಬರೆಯುವವರು ದಿಕ್ಕು ಇಲ್ಲದ ಹಾಗೆ ಆಗುತ್ತಾರೆ. ಈಗ ಏಕೆ ಬರೆಯುತ್ತಿದ್ದಾರೆ. ಯಾರೋ ಲೆಕ್ಚರ್‌ಗಳು ಬರೆಯುತ್ತಿದ್ದಾರೆ. ಯಾರೋ ಸಂಬಳ ತೆಗೆದುಕೊಳ್ಳುವುದಕ್ಕೆ ಬರೆಯುತ್ತಾರೆ. ಆದರೆ ಒಬ್ಬ ಬಡತನದಲ್ಲಿರುವಂತಹ ವ್ಯಕ್ತಿ ಪುಸ್ತಕ ಬರೆದವನು ಪಬ್ಲಿಷ್ ಮಾಡಿಸುವಂತಹ ಸ್ಥಿತಿಯಲ್ಲಿ ಇಲ್ಲ. ಆ ಕಡೆ ಆ ಕಡೆ ಸ್ವಲ್ಪ ಯೋಚನೆ ಮಾಡಬೇಕೆಂದು ಹೇಳಿ ಇನ್ನು ಕಂದಾಯ ಸಚಿವರ ಬಗ್ಗೆ ನಾನು ಒಂದೆರಡು ಮಾತುಗಳನ್ನು ಆಡಬೇಕಾಗುತ್ತದೆ. ಅನೇಕ ಸಲ ಕೇಳಿಕೊಂಡಿದ್ದೇನೆ. ಈ ಎಕ್ಸೈಜ್ ಲ್ಯಾಂಡ್, ಸೇಂದಿ ವನ ಏನು ಇದೆ, ಇದನ್ನು ನೀವು ಬಗರ್ ಹುಕುಂನಲ್ಲಾದರೂ ವಿಲೇ ಮಾಡಿ ಅಥವಾ ಯಾವುದಾದರೂ ಒಂದು ಸ್ಪೇಷಲ್ ಸ್ಕೀಮ್ ತೆಗೆದುಕೊಂಡು ಬಂದು ಯಾರು ಪೊಸಿಷನ್‌ನಲ್ಲಿದ್ದಾರೆ ಅವರಿಗೆ ಕೊಡುವಂತಹ ವ್ಯವಸ್ಥೆ ಮಾಡಿ. ಇಲ್ಲಿ ಕನಿಷ್ಟ ಕಿಮ್ಮತ್ತಾದರೂ ಫಿಕ್ಸ್ ಮಾಡಿ ಕೊಡಿ ಕಟ್ಟುತ್ತಾರೆ. ನಿಮಗೆ ಅವರು ಎವಿಕ್ಟ್ ಮಾಡಿಸಿ ಸರ್ಕಾರಕ್ಕೆ ಮತ್ತೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಬಿಟ್ಟು ಕೊಡುವುದಕ್ಕೆ ಅವರು ತಯಾರಾಗಿ ಇಲ್ಲ. ನಿಮ್ಮ ಅಧಿಕಾರಿಗಳು ಸಮರ್ಥರೂ ಇಲ್ಲ, ಆ ಜಮೀನುಗಳನ್ನು ಬಿಡಿಸುಕೊಳ್ಳಲಿಕ್ಕೆ. ಏನಾದರೂ ಮಾಡಿ. ಬೆಂಗಳೂರು ಸಿಟಿಯಲ್ಲಿರುವವನು ಅನ್‌ಆಥರೈಸ್ಡ್ ಕನ್‌ಸ್ಟ್ರಕ್ಷನ್ ಮಾಡಿದವನಿಗೆ ನಾವು ರೆಗ್ಯುಲರೈಸ್ ಮಾಡುತ್ತೇವೆ. ಎನ್ನುವ ಜನ ಅಲ್ಲೊಬ್ಬ ರೈತನ ಜಮೀನು ರೆಗ್ಯುಲರೈಸ್ ಮಾಡುವುದಕ್ಕೆ ಸ್ಕೀಮ್ ತೆಗೆದುಕೊಳ್ಳುವುದಕ್ಕೆ ಎಷ್ಟು ವರ್ಷ ಯೋಚನೆ ಮಾಡುತ್ತೀರಿ?

5.50 ಪಿ.ಎಂ.

ಯಾವನೋ ಇಲ್ಲಿ ಬಂದು ಮೋಸ ಮಾಡಿ ನಿಮ್ಮ ಜಾಗದಲ್ಲಿ ಮನೆ ಕಟ್ಟಿಕೊಂಡು ರೆಗ್ಯುಲರೈಸ್ ಆಗಬಹುದು. ಆದರೆ, ಅಲ್ಲಿನ ನಾಲ್ಕು ಗುಂಟೆ ಜಮೀನನ್ನು ಉತ್ತುಕೊಂಡು ಗಿಡಗಳನ್ನು ಬೆಳೆದುಕೊಂಡವನಿಗೆ ರೆಗುಲರೈಸ್ ಮಾಡುವುದಕ್ಕೆ ತಮಗೆ ಇಷ್ಟೊಂದು ಜಿಜ್ಞಾಸೆಯೇ? ಎಕ್ಸೈಜ್ ಲ್ಯಾಂಡ್‌ನಲ್ಲಿ ಇವೊತ್ತು ಟ್ಯಾಡಿ ಇದೆಯೇ? ಈಚಲು ಗಿಡಗಳಿವೆಯೇ? ಅಥವಾ ರಾಜ್ಯದಲ್ಲೇನಾದರೂ ಜಿಲ್ಲೆ ಬಿಟ್ಟು ಜಿಲ್ಲೆಯಲ್ಲಿ ಟ್ಯಾಡಿ ಮಾಡುವುದಕ್ಕೆ ಅವಕಾಶವಿದೆಯೇ? ತಾವು ಏಕೆ ರಿಸರ್ವ ಆಗಿ ಇಟ್ಟುಕೊಂಡಿದ್ದೀರೆಂಬುದು ನನಗರ್ಥವಾಗಿಲ್ಲ. ಈಗ ಯಾವುದಾದರೊಂದು ಜಿಜ್ಞಾಸೆಗೆ ಸಮಸ್ಯೆಯಿರಬೇಕು. ಇವೊತ್ತು ಎಕ್ಸೈಜ್ ಲ್ಯಾಂಡ್ ಅನ್ನು ರಿಲೀಸ್ ಮಾಡುವುದಕ್ಕೆ ಸಮಸ್ಯ ಏನಿದೆ? ಇದನ್ನು ತಾವು ಹೇಳಬೇಕು. ಕ್ಯಾಬಿನೆಟ್ ಸಬ್-ಕಮಿಟಿ ಮುಂದೆ ಇದು ತೀರ್ಮಾನವಾಗಲಿಲ್ಲವೆನ್ನುವ ಒಂದೇ ಕಾರಣಕ್ಕೆ ನೀವು ಇದನ್ನು ಬಿಟ್ಟುಕೊಂಡು ಹೋದರೆ ನಿಜವಾಗಿಯೂ ಇದರ ಶ್ರೇಯಸ್ಸು, ಯಶಸ್ಸು ಬೇರೆಯವರಿಗೆ ಹೋಗುತ್ತದೆ. ಹಳೆಯ ಮೈಸೂರು ಭಾಗದಲ್ಲಿರುವ ಸೇಂದಿ ವನದ ಬಗ್ಗೆ ದಯಮಾಡಿ ತಕ್ಷಣ ತೀರ್ಮಾನ ತೆಗೆದುಕೊಳ್ಳಬೇಕು. ಯಾರು ಆ ಜಮೀನಿನಲ್ಲಿದ್ದಾರೆ, ಅವರಿಗೆ ಉಚಿತವಾಗಿ ಕೊಡಬೇಡಿ. ಬಗರ್‌ಹುಕುಂನಲ್ಲಿ ಕೊಡುವುದಕ್ಕೆ ಆಗದೇಹೋದರೆ ಕಿಮ್ಮತ್ತನ್ನು ನಿಗದಿಪಡಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ, ರಾಜ್ಯದ ಎಲ್ಲಾ ತಾಲ್ಲೂಕುಗಳಿಗೂ ಸಬ್-ಡಿವಿಜನಲ್ ಕೇಡರ್‌ನ ಅಧಿಕಾರಿಗಳನ್ನು ನೇಮಿಸಲಾಗುವುದೆಂದು,

ಇನ್ನೆರಡು ತಿಂಗಳೊಳಗೆ ಅಸಿಸ್ಟೆಂಟ್ ಕಮೀಷನರ್‌ಗಳನ್ನು ನೇಮಿಸಿ ತಾಲ್ಲೂಕು ಆಡಳಿತವನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತೇವೆಂದು ತಾವು ಭಾರಿಯಾಗಿ ಹೇಳಿದ್ದೀರಲ್ಲಾ, ಎಲ್ಲಿ ಹೋಯಿತು ನಿಮ್ಮ ಆಲೋಚನೆ? ಛೇರ್ಮನ್‌ರವರೆ, ಇದರ ಬಗ್ಗೆ ನಿಮಗೆ ಹೇಳಿರಲಿಲ್ಲವೆ? ರಾಜ್ಯದ ಎಲ್ಲಾ ತಾಲ್ಲೂಕುಗಳಿಗೂ ಅಸಿಸ್ಟೆಂಟ್ ಕಮೀಷನರ್‌ಗಳನ್ನು ನೇಮಿಸಲಾಗುವುದೆಂದು ಹೇಳಿದಾಗ ನೀವು ಇಲ್ಲಿ ಇರಲಿಲ್ಲವೆ? ಕಳೆದ ಸಾರಿ ಹೇಳಿದ ಮಾತು ಇದಾಗಿದ್ದು, ಇದುವರೆವಿಗೂ ಕಾರ್ಯಗತವಾಗಲ್ಲಿಲ್ಲ. ಅಸಿಸ್ಟೆಂಟ್ ಕಮೀಷನರ್‌ಗಳನ್ನು ಏಕೆ ನೇಮಿಸಲ್ಲಿಲ್ಲ? ತಾಲ್ಲೂಕುಗಳಿಗೆ ಅಸಿಸ್ಟೆಂಟ್ ಕಮಿಷನರ್‌ಗಳನ್ನು ತಕ್ಷಣ ನೇಮಿಸದೆ ಹೋದರೆ ನಿಜವಾಗಿಯೂ ತಾಲ್ಲೂಕುಗಳು ಹಾಳಾಗಿ ಹೋಗುತ್ತವೆ. ತಹಸೀಲ್ದಾರ್‌ಗಳು ಹೇಗಿದ್ದಾರೆಂದರೆ ನಾಲ್ಕು ಜನರು ಒಟ್ಟುಗೂಡಿ ದೊಣ್ಣೆ ಹಿಡಿದುಕೊಂಡು ಹೋಗಿ ಇಂತಹ ಎಂಡಾರ್ಸ್‌ಮೆಂಟ್ ಕೊಡು ಎಂದರೆ ಕೊಡುತ್ತಾರೆಯೇ ವಿನ: 'ನೀವು ಅಪೀಲ್ ಹಾಕಿ ಬಾ, ಮತ್ತೊಂದು ರೀತಿಯಲ್ಲಿ ಬಾ' ಎಂದು ಹೇಳುವುದಿಲ್ಲ. ಐದು ಜನರು ತಹಶೀಲ್ದಾರ್ ಬಳಿಗೆ ಹೋಗಿ ಹೆದರಿಸಿ ಬೇಕಾದಂತೆ ಆರ್ಡರ್‌ಗಳನ್ನು ಇವೊತ್ತು ಬರೆಸಿಕೊಂಡು ಬರಬಹುದಾಗಿದೆ. ಇದನ್ನು ನಾನು ಹುಡಗಾಟಿಕೆಗಾಗಿ ಹೇಳುತ್ತಿಲ್ಲ. ಅದಕ್ಕೆ ಕಾನೂನು ಬೇಕಾಗಿಲ್ಲ, ನೀತಿಯೂ ಬೇಕಾಗಿಲ್ಲ. ನನ್ನ ಮುಂದೆ ಸಮಸ್ಯೆ ಇಲ್ಲದಿದ್ದರೆ ಸಾಕೆಂದು ಮತ್ತು ಕಛೇರಿಯಿಂದ ಜನರು ಖಾಲಿಯಾದರೆ ಸಾಕೆಂದು ತಿಳಿದು ಅವರು ತಕ್ಷಣ ಬರೆದುಕೊಟ್ಟು ಬಿಡುತ್ತಾರೆ. ಅಧಿಕಾರಿಗಳು ಈ ರೀತಿ ಆಡಳಿತ ನಡೆಸಿದರೆ ನಾಳೆ ಗತಿಯೇನು? ಮಾನ್ಯ ಸದಸ್ಯರಾದ ಮಹದೇವ ಪ್ರಸಾದ್‌ರವರು ಹೇಳಿದಂತೆ ತಹಸೀಲ್ದಾರ್ ಕಛೇರಿಯಲ್ಲಿ ಗುಮಾಸ್ತರು ಯಾರು, ಪ್ಯೂನ್ ಯಾರು, ತಹಸೀಲ್ದಾರ್ ಯಾರು, ಅಧಿಕಾರಿಗಳು ಯಾರು ಎಂಬುದು ಗೊತ್ತಾಗದ ಸ್ಥಿತಿಗೆ ಬಂದಿದೆ. ಇವರು ಎಲ್ಲೋ ಕುಳಿತ್ತಿರುತ್ತಾರೆ, ಅವರು ಎಲ್ಲೋ ಕುಳಿತ್ತಿರುತ್ತಾರೆ. ಬಗರ್‌ಹುಕುಂಗೆ ಸಂಬಂಧಿಸಿದಂತೆ ನನ್ನ ತಾಲ್ಲೂಕಿನ ವಿಚಾರ ಹೇಳುವುದಾದರೆ 1994ನೇ ಇಸವಿಯಲ್ಲಿ ನಾನು ಅಧ್ಯಕ್ಷನಾಗಿದ್ದಾಗ 52 ಪ್ರಕರಣಗಳಿಗೆ ಸಂಬಂಧಿಸಿದಂತೆ ಜಮೀನು ಕೊಡಬೇಕೆಂದು ನೋಟೀಸ್ ಕೊಟ್ಟು, ದುಡ್ಡು ಕಟ್ಟಿಸಿಕೊಂಡಿದ್ದರೂ ಇದುವರೆವಿಗೂ ಸಾಗುವಳಿ ಚೀಟಿಯನ್ನು ಕೊಟ್ಟಿಲ್ಲ. ಇದರ ಬಗ್ಗೆ ತಾವು ಎನ್‌ಕ್ವೈರಿ ಮಾಡಿಸಿ. ಛೇರ್ಮನ್‌ರವರೆ, ಇಂತಹ ಗಹನವಾದ ವಿಚಾರವನ್ನು ತಾವು ಸನ್ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರಬೇಕು. ನಮ್ಮ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕಛೇರಿಯಲ್ಲಿ 102 ಸಾಗುವಳಿ ಚೀಟಿಗಳು ಕಳ್ಳತನವಾಗಿದೆ. ಈ ತಾಲ್ಲೂಕಿನಲ್ಲಿ ಎರಡು ಮ್ಯುಟೇಷನ್ ರಿಜಿಸ್ಟರ್ ಇದೆ, ಖಾತೆ, ಪಹಣಿ ಮಾಡಿಕೊಡುತ್ತಾರೆ. ಯಾರಿಗೆ ಜಮೀನಿನ ಸಾಗುವಳಿ ಚೀಟಿ ಕೊಟ್ಟಿದ್ದಾರೋ, ಅವರ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ದಾಖಲೆಗಳು ತಾಲ್ಲೂಕು ಕಛೇರಿಯಲ್ಲಿ ಇಲ್ಲ. ಅಲ್ಲದೆ ಗಣಕೀಕರಣ ಮಾಡುತ್ತೇವೆಂದು ತಾವು ಹೇಳುತ್ತಿದ್ದು, ಯಾವ್ಯಾವುದನ್ನು ತಾವು ಗಣಕೀಕರಣ ಮಾಡುತ್ತೀರೆಂಬ ಬಗ್ಗೆ ನಮಗೆ ಜಿಜ್ಞಾಸೆ ಉಂಟಾಗಿದೆ. ಆ ರೆಕಾರ್ಡ್ ಮಾಡುತ್ತೀರೋ? ಇಲ್ಲವೇ ನಿಮ್ಮ ಒರಿಜಿನಲ್ ರೆಕಾರ್ಡ್‌ಅನ್ನು ಗಣಕೀಕರಣ ಮಾಡುತ್ತೀರೋ? ನಾನು ಬಗರ್‌ಹುಕುಂ ಅನ್ನು ಹಂಚುವುದಕ್ಕೆ ಹೋದರೆ ಪಾಪ, ಗೆಯ್ಯುತ್ತಿರುವುದು ಯಾರೋ ಆಗಿದ್ದು, ನಾವು ಕೇಳಿದರೆ

ಹಿಡುವಳಿದಾರರೆಂದು ಹೇಳಿಕೊಂಡು ಬರುತ್ತಿದ್ದಾರೆ. ಸಾಗುವಳಿ ಚೀಟಿಯನ್ನು ಕದ್ದುಕೊಂಡು ಹೋಗಿ ಸ್ವಂತ ಖಾತೆ, ಪಹಣಿ ಮಾಡಿಸಿಕೊಂಡಿದ್ದಾರೆಂದು ಕಂದಾಯ ಸಚಿವರಿಗೆ ಹೇಳುತ್ತಿದ್ದೇನೆ. ತಾವು ಈ ಬಗ್ಗೆ ಹೆಚ್ಚಿನ ಕಳಕಳಿ ವಹಿಸಬೇಕು. ನಾನು ಇಲ್ಲಿ ತಮಗೆ ಡಿಮ್ಯಾಂಡ್ ಮಾಡುತ್ತೇನೆ, ನಾನು ಹುಡುಗಾಟದ ಮಾತನಾಡುತ್ತಿಲ್ಲ. ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಸಾಗುವಳಿ ಚೀಟಿಯನ್ನು ಕದ್ದು ಫೋರ್ಜರಿ ರುಜು ಮಾಡಿ ಖಾತೆ, ಪಹಣಿ ಮಾಡಿರುವ ಅಧಿಕಾರಿಗಳ ವಿರುದ್ಧ ಕನಿಷ್ಠ ಪಕ್ಷ ನೀವು ಕ್ರಮ ಜರುಗಿಸಿ 'ಕಂದಾಯ ಸಚಿವರು ಪರವಾಗಿಲ್ಲ' ಎನ್ನಿಸಿಕೊಳ್ಳುವುದಕ್ಕೆ ತಯಾರಾಗುತ್ತಿರೋ ಇಲ್ಲವೋ? ಏಕೆಂದರೆ, ತಾವು ಚಿಕ್ಕನಾಯಕನಹಳ್ಳಿಗೆ ಬಂದಿದ್ದಾಗ ನಾನು ಸೂಕ್ಷ್ಮವಾಗಿ ಈ ಮಾತನ್ನು ಹೇಳಿದೆ. ನಾವು ಅವರ ಮೇಲೆ ಕೇಸ್ ಹಾಕಿಸಿದ್ದೇವೆ. ಇವೊತ್ತು ಅವರೆಲ್ಲರೂ ನಾವು 'ಪೊಜೆಶನ್‌ನಲ್ಲಿದ್ದೇವೆ' ಎಂದು ಬಗರ್‌ಹುಕುಂನಲ್ಲಿ ಅರ್ಜಿ ತೆಗೆದುಕೊಂಡು ಬಂದಿದ್ದಾರೆ. ಅವೊತ್ತು ಕೇಸ್ ಹಾಕಿದರೆ ಇವೊತ್ತು ಅವರಿಗೆ ಮಂಜೂರು ಮಾಡುವ ಸ್ಥಿತಿ ನಿರ್ಮಾಣ ಮಾಡಿದಿರಿ. ನನಗೆ ತಿಳಿದ ಮಟ್ಟಿಗೆ ಯಾವ ಆಡಳಿತವೂ ಇಲ್ಲ. ಎಲ್ಲಿಯೂ ಎರಡು ಮ್ಯುಟೇಷನ್ ರಿಜಿಸ್ಟರ್‌ಗಳು ಇರಬಾರದು, ಖಾತೆ, ಪಹಣಿ ಆಗಬಾರದು. ಚಿಕ್ಕನಾಯಕನಹಳ್ಳಿ ಕಡೆ ತಾವು ಸ್ವಲ್ಪ ಗಮನಕೊಡಬೇಕು. ತಾವು ಈ ಬಗ್ಗೆ ಟಿಪ್ಪಣಿ ಮಾಡಿಕೊಂಡು ತಕ್ಷಣ ಎನ್‌ಕ್ವೈರಿ ಮಾಡಿಸಿ ಸಂಬಂಧಪಟ್ಟವರ ಮೇಲೆ ಕ್ರಮ ಜರುಗಿಸಬೇಕು. ತಹಸೀಲ್ದಾರ್‌ರವರು ನಿವೃತ್ತರಾದ ನಂತರ ರುಜು ಹಾಕಿದ್ದಾರೆ. ಯಾವ ತಹಸೀಲ್ದಾರ್‌ನ ರುಜುವಿದೆ 'ರುಜುವನ್ನು ನಾನು ಹಾಕಿಲ್ಲ' ವೆಂದು ಹೇಳುವ ಸ್ಥಿತಿಯಿದೆ. ಇಂಥದನ್ನಾದರೂ ತಾವು ಸರಿಪಡಿಸಿಕೊಡಬೇಕು. ಇದರ ಜೊತೆಗೆ ರೆವೆನ್ಯೂ ಇಲಾಖೆಯಲ್ಲಿ ಕಾಯಕಲ್ಪ ಮಾಡುತ್ತೇವೆಂದು ತಾವೇನು ಹೊರಟಿದ್ದೀರಿ, ಅದೆಲ್ಲವನ್ನೂ ತಾವು ಶೀಘ್ರವಾಗಿ ಮಾಡಬೇಕಾಗುತ್ತದೆ. ಇವೊತ್ತು ಖಾತೆ, ಪಹಣಿ ಮಾಡುವುದಕ್ಕೆ ದುಡ್ಡು ಕೊಡದೆ ನಡೆಯುವ ಸ್ಥಿತಿಯಲ್ಲಿ ಇಲ್ಲ. ದುಡ್ಡು ಕೊಡದಿದ್ದರೆ ಕೆಲಸ ನಡೆಯುವುದಿಲ್ಲ. ಆದುದರಿಂದ, ನೀವು ಏನಾದರೂ ಮಾಡಿ ಸ್ವಲ್ಪ ಬಿಗಿ ತರಬೇಕೆಂದು ಹೇಳಿ ಕೇಳಿಕೊಳ್ಳುತ್ತೇನೆ. ಛೇರ್ಮನ್‌ರವರು ಏಕೋ ಮೂಡ್‌ನಲ್ಲಿಲ್ಲ. 'ಹೇಮಾವತಿ'ಎಂಬ ಹೆಸರಿನವರೇ ನಮಗೆ ಅಪಾಯ! ನಮಗೆ ಹೇಮಾವತಿಯ ನೀರು ಬರಲಿಲ್ಲ, ನಮಗೆ ನೀವು ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಚಿಕ್ಕನಾಯಕನಹಳ್ಳಿಗೆ ಏನಾದರೂ ಮಾಡಿ ಹೇಮಾವತಿ ನದಿ ನೀರು ಕೊಡಿ ಎಂದು ಐದು ವರ್ಷಗಳಿಂದ ಕೇಳುತ್ತಿದ್ದೇವೆ. ಏಕೋ, ನಮ್ಮ ಗ್ರಹಚಾರವೇ ಚೆನ್ನಾಗಿಲ್ಲ. ಹೇಮಾವತಿ ಎನ್ನುವ ಹೆಸರೇ ನಮಗೆ ಆಗಿ ಬರಲಿಲ್ಲವೆಂದು ಹೇಳುತ್ತಾ ಸರ್ಕಾರದವರು ಆ ಕಡೆ ಹೆಚ್ಚಿನ ಆಸಕ್ತಿ ವಹಿಸಬೇಕು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಎಂ.ಪಿ. ಪ್ರಕಾಶ್‌ರವರಿಗೆ ಹೆಚ್ಚು ಒತ್ತಡ ತರುವುದೇನೆಂದರೆ, ಕುಡಿಯುವ ನೀರಿಗೆ ಏನಾದರೂ ಸಹಾಯ ಮಾಡಬೇಕು. 200, 300, 400 ಮತ್ತು 500 ಅಡಿ ಆಳದವರೆಗೆ ಬೋರ್ ತೆಗೆದು ಹ್ಯಾಂಡ್‌ಪಂಪ್‌ನಿಂದ ನೀರೆತ್ತಲು ಸಾಧ್ಯವಿಲ್ಲದಿರುವ ಪರಿಸ್ಥಿತಿಯಿರುವುದರಿಂದ ಎಂ.ಡಬ್ಲ್ಯೂ.ಎಸ್.ನಲ್ಲಿ ಓವರ್‌ಹೆಡ್ ಟ್ಯಾಂಕ್‌ಗಳನ್ನು ನಿರ್ಮಾಣ ಮಾಡಿಕೊಡಬೇಕು.

ತುಮಕೂರು ಮತ್ತು ಕೋಲಾರ ಜಿಲ್ಲೆಯ ಕೆಲವು ಭಾಗಗಳೇನಿವೆ, ಅಲ್ಲಿಗೆ ವಿಶೇಷವಾದದ್ದೊಂದು ಯೋಜನೆಯನ್ನು ಮಾಡಿಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್ :— ಈಗ ಹೊಸದಾಗಿ ಹೆಚ್ಚುವರಿಯಾಗಿ ಸುಮಾರು ಹದಿನಾಲ್ಕು ಕೋಟಿ ರೂಪಾಯಿಗಳಷ್ಟು ಹಣ ಬಂದಿರುವುದರಿಂದ ತುಮಕೂರು ಜಿಲ್ಲೆಗೆ ಒಂದು ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಕೊಟ್ಟಿದ್ದೇವೆ. ಅದನ್ನು ಇವೊತ್ತು ಹಣಕಾಸು ಇಲಾಖೆ ಕ್ಲಿಯರ್ ಮಾಡುವುದರಿಂದ ನಾಳೆ ಇಷ್ಟೊತ್ತಿಗೆ ಆ ಹಣ ತಮ್ಮ ಜಿಲ್ಲೆಗೆ ಬರುತ್ತದೆ. ಆ ಹೆಚ್ಚುವರಿ ಹಣದಲ್ಲಿ ತಾವು ಉಪಯೋಗಿಸಿಕೊಳ್ಳಬಹುದಾಗಿದೆ. ಅಲ್ಲದೆ 1999-2000ನೇ ಇಸವಿಯ ಆಯವ್ಯಯದಲ್ಲಿ ಐದು ನೂರು ಕೋಟಿ ರೂಪಾಯಿಗಳಷ್ಟು ಹಣವನ್ನು ಹೆಚ್ಚು ಮಾಡಿದ್ದೇವೆ. ತಮ್ಮ ಜಿಲ್ಲೆಗೆ ಇರುವ ತೊಂದರೆ ಬೇರೆ ತರಹದ್ದಾಗಿದ್ದು ಅಂತರ್ಜಲದ ಕೊರತೆಯಿದ್ದು, ಹೇಮಾವತಿ ನದಿ ನೀರನ್ನು ಅಲ್ಲಿರುವ ಕೆರೆಗಳಿಗೆಲ್ಲಾ ತುಂಬಿಸಿದರೆ ತಮಗೆ ಅನುಕೂಲವಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಅದರ ಬಗ್ಗೆ ನಾನು ಹೇಳಲು ಹೊರಟಿದ್ದೆ. ನಮಗೇನಾದರೂ ಸ್ಪೆಷಲ್ ಸ್ಕೀಮಿನಲ್ಲಿ ಅಥವಾ ರಾಜೀವ್ ಗಾಂಧಿ ಟೆಕ್ನಾಲಜಿ ಮಿಷನ್‌ನಲ್ಲಿ ತೆಗೆದಿಟ್ಟಿರುವ ಹಣದಲ್ಲಿಯಾದರೂ ಹೇಮಾವತಿ ನದಿಯಿಂದ ಎಷ್ಟೆಷ್ಟು ಕೆರೆಗಳಿಗೆ ನೀರು ತರಬಹುದೋ ತಂದು ಆ ಭಾಗದಲ್ಲಿರುವ ಕೆರೆಗಳಿಗೆ ಕೃಷಿ ಉದ್ದೇಶಕ್ಕಾಗಿ ನೀರು ಕೊಡದಿದ್ದರೂ ಪರವಾಗಿಲ್ಲ ನೀರನ್ನು ಅಲ್ಲಿ ಸಂಗ್ರಹಿಸಿ ಬೋರ್‌ವೆಲ್‌ಗಳನ್ನು ರೀಚಾರ್ಜ್ ಮಾಡುವುದಕ್ಕೆ ಅಥವಾ ಆ ನೀರನ್ನು ಪ್ಯೂರಿಫೈ ಮಾಡಿಕೊಂಡು ಟ್ಯಾಂಕುಗಳಿಗೆ ಪಂಪ್ ಮಾಡುವುದಕ್ಕಾದರೂ ಒಂದು ಯೋಜನೆ ಮಾಡಿಸಿ ಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್ :— ಮಾನ್ಯ ಸದಸ್ಯರಾದ ಟಿ.ಬಿ. ಜಯಚಂದ್ರರವರಿಗೆ ಗೊತ್ತಿರುವಂತೆ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರಾದ ನಾಗೇಗೌಡರು ಪರ್ಮಿಷನ್ ಕೊಟ್ಟಿರುವುದರಿಂದ ತಾವು ಆ ಕುರಿತು 5-6 ಪ್ರಸ್ತಾವನೆಗಳನ್ನು ಕಳುಹಿಸಿಕೊಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಆಗಲಿ. ನಾನು ತಮಗೆ ಆಗಲೇ ಹೇಳಿರುವಂತೆ ಬೆಳಗೆರೆ ಕೆರೆ, ಜೆ.ಸಿ.ಪುರ ಮತ್ತು ಗುಬ್ಬಿ ತಾಲ್ಲೂಕಿನ ದೊಡ್ಡಗುಬ್ಬಿ ಇಲ್ಲಿಗೆ 7-8 ಕಿಲೋಮೀಟರ್ ದೂರದಲ್ಲಿರು ಲೆಫ್ಟ್ ಸೈಡ್ ಆಫ್ ಹೇಮಾವತಿ ಕೆನಾಲ್‌ನಿಂದ ನೀರನ್ನು ತುಂಬಿಸಿ ಕೊಟ್ಟರೆ ಕನಿಷ್ಠ ಆ ಭಾಗದ ಸಮಸ್ಯೆಯನ್ನು ನಾವು ನಿಭಾಯಿಸಬಹುದು. ಮಾನ್ಯ ವೀರಪ್ಪಮೊಯಿಲಿಯವರು ಹೇಳಿದಂತೆ ನದಿ ದಂಡೆಯಲ್ಲಿ ವಾಸಿಸುವವರಿಗೆ ಪ್ರವಾಹ ಬಂದಂಥ ಸಂಧರ್ಭದಲ್ಲಿ ಮಾತ್ರ ತೊಂದರೆಯಾಗುತ್ತದೆ. ಆದರೆ, ಬರಪೀಡಿತ ಪ್ರದೇಶದಲ್ಲಿರುವವರು ಯಾವಾಗಲೂ ತೊಂದರೆಗೊಳಗಾದವರಾಗಿದ್ದಾರೆ. ಆದುದರಿಂದ, ನಮ್ಮ ಭಾಗದ ಸಮಸ್ಯೆ ಬಗ್ಗೆ ಸ್ವಲ್ಪ ಆಲೋಚನೆ ಮಾಡಿ ಸಮಸ್ಯೆ ಬಗೆಹರಿಸುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತಾ ಕಾಲಾವಕಾಶ ಕಡಿಮೆಯಿದ್ದರೂ ಕೂಡ ಇಷ್ಟು

ಹೊತ್ತು ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಛೇರ್ಮನ್‌ರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ :— ಮಾನ್ಯ ಛೇರ್ಮನ್‌ನವರೆ, ಇನ್ನು 2-3 ಜನ ಮಾನ್ಯ ಸದಸ್ಯರುಗಳು ಭಾಶಣ ಮಾಡಬೇಕಿರುವುದರಿಂದ ಇವೊತ್ತು ಭಾಷಣ ಮುಗಿಸಿ ಅದಕ್ಕೆ ನಾಳೆ ದಿವಸ ಉತ್ತರ ಕೊಡುವುದೆಂದು ತೀರ್ಮಾನವಾಗಿರುವುದರಿಂದ ಉಳಿದಿರುವ ಸಮಯವನ್ನು ಮಾತನಾಡಲು ಎಲ್ಲಾ ಸದಸ್ಯರುಗಳಿಗೂ ಹಂಚಿಕೊಟ್ಟರೆ ಅನುಕೂಲವಾಗುತ್ತದೆ.

+ಶ್ರೀ ಟಿ.ಬಿ.ಜಯಚಂದ್ರ (ಕಳಂಬೆಳ್ಳ) :— ಮಾನ್ಯ ಛೇರ್ಮನ್‌ರವರೆ, ನಾನು ಫೈನಾನ್ಸ್‌ಗೆ ಸೀಮಿತವಾಗಿ ಮಾತನಾಡುತ್ತೇನೆ. ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ರಾಜ್ಯದ ಹಣಕಾಸು ಸಚಿವರಾದ ಸಿದ್ದರಾಮಯ್ಯನವರು ಸತತವಾಗಿ ಐದನೆಯ ಆಯವ್ಯಯ ಪತ್ರವನ್ನು ಮಂಡಿಸಿದ್ದಾರೆ. 1999-2000ನೇ ಇಸವಿಯ ಆಯವ್ಯಯ ಪತ್ರವನ್ನು ಬಹುಧಾನ್ಯ ಸಂವತ್ಸರದಲ್ಲಿ ಮಂಡಿಸಿದ್ದು ಅದರ ಮೇಲೆ ಪ್ರಮಾಥಿ ಸಂವತ್ಸರದಲ್ಲಿ ಇವೊತ್ತು ಚರ್ಚೆಯಾಗುತ್ತಿದೆ. ಅವರು ಆಯವ್ಯಯವನ್ನು ಮಂಡಿಸುವಂಥ ಸಂದರ್ಭದಲ್ಲಿ ಜ್ಯೋತಿಷಿ ಅಥವಾ ಶಾಸ್ತ್ರದವರನ್ನು ಕೇಳಿದ್ದರೆ ಬಹುಶ: ಗೊತ್ತಾಗುತ್ತಿತ್ತು. ಪ್ರಮಾಥಿ ಸಂವತ್ಸರದಲ್ಲಿ ಗುರು ಅಧಿಪತಿಯಾಗಿದ್ದು, ಆಡಳಿತದಲ್ಲಿ ಬದಲಾವಣೆ ಎನ್ನುವ ಮಾತನ್ನು ಸರ್ವೆಸಾಮಾನ್ಯವಾಗಿ ಹೊರಗಡೆ ಮಾತನಾಡುತ್ತೇವೆ. ಇವೊತ್ತು ಬಜೆಟ್ ಎನ್ನುವುದೊಂದು ವಿಶೇಶವಾದ ಡಾಕ್ಯುಮೆಂಟ್ ಆಗಿದ್ದು ವಿಧಾನಸಭೆಯಲ್ಲಿ ಮಂಡಿಸುವಂಥಾದ್ದಾಗಿದೆ. ಬಜೆಟ್ ಎಂದರೆ 'ಬೊಗೆಟ್ 'ಎಂದು ಫ್ರೆಂಚ್ ಭಾಷೆಯಿಂದ ಬಂದಿರುವ ಶಬ್ದವಾಗಿದೆ. ಇಂಗ್ಲಿಷಿನಲ್ಲಿ 'ಬಜೆಟ್'ಎಂದು ಹೇಳುವುದನ್ನು ಕನ್ನಡದಲ್ಲಿ ನಾವು 'ಚರ್ಮದ ಚೀಲ'ವೆಂದು ಅರ್ಥಮಾಡಿಕೊಂಡರೆ ತಪ್ಪಾಗಲಾರದು. ಬಜೆಟ್ ಅನ್ನು ಮಂಡಿಸುವಂಥ ಸಂಧರ್ಭದಲ್ಲಿ ಚೀಲವನ್ನು ತರತಕ್ಕಂಥಾದ್ದು ಎಂದರೆ ಫೋಕಸ್ ಮಾಡಿ ಅದನ್ನು ಪ್ರಚಾರ ಮಾಡುವುದು ಬಹಳ ಕಾಲದಿಂದಲೂ ನಡೆದುಕೊಂಡು ಬಂದಿರುವ ವಾಡಿಕೆಯಾಗಿದೆ. ಬಜೆಟ್ ಒಂದು ವಿಶೇಶವಾದ ಡಾಕ್ಯುಮೆಂಟ್ ಆಗಿದ್ದು, ಇದು ರಾಜಕೀಯ ಸ್ಥಿತಿ-ಗತಿಗಳನ್ನು ವಿವರಿಸುವ ಒಂದು ದಾಖಲೆಯಾದರೂ ಕೂಡ ಅದರ ಒಟ್ಟಾರೆ ಸಾರಾಂಶ ತೆರಿಗೆಯ ನಿರ್ಧಾರಿತ ಕ್ರಮಗಳನ್ನು ಕಾರ್ಯಗೊಳ್ಳುವಂತಾದ್ದು ಮತ್ತು ಕಾರ್ಯನೀತಿಗಳನ್ನು ಸೂಚಿಸುವಂತಾದ್ದಾಗಿದೆ. ಇದೇ ಬಜೆಟ್‌ನಲ್ಲಿ ಮುಖ್ಯವಾಗಿ ಇರುವಂತಾದ್ದು. ಇವೊತ್ತು ಬಜೆಟ್ ಮಂಡಿಸುವ ಉದ್ದೇಶವೇನೆಂದರೆ, ನಿರೀಕ್ಷಿತ ಸಂಪನ್ಮೂಲದಲ್ಲಿ ಏನಾದರೂ ಕೊರತೆಯುಂಟಾದರೆ, ಆ ಕೊರತೆಯನ್ನು ಹೊಸ ಸಂಪನ್ಮೂಲಗಳ ಮುಖಾಂತರ ತುಂಬಬೇಕೆ ಅಥವಾ ವೆಚ್ಚವನ್ನು ಸೂಕ್ತ ರೀತಿಯಲ್ಲಿ ಕಡಿಮೆ ಮಾಡಬಹುದೇ? ಎನ್ನುವುದಕ್ಕೋಸ್ಕರ ಬಜೆಟ್‌ಗೆ ಬಹಳ ಮಹತ್ವವಿರತ್ತದೆ. ಈ ಸಾಲಿನ ಬಜೆಟ್‌ನಲ್ಲಿ ಎಷ್ಟು ಖರ್ಚಾಗುತ್ತದೆ ಮತ್ತು ಯಾವ ರೀತಿಯಾದ ವೆಚ್ಚವನ್ನು ಭರಿಸಲಾಗುತ್ತದೆಂಬುದನ್ನು ತಿಳಿದುಕೊಳ್ಳುವುದಕ್ಕೋಸ್ಕರ ಅದಕ್ಕೆ ಮಹತ್ವವಿದ್ದು ಜೊತೆಗೆ ಸರ್ಕಾರದ ಕಾರ್ಯನೀತಿ ಮತ್ತು ಅದರ ಉದ್ದೇಶ ಕೂಡ ಅಡಗಿರುತ್ತದೆ.

ಇವತ್ತು ವೆಚ್ಚದ ಮೊತ್ತವನ್ನು ಕಡಿಮೆ ಮಾಡುವ ಕೆಲಸವನ್ನು ಮಾಡಲಿಲ್ಲ. ಇವತ್ತು ರೆವಿನ್ಯೂ ರಿಸೀಟ್ಸ್‌ನ ಮೂಲಕ ಸಾಲವನ್ನು ತೀರಿಸತಕ್ಕ ಕೆಲಸವನ್ನು ಮಾಡಲು ಹೊರಟಿದ್ದಾರೆ. ನಾನು ಕೊಟ್ಟಿರುವ ಬಜೆಟ್‌ನ ವಿನಾಯಿತಿಗಳ ಬಗ್ಗೆ ಬಹಳ ಪತ್ರಿಕೆಗಳವರು ಹೊಗಳಿದ್ದಾರೆಂದು ಮಾನ್ಯ ಹಣಕಾಸು ಸಚಿವರಾದ ಸಿದ್ದರಾಮಯ್ಯನವರು ಮಾತನಾಡುವಾಗ ಬಹಳ ಸಲ ಹೇಳಿದರು. ಬಹಳ ಒಳ್ಳೆಯ ಬಜೆಟ್‌ನ್ನು ಮಾಡಿದ್ದಾರೆಂದು ಪತ್ರಿಕೆಗಳವರು ಹೇಳಿದ್ದಾರೆಂದು ಅವರು ಹೇಳಿದರು. ಯಾವುದಾದರೂ ಬಜೆಟ್‌ನ್ನು ಮಂಡನೆ ಮಾಡಿದ ಮೇಲೆ ಅದನ್ನು ಬೇರೆ ಬಜೆಟ್‌ಗೆ ಹೋಲಿಸಿ ಇರತಕ್ಕ ವ್ಯತ್ಯಾಸವನ್ನು ನೋಡಿದ ಮೇಲೆ ಎಷ್ಟರಮಟ್ಟಿಗೆ ತಮ್ಮ ಬಜೆಟ್ ರಾಜ್ಯದ ಸಂಪನ್ಮೂಲವನ್ನು ವೃದ್ಧಿಯ ದೃಷ್ಟಿಯಿಂದ ಸಹಾಯವಾಗಿದೆ ಎಂಬುದು ಗೊತ್ತಾಗುತ್ತದೆ. ತಾವು ತಮ್ಮ ಕಾಲಾವಧಿಯಲ್ಲಿ ಐದು ಸಂಪೂರ್ಣವಾದ ಬಜೆಟ್‌ನ್ನು ಮಂಡನೆ ಮಾಡಿದ್ದೀರಿ. ನಾನು ತಮ್ಮ ಕಾಲದ ಮತ್ತು ತಮ್ಮ ಹಿಂದೆ ಆಡಳಿತ ನಡೆಸಿದ್ದಂಥ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಮಂಡಿಸಿದ್ದಂಥ ಬಜೆಟ್‌ಗಳನ್ನು ಹೋಲಿಕೆ ಮಾಡಬಯಸುತ್ತೇನೆ. ಕಾಂಗ್ರೆಸ್ ಆಡಳಿತಾವಧಿಯಲ್ಲಿ ಮಂಡಿಸಿದ್ದ ಬಜೆಟ್ ಯಾವ ಪ್ರಮಾಣದಲ್ಲಿತ್ತು, ಅದರ ಸರ್ಪ್ಲಸ್ ಮತ್ತು ಡಿಫಿಸಿಟ್ ಯಾವ ಪ್ರಮಾಣದಲ್ಲಿ ಇತ್ತು ಎಂಬ ಬಗ್ಗೆ ಅಂಕಿ ಅಂಶವನ್ನು ಕೊಡುವುದಾದರೆ, 1989-90ರಲ್ಲಿ ನಾವು 3336 ಕೋಟಿ ಆದಾಯವನ್ನು ನಿರೀಕ್ಷೆ ಮಾಡಿದ್ದೆವು. ಖರ್ಚಾಗಿದ್ದು 3483 ಕೋಟಿ. ರೆವಿನ್ಯೂ ಡೆಫಿಸಿಟ್ 147 ಕೋಟಿ. 1990-91ರಲ್ಲಿ 3892 ಕೋಟಿ ಆದಾಯವನ್ನು ನಿರೀಕ್ಷೆ ಮಾಡಿದ್ದರೆ ಖರ್ಚಾಗಿದ್ದು 3971 ಕೋಟಿ, ಡೆಫಿಸಿಟ್ ಕೇವಲ 79 ಕೋಟಿ, 1991-92ರಲ್ಲಿ 4775 ಕೋಟಿ ಆದಾಯವನ್ನು ನಿರೀಕ್ಷೆ ಮಾಡಲಾಗಿತ್ತು, ಖರ್ಚಾಗಿದ್ದು 4954 ಕೋಟಿ, ಡೆಫಿಸಿಟ್ 179 ಕೋಟಿ, 1992-93ರಲ್ಲಿ 5472 ಕೋಟಿ ಆದಾಯವನ್ನು ನಿರೀಕ್ಷೆ ಮಾಡಲಾಗಿತ್ತು ಖರ್ಚು ಮಾಡಿದ್ದು 5592 ಕೋಟಿ 170 ಕೋಟಿ ಡಿಫಿಸಿಟ್. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗಲೂ ಸಹ ಸತತವಾಗಿ ಡೆಫಿಸಿಟ್ ಇತ್ತು. ಆದರೆ ಪ್ರಮಾಣ 170 ಕೋಟಿಯಿಂದ 179 ಕೋಟಿಯವರೆಗೆ ಮಾತ್ರ ಇತ್ತು. 1993-94ರಲ್ಲಿ 6325 ಕೋಟಿ ಆದಾಯದ ನಿರೀಕ್ಷೆ ಇತ್ತು, ಖರ್ಚಾಗಿದ್ದು 6208, ಆ ವರ್ಷ 117 ಕೋಟಿ ಸರ್ಪ್ಲಸ್ ಇತ್ತು 1994-95 ರಲ್ಲಿ ವೀರಪ್ಪಮೊಯ್ಲಿಯವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ 8168.36 ಕೋಟಿ ಆದಾಯದ ನಿರೀಕ್ಷೆ ಮಾಡಲಾಗಿದ್ದು, ಖರ್ಚಾಗಿದ್ದು 7948.42 ಕೋಟಿ. 219.94 ಸರ್ಪ್ಲಸ್ ಇತ್ತು. ತಮಗೆ ಅಧಿಕಾರವನ್ನು ಹಸ್ತಾಂತರ ಮಾಡುವ ಸಂದರ್ಭದಲ್ಲಿ ಆ ಹಿಡಿಗಂಟನ್ನು ಕೊಟ್ಟರು. 1994ರ ಡಿಸೆಂಬರ್‌ನಲ್ಲಿ ತಮಗೆ ಸರ್ಪ್ಲಸ್ ಬಜೆಟ್‌ನ್ನು ಹಸ್ತಾಂತರ ಮಾಡಿದರು. ತಮಗೆ ಅಧಿಕಾರವನ್ನು ವಹಿಸಿಕೊಟ್ಟ ಕೇವಲ ಮೂರುವರೆ ತಿಂಗಳಿನಲ್ಲಿ ಪರಿಣಾಮವೇನಾಯಿತು ಎಂದರೆ 1994-95ರ ಮೂರುವರೆ ತಿಂಗಳಿನಲ್ಲಿ 296 ಕೋಟಿ ಡೆಫಿಸಿಟ್ ಆಯಿತು. 1995-96ರಲ್ಲಿ 8543 ಕೋಟಿ ಆದಾಯವನ್ನೇನು ತಾವು ನಿರೀಕ್ಷೆ ಮಾಡಿದ್ದಿರಿ, ಖರ್ಚಾಗಿದ್ದು 8481 ಕೋಟಿ ಆ ವರ್ಷ 62 ಕೋಟಿ ಸರ್ಪ್ಲಸ್ ಬಜೆಟ್ ಮಾಡಿದಿರಿ. 1996-97ರಲ್ಲಿ 9622 ಕೋಟಿ ಆದಾಯ

ನಿರೀಕ್ಷೆ ಮಮಾಡಿದ್ದಾರೆ ಖರ್ಚಾಗಿದ್ದು 10,201 ಕೋಟಿ ಅಂದರೆ 579 ಕೋಟಿ ಡೆಫಿಸಿಟ್ ಬಜೆಟ್. 1997-98ರಲ್ಲಿ ಆದಾಯದ ನಿರೀಕ್ಷೆ ಮಾಡಿದ್ದು 11,4177 ಕೋಟಿ ಮೈನಸ್ 11,833 ಕೋಟಿ, 415 ಕೋಟಿ ಡೆಫಿಸಿಟ್. 1998-99 ಆದಾಯ ನಿರೀಕ್ಷೆ ಮಾಡಿದ್ದು 12,168 ಕೋಟಿ ಇದರಲ್ಲಿ 388 ಕೋಟಿ ಕೊರತೆಯಾಗಬಹುದು ಎಂದು ತಮ್ಮ ಭಾಷಣದಲ್ಲಿ ಹೇಳಿದ್ದೀರಿ. ಆದರೆ ರಿವೈಸ್ಡ್ ಎಸ್ಟಿಮೇಟ್ ಮಾಡಿದಾಗ ಖರ್ಚ 13,564.91 ಕೋಟಿಯಾಗಿತ್ತು, ಒಟ್ಟಾರೆ ಡೆಫಿಸಿಟ್ 1396.60 ಕೋಟಿ. 1999-2000ರಲ್ಲಿ ನೀವು ಆದಾಯ ಆದಾಯ ನಿರೀಕ್ಷೆ ಮಾಡಿರತಕ್ಕದ್ದು 13,991.78 ಕೋಟಿ, ಖರ್ಚಾಗಿರತಕ್ಕದ್ದು 15,390.97 ಕೋಟಿಗಳು. ಅಂದರೆ ಇವತ್ತು 1399 ಕೋಟಿ ರೂಪಾಯಿಗಳ ಕೊರತೆ ಬಜೆಟ್‌ನ್ನು ಮಂಡನೆ ಮಾಡಿದ್ದೀರಿ. ತಾವು ರಿವೈಸ್ಡ್ ಎಸ್ಟಿಮೇಟ್ ಮಾಡುವ ಸಂದರ್ಭದಲ್ಲಿ ಒಟ್ಟಾರೆ ಕೊರತೆ ಎಷ್ಟು ಆಗುತ್ತದೆ ಎಂದು ಈವತ್ತೇ ಹೇಳಲು ಸಾಧ್ಯವಾಗುವುದಿಲ್ಲ. ಏಕೆಂದರೆ ಹೋದ ವರ್ಷ ತಾವು ಬಜೆಟ್‌ನಲ್ಲಿ 388 ಕೋಟಿ ರೂ. ಕೊರತೆಯಾಗುತ್ತದೆಂದು ಹೇಳಿದ್ದೀರಿ, ಆದರೆ ರಿವೈಸಡ್ ಎಸ್ಟಿಮೇಟ್ಸ್ ಪ್ರಕಾರ ಅದು 1396 ಕೋಟಿಯಾಯಿತು. ಈವತ್ತೇ ಬಜೆಟ್ ಕೊರತೆ 1399 ಕೋಟಿಯಾಗುತ್ತಿರಬೇಕಾದರೆ ಈ ಶತಮಾನದ ಅಂತ್ಯದಲ್ಲಿ ಇದು ಯಾವುದೇ ರೀತಿಯಲ್ಲೂ ಎರಡರಿಂದ ಮೂರು ಸಾವಿರ ಕೋಟಿ ರೂಪಾಯಿಗಳ ಕೊರತೆ ಬೀಳುವ ಸಾಧ್ಯತೆಗಳು ಇವೆ. ಆದರೆ ತಮ್ಮ ಆಡಳಿತಾವಧಿಯು ಕೇವಲ ಡಿಸೆಂಬರ್ ವರೆಗೆ ಮಾತ್ರ ಇರುತ್ತದೆ. ಆದರೆ ಮುಂದೆ ಇಧಿಕಾರಕ್ಕೆ ಬರುವ ಸರ್ಕಾರಗಳಿಗೆ ಬಹಳ ಹೊರೆಯನ್ನು ಕೊಟ್ಟು ಹೋಗುತ್ತಿದ್ದೀರಿ. ಮುಂದೆ ಸಹ ತಾವೇ ಅಧಿಕಾರಕ್ಕೆ ಬರುವುದಾಗಿ ಹೇಳುತ್ತಿದ್ದೀರಿ. ತಾವು ನಿಜವಾಗಿಯೂ ಮುಂದಿನ ಸಲವು ಅಧಿಕಾರಕ್ಕೆ ಬರಬೇಕು ಎಂಬ ಉದ್ದೇಶವಿದ್ದರೆ ರಾಜ್ಯದ ಹಿತದೃಷ್ಟಿಯೇನಾದರೂ ತಮ್ಮ ಗಮನದಲ್ಲಿ ಇದ್ದಿದ್ದರೆ ಇಷ್ಟೊಂದು ಕೊರತೆಯ ಬಜೆಟ್‌ನ್ನು ಮಂಡಿಸಲು ಪ್ರಯತ್ನ ಮಾಡುತ್ತಿರಲಿಲ್ಲ. ಮಾನ್ಯ ಸಿದ್ದರಾಮಯ್ಯನವರು ಹಣಕಾಸಿನ ಸಚಿವರೂ ಹೌದು ಹಾಗೆಯೇ ರಾಜಕೀಯ ಪಕ್ಷದ ನಾಯಕರೂ ಹೌದು. ತಾವು ಇಂದು ಮಾಡಿರುವ ಬಜೆಟ್ ಭಾಷಣವು ರಾಜಕೀಯ ಪಕ್ಷದ ಮುಖಂಡರಾಗಿ ಮಾಡಿದಂಥ ಭಾಷಣವಾಗಿದೆಯೇ ಹೊರತು ಹಣಕಾಸು ಮಂತ್ರಿಗಳ ಭಾಷಣವಾಗಿ ಉಳಿದಿಲ್ಲ. ತಾವು ಮೈಸೂರಿನವರು. ವೈಯಕ್ತಿಕವಾಗಿ ನಾವಿಬ್ಬರೂ ಸ್ನೇಹಿತರು. ಮಹಾರಾಜರು ಮೈಸೂರು ರಾಜ್ಯವನ್ನು ಆಳುವಂಥ ಸಂದರ್ಭದಲ್ಲಿ, ನೂರು ವರ್ಷಗಳ ಹಿಂದೆ ಬಜೆಟ್ ಯಾವ ನಿಟ್ಟಿನಲ್ಲಿತ್ತು ಎಂದರೆ 1.79 ಕೋಟಿ ಬಜೆಟ್ ಅಂದಾಜು ಇತ್ತು. ಖರ್ಚಾಗಿದ್ದು 1.92 ಕೋಟಿ.ಆಗಲೂ ಕೊರತೆ ಬಜೆಟ್ ಇತ್ತು. ಏಕೆ ಕೊರತೆ ಬಜೆಟ್ ಇತ್ತು ಎಂದರೆ, ಆಗ ಸಾಂಕ್ರಾಮಿಕ ರೋಗವಾದ ಪ್ಲೇಗ್ ಇತ್ತು. ಆ ರೋಗ ಬಂದಾಗ ಊರಿನ ಜನರೆಲ್ಲಾ ಬೇರೆ ಕಡೆಗೆ ಹೋಗತಕ್ಕ ಸಾವಿರಾರು ಜನರು ಸತ್ತು ಹೋಗತಕ್ಕ ಸಂದರ್ಭದಲ್ಲಿ ಕೊರತೆ ಬಜೆಟ್ ಮಾಡಬೇಕಾಯಿತು. ನೂರು ವರ್ಷಗಳ ನಂತರ ಅದೇ ಮೈಸೂರಿನಿಂದ ಬಂದಿರತಕ್ಕ ಮೈಸೂರಿನ ಮಹಾರಾಜರ ಜಾಗದಲ್ಲಿ ಕುಳಿತು ತಾವು ಬಜೆಟ್ ಮಂಡನೆ ಮಾಡುತ್ತಿದ್ದೀರಿ, ಆದರೆ ಅವತ್ತು ಇದ್ದಂಥ

ಪ್ಲೇಗ್ ರೋಗ ಇವತ್ತು ಯಾವಾಗಲೂ ಬಂದಿರಲಿಲ್ಲ. ಆಕಸ್ಮಾತ್ ಪ್ಲೇಗ್ ಬಂದಿದ್ದರೆ ಜನತಾದಳದ ಸರ್ಕಾರಕ್ಕೆ ಬಂದಿದೆಯೆಂದು ಹೇಳಿದರೆ ತಪ್ಪಾಗಲಾರದು ಎಂದು ನನ್ನ ಭಾವನೆ. ಏಕೆಂದರೆ 1400 ಕೋಟಿ ರೂಪಾಯಿಗಳ ಕೊರತೆ ಬಜೆಟ್‌ನ್ನು ತಾವು ಮಂಡಿಸುತ್ತಿದ್ದೀರಿ. ಅದು ಶತಮಾನದ ಕೊನೆಯಲ್ಲಿ ಎರಡು ಇಲ್ಲವೇ ಮೂರು ಸಾವಿರವನ್ನು ಮೀರತಕ್ಕ ಸಂದರ್ಭವಿದೆಯೊಂಬುದನ್ನು ತಾವು ಮರೆಯಬಾರದು. ತಮ್ಮ ಆಡಳಿತಾವಧಿಯಲ್ಲಿ ಬಿಗಿಯನ್ನೇನಾದರೂ ತಂದು ಸಂಪನ್ಮೂಲವನ್ನು ವೃದ್ಧಿ ಮಾಡತಕ್ಕ ಕೊರತೆ ಬಜೆಟ್‌ನ್ನು ಕಡಿಮೆ ಮಾಡತಕ್ಕ ಪ್ರಯತ್ನವೇನಾದರೂ ಮಾಡಿದ್ದೀರಾ ಎಂಬ ಬಗ್ಗೆ ಹೇಳುವುದಾದರೆ, as on 31st March 1998, arrears in collection on tax on sales, trade, entry tax, entertainment tax and professional tax - Rs.784.7 crores.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್)ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಸ್ಟೇಟ್ ಎಕ್ಸೈಜ್‌ನಿಂದ 290.66 ಕೋಟಿ ರೂ.ಗಳು, ಸ್ಟಾಂಪ್ಸ್ ಅಂಡ್ ರಿಜಿಸ್ಟ್ರೇಷನ್‌ನಿಂದ 54 ಕೋಟಿ ರೂ.ಗಳು, ವಾಹನಗಳ ಮೇಲಿನ ತೆರಿಗೆಯಿಂದ 39.78 ಕೋಟಿ ರೂ.ಗಳು ಬಾಕಿ ಇದೆ. 31.3.98ರಲ್ಲಿದ್ದಂತೆ ಒಟ್ಟು ಬಾಕಿ ಹಣದ ಮೊತ್ತ 1169.6 ಕೋಟಿ ರೂ.ಗಳು. ಈ ಅರಿಯರ್ಸ್ ನಮ್ಮ ಕಾಲದಲ್ಲಿ ಇರಲಿಲ್ಲ ಎಂಬ ಮಾತನ್ನು ನಾನು ಹೇಳುವುದಿಲ್ಲ. ಅದು ನಮ್ಮ ಕಾಲದಲ್ಲೂ ಕೂಡ ಇತ್ತು. 30.3.94ರಲ್ಲಿದಂತೆ ನಿಮಗೆ ಅಧಿಕಾರ ಹಸ್ತಾಂತರ ಮಾಡಿದಂತಹ ಸಂದರ್ಭದಲ್ಲಿ ಕ್ಯಾರಿಡ್ ಓವರ್ ಲಾಸಸ್ ಎಲ್ಲಾ ಸೇರಿ 656.77 ಕೋಟಿ ರೂ.ಗಳು ಮಾತ್ರ ಡ್ಯೂಸ್ ಇತ್ತು. ಆದರೆ ನೀವು ಅಧಿಕಾರದಲ್ಲಿದ್ದ ಐದೇ ವರ್ಷಗಳಲ್ಲಿ ಈ ಪ್ರಮಾಣವನ್ನು 1169 ಕೋಟಿ ರೂ.ಗಳಿಗೆ ಏರಿಸಿದ್ದೀರಿ. ಹೀಗಿರುವಾಗ ನಿಮ್ಮ ಆಡಳಿತ ಎಷ್ಟರಮಟ್ಟಿಗೆ ಚೆನ್ನಾಗಿದೆ ಎಂಬುದನ್ನು ನೀವೆ ಲೆಕ್ಕ ಹಾಕಿ, ಆ ದಿಸೆಯಲ್ಲಿ ಯೋಚನೆ ಮಾಡಿ. ಈ ಕೊರತೆಯನ್ನು ಯಾವ ರೀತಿಯಲ್ಲಿ ಸರಿದೂಗಿಸುತ್ತೀರಿ? ನೀವು ಸಾಲ ತಂದು ಈ ಕೊರತೆ ಸರಿದೂಗಿಸುತ್ತಿದ್ದೀರಿ. ಕ್ಯಾಪಿಟಲ್ ಅಕೌಂಟ್‌ನಲ್ಲಿ ನೀವು ಇವತ್ತು ಸಾಲದ ರೂಪದಲ್ಲಿ ಹಣವನ್ನು ತಂದಿದ್ದೀರಿ. ಕ್ಯಾಪಿಟಲ್ ಅಕೌಂಟ್‌ನಲ್ಲಿ ನೂರಕ್ಕೆ ನೂರರಷ್ಟು ಹಣ ಸಾಲದ ರೂಪದಲ್ಲಿ ಬರುತ್ತದೆ. ಅದು ಓಪನ್ ಮಾರ್ಕೆಟ್ ಲೋನ್ಸ್ ಇರಬಹುದು ಅಥವಾ ರಿಸರ್ವ್ ಬ್ಯಾಂಕ್ ಲೋನ್ಸ್ ಇರಬಹುದು ಅಥವಾ ಎನ್‌ಸಿಡಿಸಿ ಲೋನ್ಸ್ ಇರಬಹುದು, ಆ ರೀತಿಯಾದ ಯಾವುದೇ ತರವಾದಂತಹದ್ದು ಇರಲಿ, ಕ್ಯಾಪಿಟಲ್ ಅಕೌಂಟ್‌ನಲ್ಲಿ ಸಾಲದ ರೂಪದಲ್ಲಿಯೋ ಹಣ ಬರುತ್ತದೆ. ಸಾಲವನ್ನು ತಂದು ನೀವು ಈ ಕೊರತೆಯನ್ನು ತುಂಬಿಸತಕ್ಕ ಪ್ರಯತ್ನ ಮಾಡಿದ್ದೀರಿ. ಹೀಗೆಂದಾಕ್ಷಣ ಬೇರೆ ಯಾರೂ ಕೂಡ ಹಿಂದೆ ಸಾಲ ಮಾಡಿಯೇ ಇಲ್ಲ ಎಂದೇನಿಲ್ಲ. ಸಾಲವನ್ನು ನಿರ್ದಿಷ್ಟವಾದಂತಹ ಸಂದರ್ಭಗಳಲ್ಲಿ ಮಾತ್ರ ನಿರ್ದಿಷ್ಟ ಉದ್ದೇಶಕ್ಕಾಗಿ ಮಾಡಬೇಕು. ರಾಜ್ಯಕ್ಕೆ ಅಗತ್ಯವಾಗಿ ಇನ್‌ಫ್ರಾಸ್ಟ್ರಕ್ಚರ್ ಅನ್ನು ಬಿಲ್ಡ್-ಅಪ್ ಮಾಡಲೇಬೇಕು ಎನ್ನುವಂತಹ ಸಂದರ್ಭದಲ್ಲಿ,

ಇನ್‌ಫ್ರಾಸ್ಟ್ರಕ್ಚರ್ ಅನ್ನು ಡೆರೆಲಪ್ ಮಾಡುವುದಕ್ಕೋಸ್ಕರ ಸಾಲವನ್ನು ತರಬಹುದು. ಇನ್‌ಫ್ರಾಸ್ಟ್ರಕ್ಚರ್ ಅನ್ನು ಡೆವಲಪ್ ಮಾಡಿ ಅದರಿಂದ ಇನ್‌ಕಂ ಬರುವಂತೆ ಮಾಡಿಕೊಂಡು ಅದರ ಮೂಲಕ ನಮ್ಮ ರೆವೆನ್ಯೂ ಅನ್ನು ಜಾಸ್ತಿ ಮಾಡಿಕೊಳ್ಳಬೇಕಾಗುವ ಸಂದರ್ಭಗಳಲ್ಲಿ ಮಾತ್ರ ಸಾಲವನ್ನು ತಂದು ಉಪಯೋಗ ಮಾಡಿಕೊಳ್ಳಬಹುದು. ಆದರೆ ನೀವು ಇವತ್ತು ಆ ಕೆಲಸವನ್ನು ಮಾಡುತ್ತಿಲ್ಲ. ಕ್ಯಾಪಿಟಲ್ ಅಕೌಂಟ್‌ನಿಂದ ನೀವು ದುಡ್ಡು ತಂದು ದಿನನಿತ್ಯದ ಖರ್ಚುಗಳಿಗೋಸ್ಕರ, ನೌಕರರ ಸಂಬಳ ಸಾರಿಗೆಗಳನ್ನು ಕೊಡುವುದಕ್ಕೋಸ್ಕರ ಬಳಸಿಕೊಳ್ಳುತ್ತಿದ್ದೀರಿ. ಸಾಲ ತಂದು ಈ ಉದ್ದೇಶಗಳಿಗೆ ನೀವು ಹಣವನ್ನು ಖರ್ಚು ಮಾಡಿ ಇದನ್ನೊಂದು ವಿಶಿಷ್ಟವಾದಂತಹ ಬಜೆಟ್ ಎಂದು ನೀವು ಹೇಳಿಕೊಳ್ಳುವುದಾದರೆ ಅದನ್ನು ಯಾರು ನಂಬುತ್ತಾರೆ? ಅದನ್ನು ನಂಬುವುದಕ್ಕೆ ಸಾಧ್ಯವೇ ಎಂಬುದನ್ನು ನೀವು ಯೋಚನೆ ಮಾಡಬೇಕಾಗುತ್ತದೆ. ನಿಮ್ಮ ಹಣಕಾಸಿನ ಪರಿಸ್ಥಿತಿ ಬಗ್ಗೆ ಮಾತನಾಡುವುದಾದರೆ.......

ಅಧ್ಯಕ್ಷರು :— ಮಾನ್ಯ ಜಯಚಂದ್ರರವರೇ, ನನಗೇನೂ ನೀವು ಮಾತನಾಡುವುದರಿಂದ ಏನೂ ತೊಂದರೆ ಇಲ್ಲ. ಸದನ ನಡೆಸಲು ಆಗತ್ಯವಾದ ಕೋರಂಗಿಂತ ಕೇವಲ ಇಬ್ಬರು-ಮೂವರು ಮಾತ್ರ ಜಾಸ್ತಿ ಇದ್ದಾರೆ. ನಾವು ಆ ಕಡೆ ಈ ಕಡೆ ನೋಡುವಾಗ ಯಾರುದರೂ 2-3 ಜನ ಎದ್ದು ಹೋಗಿ ಬಿಟ್ಟರೆ ಕೋರಂ ಇಲ್ಲದೇ ಸದನ ಮುಂದೂಡಬೇಕಾದ ಪರಿಸ್ಥಿತಿ ಒದಗಿ ಬರುತ್ತದೆ. ಬಜೆಟ್ ಮೇಲಿನ ಚರ್ಚೆ ಇಂದೇ ಮುಗಿದು ಹೋಗಬೇಕು. ಮಂಗಳವಾರ ವೋಟ್ ಆನ್ ಅಕೌಂಟ್ ಬಿಲ್ ಪಾಸ್ ಆಗಿ ಬರಬೇಕು. ಮಾನ್ಯ ಯೋಗೀಶ್‌ಭಟ್ ಮತ್ತು ಮಾನ್ಯ ಶಿವಪ್ಪನವರು ಐದೈದು ನಿಮಿಷಗಳ ಕಾಲ ಮಾತನಾಡಬೇಕೆಂದು ಇಚ್ಛೆ ಪಟ್ಟಿದ್ದಾರೆ. ಮಾನ್ಯ ಮುನಿಯಪ್ಪನವರೂ ಕೂಡ ಮಾತನಾಡಬೇಕೆಂದು ಬರೆದು ಕಳುಹಿಸಿದ್ದಾರೆ. ಭಾಷಣ ಮಾಡಬೇಕೆಂಬ ಆಸೆ ಇರುವವರು ಮಾನ್ಯ ಸದಸ್ಯರ ಕೊರತೆಯಾಗದಂತೆ ನೋಡಿಕೊಳ್ಳಬೇಕು.

ಶ್ರೀ ಟಿ.ಬಿ. ಜಯಚಂದ್ರ :— ಮಾನ್ಯ ಅಧ್ಯಕ್ಷರೇ, ಮಾರ್ಚ್ 1998ರಲ್ಲಿದ್ದಂತೆ ಸರ್ಕಾರ ಸಾಲದ ಗ್ಯಾರಂಟಿ 5413 ಕೋಟಿ ರೂ.ಗಳಾಗಿದೆ. ಸರ್ಕಾರ ಅಷ್ಟೊಂದು ದೊಡ್ಡ ಮೊತ್ತಕ್ಕೆ ಗ್ಯಾರಂಟಿ ಕೊಟ್ಟಿದೆ. ರಿಸರ್ವ ಬ್ಯಾಂಕ್‌ನವರು ಇನ್‌ಸಿಸ್ಟ್ ಮಾಡುತ್ತಿದ್ದಾರೆ ಎನ್ನುವ ಕಾರಣಕ್ಕೋಸ್ಕರ ನೀವು ಅದರ ಮೇಲೆ ಸೀಲಿಂಗ್ ತರಬೇಕೆನ್ನುವ ಪ್ರಯತ್ನವನ್ನು ಮಾಡುತ್ತಿದ್ದೀರಿ. ಯುಕೆಪಿಗೆ ತರತಕ್ಕಂಥ ಸಾಲ ಇದಕ್ಕೆ ಅನ್ವಯವಾಗುವುದಿಲ್ಲ ಎನ್ನುವಂತಹ ಮಾತನ್ನು ಹೇಳುತ್ತಿದ್ದೀರಿ. ಅದೊಂದು ವಿಷಯದಲ್ಲಿ ತಾವು ನನಗೆ ನೀವು ಉತ್ತರ ಕೊಡುವ ಸಂದರ್ಭದಲ್ಲಿ ಎಕ್ಸ್‌ಪ್ಲೈನ್ ಮಾಡಬೇಕಾಗುತ್ತದೆ. ಯುಕೆಪಿಗಾಗಿ ತರತಕ್ಕಂಥ ಸಾಲ, ಕೇಂದ್ರ ಸರ್ಕಾರದ ಸಾಲವನ್ನೂ ಸೇರಿಸಿದರೆ ಅದು ನಿಮ್ಮ ರೆವಿನ್ಯೂಗಿಂತ ಎರಡರಷ್ಟು ಆಗುವ ಸಂಭವವಿದೆ; ಈಗಾಗಲೇ ಎರಡು ಸಾವಿರ ಕೋಟಿ ರೂ. ನೀವು ಸಂಗ್ರಹಿಸಿದ್ದೀರಿ. ಮತ್ತೊಂದು ನಿಗಮವನ್ನು ಸ್ಥಾಪನೆ ಮಾಡಿ 600 ಕೋಟಿ ರೂ.ಗಳನ್ನು ಸಂಗ್ರಹಿಸಲು ಹೊರಟಿದ್ದೀರಿ. ಈ ವರ್ಷ ನೀವು ಕೆಲಸವನ್ನು ತ್ವರಿತವಾಗಿ ಮುಗಿಸಬೇಕಾಗಿರತಕ್ಕಂಥ

ಸಂದರ್ಭದಲ್ಲಿ ಇನ್ನೂ 3-4 ಸಾವಿರ ಕೋಟಿ ರೂ.ಗಳನ್ನು ಸಾಲವಾಗಿ ಎತ್ತಬಹುದು. 1996-97ಕ್ಕೆ ಲೆಕ್ಕ ಹಾಕಿದರೆ ಕೇಂದ್ರ ಸರ್ಕಾರದ ಸಾಲ ಇವತ್ತು 10ಸಾವಿರ ಕೋಟಿ ರೂ.ಗಳಿಗಿಂತ ಜಾಸ್ತಿಯಾಗಿದೆ. ನಾರು ವಿಪರೀತವಾಗಿ ಮಾಡತಕ್ಕ ಸಾಲದಿಂದ ಕರ್ನಾಟಕ ರಾಜ್ಯದ ಹಣಕಾಸಿನ ಪರಿಸ್ಥಿತಿ ಏರುಪೇರಾಗುತ್ತದೆ. ಯಾರೇ ಮುಖ್ಯಮಂತ್ರಿ ಆಗಲೀ, ಯಾರೇ ಹಣಕಾಸಿನ ಮಂತ್ರಿಗಳಾಗಿರಲಿ ಕರ್ನಾಟಕ ರಾಜ್ಯದ ಹಣಕಾಸಿನ ಪರಿಸ್ಥಿತಿಗೆ ತನ್ನದೇ ಆದಂತಹ ಸ್ಥಾನಮಾನಗಳೇನು ಇರುತ್ತಿತ್ತೋ ಅದು ಇವತ್ತು ಇಲ್ಲದಂತಾಗಿದೆ. ಬಿಹಾರ ಮತ್ತು ಇತರ ರಾಜ್ಯಗಳಿಗೆ ಹೋಲಿಕೆ ಮಾಡುವಂತಹ ಪರಿಸ್ಥಿತಿ ಇವತ್ತು ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಬಂತಲ್ಲಾ ಎಂದು ನನಗೆ ದು:ಖವಾಗುತ್ತಿದೆ. ನಾನ್ ಪ್ಲಾನ್‌ನಲ್ಲಿ ಶೇಕಡ 77ರಷ್ಟು ನಿಮ್ಮ ಇನ್‌ಕಂ ಎಕ್ಸ್‌ಪೆಂಡೀಚರ್ ಆಗುತ್ತಿದೆ. ಪ್ಲಾನ್‌ನಲ್ಲಿ ಶೇಕಡ 23 ರಷ್ಟು ಮಾತ್ರ ಆಗುತ್ತಿದೆ. ಕೇಂದ್ರ ಸರ್ಕಾರದ ಸಾಲ ಸುಮಾರು 11500 ಕೋಟಿ ರೂ.ಗಳಿದೆ. ಅಂದರೆ ಅಂದಾಜು 1200 ಕೋಟಿ ರೂ.ಗಳನ್ನು ಒಂದು ವರ್ಷಕ್ಕೇ ನೀವು ವಾಪಸ್ ಕೇಂದ್ರಕ್ಕೆ ಕೊಡಬೇಕು. ಇಂತಹ ಒಂದು ಪರಿಸ್ಥಿತಿಯಲ್ಲಿ ಇವತ್ತು ನಿಮ್ಮ ನಾನ್ ಪ್ಲಾನ್ ಬಜೆಟ್ ಮಿತಿ ಮೀರಿ ಹೊಗುತ್ತಿದೆ. ಇದರಿಂದಾಗಿ ಅಭಿವೃದ್ಧಿ ಕಾರ್ಯಗಳಿಗೆ ದುಡ್ಡೇ ಇಲ್ಲದಂತಹ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಒಟ್ಟಿನಲ್ಲಿ ನಿಮ್ಮ ಬಜೆಟ್ ಏನಾಗಿದೆ ಎಂದರೆ, it is completely imaginary and inflationary and you have taken us to a debt trap. ಎನ್ನುವಂತಹ ಒಟ್ಟಾರೆ ತೀರ್ಮಾನಕ್ಕೆ ನಾವು ಬರಬಹುದು. ಇವತ್ತು ನಿಮ್ಮ ಸಂಪನ್ಮೂಲದಲ್ಲಿ ಕೇವಲ ಶೇಕಡ 13ರಷ್ಟು ಸಾಲವನ್ನು ಮಾತ್ರ ತೀರಿಸುತ್ತಿದ್ದೀರಿ. ಅದು ಬಡ್ಡಿಗಾಗಿ ಹೋಗುತ್ತಿದೆಯೋ ಅಥವಾ ಅಸಲಿಗಾಗಿ ಹೋಗುತ್ತಿದೆಯೋ ನನಗೆ ಗೊತ್ತಿಲ್ಲ. ಕೇವಲ ಬಡ್ಡಿಕೊಟ್ಟು ಅಸಲನ್ನು ನಿಲ್ಲಿಸಿಕೊಳ್ಳುತ್ತಿದ್ದೀರೋ ಏನೋ ನನಗಂತೂ ಗೊತ್ತಿಲ್ಲ. ತಾವು ಉತ್ತರ ಕೊಡುವಂತಹ ಸಂದರ್ಭದಲ್ಲಿ ಆ ಬಗ್ಗೆ ಹೇಳಬೇಕಾಗುತ್ತದೆ. ಕೇಂದ್ರ ಸರ್ಕಾರದಿಂದ 600 ಕೋಟಿ ರೂ.ಗಳನ್ನು ಹೆಚ್ಚು ಸಾಲವಾಗಿ ತಂದಿದ್ದೀರಿ. ಅದರಲ್ಲಿ ನೀವು ಕೇವಲ 142 ಕೋಟಿ ರೂ.ಗಳನ್ನು ಮಾತ್ರ ತೀರಿಸಿದ್ದೀರಿ. ನಿಮ್ಮ ಅಂಕಿ ಅಂಶಗಳ ಆಧಾರದ ಮೇಲೆಯೇ ನಾನು ಇದನ್ನು ಹೇಳುತ್ತಿದ್ದೇನೆ. ಈ ಸಾರಿ ಕೇಂದ್ರ ಸರ್ಕಾರದಿಂದ 2083 ಕೋಟಿ ರೂ.ಗಳ ಸಾಲ ಬರುತ್ತದೆ ಎಂಬ ಮಾತನ್ನು ನೀವು ಹೇಳಿದ್ದೀರಿ. ಇದನ್ನು ನಂಬುವುದಕ್ಕೆ ಸಾಧ್ಯವೇ? ನಿಮ್ಮ ಹಣಕಾಸಿನ ಪರಿಸ್ಥಿತಿ ಸರಿಯಾಗಿ ಇದ್ದಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದಿಂದ 2083 ಕೋಟಿ ರೂ.ಗಳ ಸಾಲವನ್ನು ನಾವು ನಿರೀಕ್ಷೆ ಮಾಡಬಹುದು. ಆದರೆ ನಿಮ್ಮ ಹಣಕಾಸಿನ ಪರಿಸ್ಥಿತಿ ಬಹಳ ಕೆಟ್ಟದಾಗಿರುವುದರಿಂದ ಅಲ್ಲಿಂದ ಹಣ ಸಂಪೂರ್ಣವಾಗಿ ಬರುತ್ತದೆ ಎಂಬ ತೀರ್ಮಾನಕ್ಕೆ ನಾವು ಬರುವಂತಿಲ್ಲವೆಂಬುದನ್ನು ನೀವು ಒಪ್ಪಬೇಕಾಗುತ್ತದೆ. ಭಾರತ ದೇಶದ ಎಲ್ಲಾ ರಾಜ್ಯಗಳಿಗೆ ಅನ್ವಯಿಸುವಂತೆ ನೀತಿ ನಿಯಮಗಳನ್ನು ತಿಳಿಸುವ ರಾಜಾ ಚೆಲ್ಲಯ್ಯ ಎಂಬುವರ ರಿಪೋರ್ಟ್ ಇದೆ. ನಿಮ್ಮ ಬಜೆಟ್ ಭಾಷಣದಲ್ಲಿ ಆ ರಿಪೋರ್ಟ್‌ನಲ್ಲಿರತಕ್ಕಂಥ ಸಾರಾಂಶವನ್ನು ನಾವು ಅಡಾಪ್ಟ್ ಮಾಡಿಕೊಳ್ಳತಕ್ಕಂಥ ಪ್ರಯತ್ನದಲ್ಲಿದ್ದೇವೆ ಎಂಬ ಮಾತನ್ನು

ಹೇಳಿದ್ದೀರಿ. ನೀವಿನ್ನೂ ಆ ಪ್ರಯತ್ನದಲ್ಲಿ ಇದ್ದೀರಿ. ರಾಜಾ ಚೆಲ್ಲಯ್ಯ ರಿಪೋರ್ಟ್ ಪ್ರಕಾರ ಸಿಂಪ್ಲಿಫಿಕೇಷನ್ ಆಫ್ ಟ್ಯಾಕ್ಸ್ ಮಾಡಲು ನೀವು ಹೋರಟಿದ್ದೀರಿ. ಅದರಲ್ಲಿ ಮುಖ್ಯವಾಗಿ ಏನು ಇದೆ ಎಂದರೆ Simplification of taxes is also one of the important things. Single point taxation based on value added system that is another point and decrease in rate of tax and increase in the base of tax structure. That was the concept. ಆದರೆ ಈ ಎಲ್ಲಾ ನಿಯಮಗಳನ್ನು ಗಾಳಿಗೆ ತೂರತಕ್ಕಂಥ ಕೆಲಸ ಇಲ್ಲಾಗಿದೆ. ನೀವು ಬಜೆಟ್ ಮಂಡಿಸುವಾಗ ಬೇಕಾಬಿಟ್ಟಿಯಾಗಿ ಎಲ್ಲಾ ನಿಯಮಗಳನ್ನು ಗಾಳಿಗೆ ತೂರತಕ್ಕ ಕೆಲಸವನ್ನು ಮಾಡಿದ್ದೀರಿ. ಇವತ್ತು ಸಾಮನ್ಯ ಜನರು ನಿಮ್ಮ ಬಜೆಟ್‌ನಿಂದ ಸಾಕಷ್ಟು ನಿರೀಕ್ಷೆ ಮಾಡಿದ್ದರು. ಆದರೆ ನೀವು ಅವರಿಗೆ ಯಾವ ರೀತಿಯ ಕೊಡುಗೆಯನ್ನೂ ಕೂಡ ಕೊಟ್ಟಿಲ್ಲ. ನಿಮ್ಮ ಬಜೆಟ್‌ನಲ್ಲಿ ನೀವು ಐಸ್‌ಕ್ರೀಂ, ಬೀರ್, ಹಳೆಯ ಕಾರ್ ಇವುಗಳ ಮೇಲಿನ ತೆರಿಗೆ ಕಡಿಮೆ ಮಾಡಿದ್ದೀರಿ. ಆದರೆ ನಿಮಗೆ ಮತ ಕೊಟ್ಟಂತಹ ಬಡವರು ನಿಮ್ಮಿಂದ ಇದನ್ನು ನಿರೀಕ್ಷೆ ಮಾಡಿರಲಿಲ್ಲ. ಅವರು ಇವತ್ತು ಐಸ್‌ಕ್ರೀಂ ಅನ್ನು ಬಯಸಲಿಲ್ಲ, ಓಲ್ಡ್ ಕಾರ್ ಅನ್ನು ಹತ್ತಲು ಬಡವ ಪ್ರಯತ್ನ ಮಾಡುತ್ತಿರಲಿಲ್ಲ, ಬೀರ್ ಕುಡಿಯಲಿಕ್ಕೆ ಮೊದಲೇ ಬಡರ ಹೋಗುತ್ತಿರಲಿಲ್ಲ. ರೋಟಿ, ಕಪಡಾ ಮತ್ತು ಮಕಾನ್ ಅಂದರೆ ಅನ್ನ, ಬಟ್ಟೆ ಮತ್ತು ಸೂರು ಅನ್ನು ಬಡವ ಸರ್ಕಾರದಿಂದ ನಿರೀಕ್ಷೆ ಮಾಡುತ್ತಿದ್ದ.

6.20 ಪಿ.ಎಂ.

ಅಂತಹ ಬಡ ಮತದಾರರಿಗೆ, ಈ ರಾಜ್ಯದ ಜನರಿಗೆ ನೀವು ಕೊಟ್ಟಿದ್ದು ಏನೆಂದರೆ, ಕಾರ್ ಐಸ್‌ಕ್ರೀಂ ಮತ್ತು ಬೀರ್. ಬೀರ್ ಮೇಲೆ ಟ್ಯಾಕ್ಸ್ ಕಡಿಮೆ ಮಾಡತಕ್ಕಂತಹ ಕೆಲಸ ಮಾಡಿದ್ದೀರಿ. ನೀವು ಇದನ್ನು ಏಕೆ ಮಾಡುತ್ತಿದ್ದೀರಿ ಎಂಬುದು ಗೋತ್ತಾಗಲಿಲ್ಲ. ಕೊನೆ ಪಕ್ಷ ಇದರಲ್ಲಿ ಆದರೂ ಕೂಡ ನೀವು ಸಂಪನ್ಮೂಲ ಜಾಸ್ತಿ ಮಾಡತಕ್ಕಂತಹ ಕೆಲಸ ಮಾಡದೆ ಇದ್ದರೆ ಹೇಗೆ? ಬೀರ್ ಕುಡಿಯತಕ್ಕಂತಹವರು ಯಾರು? ಅದರ ಜೊತೆಗೆ ನೀವು ಮನೆಗಳನ್ನು ಕಟ್ಟಿಸುವುದರ ಬಗ್ಗೆ ವರ್ಷಕ್ಕೆ ಒಂದು ಲಕ್ಷ ಮನೆ ಎಂದು ಹೇಳಿದಿರಿ. 1986-87, 1987-88 ಮತ್ತು 1988-89ರಲ್ಲಿ ಕಟ್ಟಬೇಕಾಗಿದ್ದ ಮನೆಗಳಿಗೆ ಇನ್ನೂ ಕೂಡ ಹಣ ಪಾವತಿ ಮಾಡಬೇಕಾಗಿದೆ. ಒಂದೊಂದಕ್ಕೂ 15-20 ಲಕ್ಷ ರೂಪಾಯಿಗಳನ್ನು ನೀವು ಬಿಡುಗಡೆ ಮಾಡಬೇಕಾಗಿದೆ. ಮನೆಗಳ ಮೇಲೆ ಖರ್ಚು ಮಾಡಬೇಕೆಂದು ಒಂದುವರೆ ಲಕ್ಷ ಮನೆಗಳು ಕಟ್ಟಬೇಕೆಂದು ಹೇಳುತ್ತಿದ್ದೀರಿ, ಇವತ್ತು ನಿಮ್ಮ ಎಲ್ಲಾ ಮನೆಗಳನ್ನು ಪೂರ್ತಿ ಮಾಡಬೇಕಾದರೆ ಯಾವ ಹೊಸ ಮನೆಗಳನ್ನು ತೆಗೆದುಕೊಳ್ಳದೆ ಅರ್ಧಂಬರ್ಧ ಕಟ್ಟಿರತಕ್ಕಂತಹ ಮನೆಗಳಿಗೆ ನೀವು ದುಡ್ಡು ಪೂರೈಸಿದರೆ ದೊಡ್ಡ ಸಹಾಯ ಮಾಡಿದ ಹಾಗೆ ಆಗುತ್ತದೆ. ಜನ ನಿಮ್ಮನ್ನು ನೆನೆಸುತ್ತಾರೆ. ಒಂದೂವರೆ ಲಕ್ಷ ಮನೆ ಕಟ್ಟುತ್ತೀರಿ, ಎಲ್ಲಿದೆ ನಿಮ್ಮ ಹತ್ತಿರ ಹಣ, ಅಡಿಷನಲ್ ರಿಸೋರ್ಸಸ್ ಮೊಬಲೈಸ್ ಮಾಡುವುದಕ್ಕೆ ಎಲ್ಲಿ ಆಗುತ್ತದೆ? *Additional*

resources mobilisation is purely inflationary. ಚುನಾವಣೆ ಎದುರಾಗಿರುವುದರಿಂದ ಜನಗಳಿಗೆ ಸುಮ್ಮನೆ ಆಶ್ವಾಸನೆ ಕೊಡತಕ್ಕಂತಹ ಕೆಲಸ ಆಗಿದೆ ಎನ್ನುವುದು ಬಿಟ್ಟರೆ ಬೇರೆ ಏನೂ ಆಗಿಲ್ಲ. ಇನ್ನೊಂದು ಬಹಳ ಮುಖ್ಯವಾಗಿ ಕೇಂದ್ರ ಸರ್ಕಾರದವರು ಅಮರ್ತ್ಯಸೇನ್‌ರವರ ನಾರ್ಮ್ಸ್ ಪ್ರಕಾರ, ಅಮರ್ತ್ಯಸೇನ್‌ರವರು ಭಾರತದಲ್ಲಿ ಹುಟ್ಟಿ, ಭಾರತದಲ್ಲಿ ಬೆಳೆದು, ಭಾರತ ದೇಶದ ಪರಿಸ್ಥಿತಿ ಅರ್ಥಮಾಡಿಕೊಂಡು ಅದರಲ್ಲಿ ನೋಬಲ್ ಪ್ರಶಸ್ತಿ ಪಡೆಯುವಂತಹ ಮಟ್ಟಕ್ಕೆ ಹೋದರು. He is a good economist. ಭಾರತ ಸರ್ಕಾರ ಕೂಡ ಅವರಿಗೆ ಇವತ್ತು "ಭಾರತ ರತ್ನ" ಪ್ರಶಸ್ತಿ ಕೊಟ್ಟಿದೆ. ಅವರು ಹಾಕಿ ಕೊಟ್ಟಿರತಕ್ಕಂತಹ ನೀತಿ ನಿಯಮಗಳ ಅಡಿಯಲ್ಲಿ ಬಹಳ ಮುಖ್ಯವಾಗಿ ಅವರು ಹೇಳಿರತಕ್ಕಂಥದ್ದು Human development index and social safety net. ಈ ಎರಡನ್ನು lack of entitlement ಎನ್ನುವದರಲ್ಲಿ ವಿವರಣೆ ಮಾಡುವಾಗ ಅವರು ಹೆಚ್ಚಿಗೆ ಒತ್ತು ಕೊಡಬೇಕಾಗಿರತಕ್ಕಂಥದು ಎಜ್ಯುಕೇಷನ್ ನ್ಯೂಟ್ರೀಷನ್ ಮತ್ತು ಹೆಲ್ತ್. ಅದಕ್ಕೆ ನೀವು ಹೇಳಿದ್ದೀರಿ, ಸಾಕಷ್ಟು ಪ್ರೋತ್ಸಾಹ ಕೊಡುವುದಕ್ಕೆ ಮಾಡಿದ್ದೇವೆಂದು ಹೇಳಿದಿರಿ, ಆದರೆ ನಿಮ್ಮ ಡಿಫಿಸಿಟ್ ಬಜೆಟ್‌ನಲ್ಲಿ ನೀವು ಖಂಡಿತ ಅದನ್ನು ಅಚೀವ್ ಮಾಡುವುದಕ್ಕಾಗುವುದಿಲ್ಲ. ನೀವು ಅರ್ಥ ಮಾಡಿಕೊಳ್ಳಬೇಕು. ಯಾವುದೇ ದೇಶದ ಆರ್ಥಿಕ ಪರಿಸ್ಥಿತಿ ಉತ್ತಮವಾಗಬೇಕಾದರೆ ನೀವು ಈ ದಿಸೆಯಲ್ಲಿ ಈವತ್ತು ಬಜೆಟ್ ಮಂಡನೆ ಮಾಡಬೇಕಾಗುತ್ತದೆ. Entire third-world countries in the world, they are following the same norm. They have accepted it. ದುರಾದೃಷ್ಟ ಏನಾಗಿದೆ ಎಂದರೆ, ನಮ್ಮ ದೇಶದಲ್ಲಿ ಇತಿಮಿತಿಗೆ ಅನುಕೂಲವಾಗುವ ರೀತಿಯಲ್ಲಿ ಅವರು ಕೊಟ್ಟರೂ ಕೂಡ ಅವರನ್ನು ಒಪ್ಪದೆ ಇರತಕ್ಕಂಥದ್ದು ಇದು ಬಹಳ ತಪ್ಪಿನ ಕೆಲಸ. ಆದಕ್ಕೆ ನೀವು ಯಾವುದೇ ತರಹದ ಗೌರವ ಕೊಟ್ಟಿಲ್ಲ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಇನ್ನೊಂದು ಬಹಳ ಮುಖ್ಯವಾದ ವಿಚಾರ, ಹೋಲ್‌ಸೇಲ್ ಪ್ರೈಸ್ ಇಂಡೆಕ್ಸ್‌ನಲ್ಲಿ 1997-98ರಲ್ಲಿ 3.37 ಇತ್ತು, 1998-99ರಲ್ಲಿ 5.7 ಆದರೆ 1999-2000 ಇಸವಿಗೆ ನಿಮ್ಮ ಸರ್ವೆ ಪ್ರಕಾರ ಎಷ್ಟಾಗುತ್ತದೆ ಎಂದು ಗೊತ್ತಿಲ್ಲ. ಈ ಕೊರತೆಯಿಂದ ಜನ ಇವತ್ತು ಬದುಕುವುದಕ್ಕೆ ಕಷ್ಟ. ಅದರಲ್ಲೂ ವಿಶೇಷವಾಗಿ ಮಧ್ಯಮ ವರ್ಗದ ಜನರಿಗೆ ಕೊಳ್ಳತಕ್ಕಂತಹ ಶಕ್ತಿ ಇವತ್ತು ಇಲ್ಲವೆಂದು ನೀವು ಒಪ್ಪಬೇಕಾಗುತ್ತದೆ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಿ. ನಿಮ್ಮ ಆಡಳಿತದಿಂದ ಇವತ್ತು ಬಿಸ್‌ನೆಸ್ ಕರ್ನಾಟಕ ರಾಜ್ಯ ಬಿಟ್ಟು ಹೊರ ರಾಜ್ಯಕ್ಕೆ ಹೋಗುತ್ತದೆ ಎಂದು ಒಂದೇ ಒಂದು ಪಾಯಿಂಟ್ ಹೇಳಿ ಮಲ್ಟಿಪಾಯಿಂಟ್‌ನಿಂದ ಸಿಂಗಲ್ ಪಾಯಿಂಟ್‌ಗೆ ಬರಬೇಕು ಎನ್ನತಕ್ಕಂತಹ ಉದ್ದೇಶ ನಿಮ್ಮದು. ಇವತ್ತು ಕೋರ್ಟಿನಲ್ಲಿ ಏನು ಮಾಡಿದ್ದೀರಿ, ಸಿಂಗಲ್ ಪಾಯಿಂಟ್‌ನಿಂದ ಹೋಗಿ ಮಲ್ಟಿ ಪಾಯಿಂಟ್ ತಂದು ಇವತ್ತು ಒಂದು 166 ಗ್ರ್ಯಾಮ್ಸ್ ಗೋಲ್ಡ್‌ಗೆ 750 ರೂಪಾಯಿ ಕಾಸ್ಟ್ ಜಾಸ್ತಿಯಾಗುತ್ತದೆ. ನಿಮಗೆ ಏನಾಗಿದೆ ಎಂದರೆ, ಇವತ್ತು ಕರ್ನಾಟಕದ ಯಾವುದೇ ಮದುವೆ ಮುಂಜಿ ಆಗಬೇಕೆಂದರೆ, ಚಿನ್ನವನ್ನು ಮದ್ರಾಸ್ ಇಲ್ಲ ಬಾಂಬೆಗೆ ಹೋಗಿ ತರಬೇಕು. ಅಲ್ಲಿ ಬೈ ಗೋಲ್ಡ್ ಅಟ್ ಮಂಬೈ ಮತ್ತು

ದುಬೈ ರೇಟ್ಸ್ ಎಂದು ಬೋರ್ಡ್‌ಗಳನ್ನು ಹಾಕಿರುತ್ತಾರೆ. ಚಿನ್ನ ತರಬೇಕಾದರೆ ಸೇಲಂ ಕೃಷ್ಣಗಿರಿಗೆ ಹೊಗುವ ಪ್ರಶ್ನೆ ಆದರೆ, ನಮ್ಮ ಇರತಕ್ಕಂತಹ ಟ್ರೇಡ್ ಹೋಗುತ್ತದೆ. ನಮ್ಮ ಬೊಕ್ಕಸಕ್ಕೆ ಬರತಕ್ಕಂತಹ ತೆರಿಗೆ ಕೂಡ ಬಹಳಷ್ಟು ಕಡಿಮೆಯಾಗುತ್ತದೆ ಎಂದು ಹೇಳಿ, ಎನ್‌ವಿರಾನ್‌ಮೆಂಟ್ ಕಾನ್‌ಸೆಪ್ಟ್ ಬಗ್ಗೆ ಇಡೀ ಪ್ರಪಂಚದ ಎಲ್ಲಾ ದೇಶಗಳು ಅದರ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಹೆಚ್ಚಿನ ಒತ್ತು ಕೊಡಬೇಕಾಗುತ್ತದೆ. ಕರ್ನಾಟಕದಲ್ಲಿ ಕೇಂದ್ರ ಸರ್ಕಾರದ ನೀತಿ ಪ್ರಕಾರ 33 ಪರ್ಸೆಂಟ್ ಕಾಡು ಇಲ್ಲದೇ ಇದ್ದರೂ ಕೂಡ 20 ಪರ್ಸೆಂಟ್ ಕಾಡು ಇದ್ದರೂ ಅದು ಶಾಶ್ವತವಾದ ಕಾಡು ಹೆಚ್ಚು ಹಾಳಾಗದೆ ಇರುವ ರೀತಿಯಲ್ಲಿ ನೋಡುಕೊಳ್ಳಬೇಕಾಗುತ್ತದೆ. ಪ್ಲಾಸ್ಟಿಕ್ ಮೇಲೆ ನೀವು ತೆರಿಗೆ ಕಡಿಮೆ ಮಾಡಿದ್ದೀರಿ. ಒಂದಾನೊಂದು ಕಾಲದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಪ್ಲಾಸ್ಟಿಕ್ ಬ್ಯಾನ್ ಮಾಡಬೇಕೆಂದು ಹೊರಟಿರಬೇಕಾದರೆ, ಅದರ ಮೇಲೆ ತೆರಿಗೆ ಕಡಿಮೆ ಮಾಡಿ ಹೆಚ್ಚು ಪ್ಲಾಸ್ಟಿಕ್ ಉಪಯೋಗ ಮಾಡಬೇಕೆಂದು ಹೊರಟರೆ ಅದು ಏನಾಗುತ್ತದೆ ಎಂದು ನೀವು ಯೋಚನೆ ಮಾಡಿ. ಅದು ಬ್ಯಾನ್ ಮಾಡಬೇಕಾಗುತ್ತದೆ. ಅದರಿಂದ ನಾನಾ ತರಹದ ಪ್ರತಿಕೂಲ ಅನಾನುಕೂಲಗಳಾಗುತ್ತವೆ. ಆರೋಗ್ಯದ ಮೇಲೆ ಪರಿಣಾಮವಾಗುತ್ತದೆ. ಎನ್‌ವಿರಾನ್‌ಮೆಂಟ್ ಮೇಲೆ ಪರಿಣಾಮವಾಗುತ್ತದೆ ಎಂದು ಎನ್ನತಕ್ಕಂತಹ ಕಾರಣದಿಂದ ಅವರೆಲ್ಲರೂ ಬ್ಯಾನ್ ಮಾಡಿರತಕ್ಕಂಥದ್ದು. ಅಲ್ಲಿಂದ ಬರತಕ್ಕಂತಹ ರಿ-ಪ್ರೋಸೆಸ್ ಮೆಟೀರಿಯಲ್ಸ್ ತರತಕ್ಕಂತಹ ಕೆಲಸ ಇವತ್ತು ನಡೆಯುತ್ತಿದೆ. ಅವರಿಗೂ ಗೊತ್ತಿದೆ, ಈ ಉದ್ಯಮದಲ್ಲಿ ಏನು ನಡೆಯುನ್ತದೆ ಎಂದು. ಇವತ್ತು ನೀವು ತಿಳಿದಿರುವ ರೀತಿಯಲ್ಲಿ ಒರಿಜಿನಲ್ ಮೆಟಿರಿಯಲ್ ಬರುವುದಿಲ್ಲ. ರಿ-ಪ್ರೋಸೆಸ್ ಮೆಟೀರಿಯಲ್ ಬರುವುದು. ಇವತ್ತು ಇದರಿಂದ ದೊಡ್ಡ ಅನಾನುಕೂಲವಾಗುತ್ತದೆ. ಇದನ್ನು ಸರಿಪಡಿಸುವುದಕ್ಕೋಸ್ಕರ ಈಗಾಗಲೇ ನೀವು ವೆಸ್ಟರ್ನ್ ಘಾಟ್ಸ್ ಪ್ರಾಜೆಕ್ಟ್‌ನಲ್ಲಿ ಸಾಕಷ್ಟು ಹಣವನ್ನು ಕೇಂದ್ರ ಸರ್ಕಾರದಿಂದ ಹೂಡಿದ್ದೀರಿ. ಆ ಹಣವನ್ನು ಯಾವ ರೀತಿಯಾಗಿ ಖರ್ಚು ಮಾಡುತ್ತಿದ್ದೀರಿ ಎಂದು ಅದಕ್ಕೆ ಒಂದು ನಿದರ್ಶನ ಕೊಡುತ್ತೇನೆ. ಫಾರೆಸ್ಟ್‌ನಿಂದ ಖರ್ಚು ಮಾಡಿರತಕ್ಕಂತಹ ದುಡ್ಡು ಯಥೇಚ್ಛವಾಗಿ ಖರ್ಚು ಮಾಡಿದ್ದಾರೆ. ಇವತ್ತು ಕಾಗದದಲ್ಲಿ ಗಿಡಗಳನ್ನು ಬೆಳೆದಿದ್ದಾರೆ ವಿನ; ಬೇರೆ ನೆಟ್ಟಿಲ್ಲ ಎನ್ನುವ ಮಾತನ್ನು ಅಧ್ಯಕ್ಷರ ಪೀಠದಿಂದ ಹೇಳಿದಂತಹ ಮಾತು ನನಗೆ ಜ್ಞಾಪಕ ಇದೆ. ಅದಕ್ಕೋಸ್ಕರ ಒಂದು ನಿದರ್ಶನ ಕೊಡಬೇಕಾಗುತ್ತದೆ. Approval of OECF assisted forest & Environment project for Eastern Plains of Karnataka will be implemented in 17 districts of the State over the period of 1997 to 2002. ಇದಕ್ಕೆ ಎಂದು ಹೈ ಪವರ್ ಕಮಿಟಿ ಮಾಡುತ್ತೀರಿ, ಅದರ ಜೊತೆಗೆ ಒಂದು ಎಂಪವರ್ ಕಮಿಟಿ ಮಾಡುತ್ತೀರಿ. 600 ಕೋಟಿ ರೂಪಾಯಿ ಸಾಲವನ್ನು ತರುವುದಕ್ಕೆ ನೀವು ಅಧಿಕಾರವನ್ನು ಯಾವ ರೀತಿಯಾಗಿ ಕೊಡುತ್ತಿದ್ದೀರಿ ಎಂದರೆ, ಇದು ಕಾರ್ಯಗತ ಆಗುತ್ತಾ ಎನ್ನುವುದಕ್ಕೆ ನಿಮ್ಮ ಗವರ್ನಮೆಂಟ್ ಆರ್ಡರ್ ಓದುತ್ತೇನೆ. ಒಂದು ಸಮಿತಿಗೆ ಕ್ಯಾಬಿನೆಟ್ ಪವರ್‌ಸ್ಸನ್ನು ಕೊಡತಕ್ಕಂಥದ್ದು ಇದು ಎಲ್ಲಾದರೂ ಸಾಧ್ಯವಾ? ``To endure

the timely implementation of this project, this specifically empowered Committee is vested with the powers to create a new post, to create a post on contract basis and lay down the terms and conditions of contract appointments, lay down guidelines for the execution of the contract, approve the leasing of works and services on contract for implementation of various components of this project, including research, studies to take decision on any other important matters pertaining to the project implementation; to sanction all kinds of purchases and to give all types of sanstions needed for the pur[pose of the project without subjecting such proposals to the prior consultation concurrence with or Finance Department or Planning Department or DPAR, Law Department and Forest Minister and Cabinet." ಎಲ್ಲವನ್ನೂ ನೋಡಿ ಕ್ಯಾಬಿನೆಟ್ ಪವರನ್ನು ಎಂಪವರ್ ಕಮಿಟಿಗೆ ಕೊಡುವುದು, ಇಷ್ಟೊಂದು ಬ್ಲಾಂಕೆಟ್ ಆರ್ಡರ್ ಕೊಡತಕ್ಕಂತಹ ಸಂದರ್ಭ ಆದರೂ ಏನಿತ್ತು, ಫಾರೆಸ್ಟ್ ಮಿನಿಸ್ಟರ್ ಅಪ್ರೂವಲ್‌ಗೆ ಬರಬೇಕಾಗಿಲ್ಲ ಎಂದು ಹೇಳುವುದಾದರೆ....

ಶ್ರೀ ಸಿ. ಬೈರೇಗೌಡ :— ಇದು ಸಚಿವಸಂಪುಟದ ಮುಂದೆ ಬಂದು ಆಗಿರುವುದು. Can the Cabinet delegate that power to the High Power Committee headed by the Officials?

ಶ್ರೀ ಡಿ. ಮಂಜುನಾಥ್ :— ಎಂಪವರ್ ಕಮಿಟಿ ಮಾಡದೆ ಈ ತರಹ ಮಾಡಬೇಕೆಂದು ಮಾಡಿದೆ Guidelines were given by the Central Government.

ಶ್ರೀ ಟಿ.ಬಿ ಜಯಚಂದ್ರ :— ಅದನ್ನು ಮಾಡತಕ್ಕಂಥವರು ಯಾರು? ನೀವು ಅವರ ತಾಳಕ್ಕೆ ತಕ್ಕಂತೆ ಕುಣಿಯತಕ್ಕಂಥ ಕೆಲಸವನ್ನು ಮಾಡಿದ್ದೀರಲ್ಲಾ. ಕ್ಯಾಬಿನೆಟ್ ಅಪ್ರೂವ್ ಇಲ್ಲದಿದ್ದರೂ ಕಡೇಪಕ್ಷ ಅರಣ್ಯ ಮಂತ್ರಿಗಳ ಅಪ್ರೂವಲ್ ಕೂಡ ಬೇಡ ಎಂದು ಅವರು ಹೇಳುವುದಾದರೆ ಹೇಗೆ? ನನಗಂತೂ ಅರ್ಥವಾಗುತ್ತಿಲ್ಲ. ಇನ್ನು ಸಿದ್ಧರಾಮಯ್ಯನವರು ತಮ್ಮ ಬಜೆಟ್ ಭಾಷಣದಲ್ಲಿ ಏನು ಹೇಳಿದ್ದಾರೆಂದರೆ

``Beer manufacturing is an important industry in Karnataka. Since 1995-96, the consumption of beer has been going down. The alcohol content in the beer is low. To check the trend in favour of consumption of hard liquor, the tax on beer would be reduced."

Is it a word from Sri Siddaramaiah?

ನೀವು ಹೇಳಿರುವ ಶಬ್ದದ ಅರ್ಥ ಏನು ಬರುತ್ತದೆ ಎಂಬುದನ್ನು ನಾನು ಹೇಳುತ್ತೇನೆ. ಒಂದು ಬಾಟಲ್‌ನಲ್ಲಿ 650 ಎಂ.ಎಲ್. ಬಿಯರ್ ಇರುತ್ತದೆ. ಇದರಲ್ಲಿ ಶೇಕಡ 5 ರಿಂದ 6 ರಷ್ಟು ಆಲ್ಕೋಹಾಲ್ ಕಂಟೆಂಟ್ ಇರುತ್ತದೆ. ಆದೇ ರೀತಿ ಒಂದು ಕ್ವಾರ್ಟರ್ ಬಾಟಲ್ ವಿಸ್ಕಿಯಲ್ಲಿ ಶೇಕಡ 42 ರಿದ 43 ರಷ್ಟು ಆಲ್ಕೋಹಾಲ್ ಕಂಟೆಂಟ್ ಇರುತ್ತದೆ. ಒಟ್ಟಾರೆಯಾಗಿ ಎರಡನ್ನೂ ಸೇರಿ ಲೆಕ್ಕ ಹಾಕಿದರೆ ಎರಡು ಬಾಟಲ್ ಬೀಯರ್ ಕುಡಿದರೆ ಸುಮಾರು ಒಂದೂವರೆ ಬಾಟಲ್‌ನಷ್ಟು ವಿಸ್ಕಿ ಕುಡಿದ ಹಾಗೆ ಆಗುತ್ತದೆ. ಇದನ್ನು ಗಮನಿಸಿದರೆ ಇಂದಿನ ಜನರನ್ನು ನೀವು ಆಲ್ಕೋಹಾಲ್ ಕುಡಿಸುವತ್ತ ತೆಗೆದುಕೊಂಡು ಹೋಗುತ್ತಿದ್ದೀರಿ ಎನ್ನುವ ತೀರ್ಮಾನಕ್ಕೆ ಬರಬೇಕಾಗುತ್ತದೆ. ಈ ನಿಟ್ಟಿನಲ್ಲಿ ನೀವು ಇಂದು ಹಾರ್ಡ್ ಲಿಕ್ಕರ್‌ನ್ನೇ ಜನರಿಗೆ ಕುಡಿಸುತ್ತೀದ್ದೀರಿ ಎನ್ನತಕ್ಕಂಥ ಮಾತನ್ನು ಹೇಳಬೇಕಾಗಿದೆ. ಇನ್ನು ರಾಗಿ ಫ್ಲೋರ್‌ಗಳಿಗೆ ಟ್ಯಾಕ್ಸ್ ಹಾಕುವುದನ್ನು ಕಡಿಮೆ ಮಾಡಿದ್ದೇವೆ ಎಂದು ಹೇಳಿದ್ದೀರಿ. ಆದರೆ ಹಳ್ಳಿಗಳಲ್ಲಿ ಜನರು ರಾಗಿಯನ್ನು ಮಿಲ್‌ಗೆ ಹಾಕಿ ಇದನ್ನು ತಂದು ಮನೆಗಳಲ್ಲಿ ಹಿಟ್ಟನ್ನು ಮಾಡಿಕೊಂಡಿ ತಿನ್ನುತ್ತಾರೆ. ಆದರೆ ನೀವು ಮಾಡಿರುವುದೇನೆಂದರೆ ಬಜೆಟ್‌ನಲ್ಲಿ ಜನರು ನೋಡಿ ಸಿದ್ಧರಾಮಯ್ಯನವರು ಬಡವರ ಮೇಲೆ ಕನಿಕರವಿಟ್ಟು ಟ್ಯಾಕ್ಸ್ ಹಾಕದೇ ಒಳ್ಳೆಯದನ್ನು ಮಾಡಿದ್ದಾರೆ ಎನ್ನುವ ಭಾವನೆ ಬರುವ ಹಾಗೆ ಮಾಡಿದ್ದೀರಿಯೇ ಹೊರತು ನಿಜವಾಗಿಯೂ ಇದರ ಲಾಭ ಯಾರಿಗೆ ಬರುತ್ತದೆಂದರೆ ರಾಗಿ ಹಿಟ್ಟನ್ನು ಪ್ಯಾಕೆಟ್‌ಗಳಲ್ಲಿ ಹಾಕಿ ಮಾರುವ ಬೆಂಗಳೂರಿನಂಥ ವ್ಯಾಪಾರಿಗಳವರಿಗೆ ಅನುಕೂಲವಾಗುತ್ತದೆ. ಇದೇ ರೀತಿಯಾಗಿ ನೀವು ಇಂದು ಹಳೇ ಕಾರುಗಳ ಮೇಲೆ ಟ್ಯಾಕ್ಸ್ ಕಡಿಮೆ ಮಾಡಿದ್ದೀರಿ. ಇವುಗಳೆಲ್ಲಾ ಬಡವರಿಗೆ ಅನುಕೂಲ ಆಗುವಂಥದ್ದಲ್ಲವೆಂದು ಹೇಳಿ ನೀವೇನು ಬಜೆಟ್‌ನ್ನು ಮಂಡನೆ ಮಾಡಿದ್ದೀರಿ ಅದನ್ನು ನಾನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಅಧ್ಯಕ್ಷರೆ, ಮೊಟ್ಟಮೊದಲನೆಯದಾಗಿ ಬಜೆಟ್ ಮೇಲೆ ಮಾತನಾಡುವುದಕ್ಕೆ ನನಗೆ ತಾವು ಅವಕಾಶ ಮಾಡಿಕೊಟ್ಟಿರುವುದಕ್ಕಾಗಿ ತಮಗೆ ವಂದನೆಗಳನ್ನು ಹೇಳಬಯಸುತ್ತೇನೆ. 1998-99ನೇ ವರ್ಷದಲ್ಲಿ ನಿರೀಕ್ಷೆಗಿಂತ 800 ಕೋಟಿ ರೂ. ತೆರಿಗೆ ಸಂಗ್ರಹವಾಗಿದ್ದು ರೆವಿನ್ಯೂ ವೆಚ್ಚ 204 ಕೋಟಿ ರೂ. ಜಾಸ್ತಿ ಮತ್ತು ಯೋಜನಾ ವೆಚ್ಚ 222 ಕೋಟಿ ರೂ. ಕಡಿಮೆಯಾಗಿದೆ. ಇನ್ನೊಂದು ಕಡೆಯಲ್ಲಿ ಕೆ.ಇ.ಬಿ. ಯಂಥ ಸಂಸ್ಥೆಯಲ್ಲಿ 1400 ಕೋಟಿ ರೂ. ಸಾಲದ ಹೊರೆ ಇರುವಂಥ ಸಂದರ್ಭದಲ್ಲಿ ರೆವಿನ್ಯೂ ಕಲೆಕ್ಷನ್ ನ್ನು ಹೇಗೆ ಹೆಚ್ಚು ಮಾಡಬಹುದು ಎಂಬುದರ ಬಗ್ಗೆ ತಾವು ಯೋಚನೆ ಮಾಡುವುದರ ಬದಲು ನಮಗೆ ಆಘಾತವಾಗುವ ಹಾಗೆ ಮಾಡಿದ್ದೀರಿ. ಇದರ ಬಗ್ಗೆ ನಾನು ಮಾನ್ಯ ಸಚಿವರಿಗೂ ವಿನಂತಿ ಮಾಡಿಕೊಂಡಿದ್ದೆ. ತಾವೂ ಕೂಡ ಅದರ ಬಗ್ಗೆ ಪುನರ್‌ಪರಿಶೀಲಿಸಬೇಕೆಂದು ವಿನಂತಿ ಮಾಡುತ್ತೇನೆ.

ಅದೇನೆಂದರೆ ವಿಶೇಷವಾಗಿ ಕೃಷಿ ಉತ್ಪನ್ನಗಳಾಗಿದ್ದ ಬೀಡಿ ಎಲೆ ಹಾಗೂ ಗೋಡಂಬಿ ಬೆಳೆಯನ್ನು ವಾಣಿಜ್ಯ ಬೆಳೆ ಎಂದು ತಾವು ಮಾಡಿದ್ದೀರಿ. ಈ ರೀತಿ ಮಾಡಿ ಅವುಗಳನ್ನು ಪ್ರವೇಶ ತೆರಿಗೆ ವ್ಯಾಪ್ತಿಗೆ ತರುವುದರಿಂದ ಇದನ್ನೇ ನೆಚ್ಚಿಕೊಂಡಿರುವ ಸುಮಾರು 8 ಲಕ್ಷ ಕಾರ್ಮಿಕರಿಗೆ ದೊಡ್ಡ ಆಘಾತವೇ ಆಗುತ್ತದೆ. ಇಂದು ಬೀಡಿ ಕಟ್ಟುವುದರಿಂದ ಅದನ್ನು ಪ್ಯಾಕ್ ಮಾಡುವವರೆಗೆ ಇರುವ ಸುಮಾರು 8 ಲಕ್ಷ ಕುಟುಂಬಗಳವರಿಗೆ ಬೇರೆ ವ್ಯವಸ್ಥೆ ಮಾಡುವ ಹಾಗಿಲ್ಲ. ಒಂದು ಕಡೆ ಗುಟ್ಕಾದವರ ಕಾಂಪಿಟೇಷನ್ ಇನ್ನೊಂದು ಕಡೆ ಮಿನಿ ಸಿಗರೇಟ್ ನವರ ಕಾಂಪಿಟೇಷನ್ ಇವರಿಗೆ ಇರುವಾಗ ಈ ಎರಡಕ್ಕೂ ತಾವು ತೆರಿಗೆಯನ್ನು ಏರಿಸಿದ್ದರೆ ನನಗೆ ಸಂತೋಷವಾಗುತ್ತಿತ್ತು. ಅದನ್ನು ಬಿಟ್ಟು ತಾವು ಬೀಡಿ ಮತ್ತು ಗೋಡಂಬಿಯನ್ನು ವಾಣಿಜ್ಯ ಪದಾರ್ಥಗಳ ವ್ಯಾಪ್ತಿಗೆ ತಂದು ಪ್ರವೇಶ ತೆರಿಗೆಯನ್ನು ಹಾಕಿ ಸುಮಾರು 8 ಲಕ್ಷ ಕಾರ್ಮಿಕರಿಗೆ ತೊಂದರೆ ಮಾಡುತ್ತಿದ್ದೀರಿ. ಆದುದರಿಂದ ತಾವು ಇದರ ಬಗ್ಗೆ ದಯವಿಟ್ಟು ಪುನರ್ ಪರಿಶೀಲಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದಷ್ಟೇ ಅಲ್ಲ, ಗೋಡಂಬಿ ರಫ್ತು ಉದ್ಯಮದಿಂದ ಸಾಕಷ್ಟು ಕೋಟಿ ರೂ.ಗಳು ಬರುತ್ತಿದೆ. ಹೀಗಿರುವಾಗ ನೀವು ಎ.ಪಿ.ಎಂ.ಸಿ.ಯಲ್ಲಿ ಖಾಲಿ ಇರುವಂಥ ಗೋಡಂಬಿಗೆ ಟ್ಯಾಕ್ಸ್ ಹಾಗೂ ಒಳಗಿರುವ ಕರ್ನಲ್ ಯಾವುದಿದೆ ಅದರ ಮೇಲೆ ಟ್ಯಾಕ್ಸ್ ಹಾಕಿ ಎರಡೂ ರೀತಿಯ ಟ್ಯಾಕ್ಸಿನಿಂದ ಬೆಳೆಗಾರರಿಗೆ ಸಫರ್ ಆಗಿದೆ. ಇದನ್ನು ತಾವು ರದ್ದು ಮಾಡಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ. ಇದರ ಜೊತೆಗೆ ತಾವೇನು ಈಗ ಕೃಷಿ ಉತ್ಪನ್ನಗಳನ್ನು ವಾಣಿಜ್ಯ ಉತ್ಪನ್ನಗಳೆಂದು ಮಾಡಿದ್ದೀರಿ ಅದನ್ನು ಕೈಬಿಟ್ಟು ಮೊದಲಿದ್ದ ಹಾಗೆ ಅವುಗಳನ್ನು ಕೃಷಿ ಉತ್ಪನ್ನಗಳೆಂದೇ ಪರಿಗಣಿಸಿ ರಫ್ತು ಉದ್ಯಮಕ್ಕೆ ಪ್ರೋತ್ಸಾಹ ನೀಡುವತ್ತ ತಾವು ಪ್ರಯತ್ನ ಮಾಡಬೇಕು. ಇನ್ನು ತಾವು 1999ರ ವರ್ಷವನ್ನು ಪ್ರವಾಸೋದ್ಯಮ ವರ್ಷವೆಂದು ಹೇಳಿದ್ದೀರಿ. ಹೀಗಿರುವಾಗ ತಾವು ವೆಹಿಕಲ್ ಟ್ಯಾಕ್ಸನ್ನು ಹೆಚ್ಚು ಮಾಡಿದ್ದೀರಿ. ಈಗಾಗಲೇ ಭಾರತ ದೇಶದಲ್ಲಿ ನಮ್ಮ ರಾಜ್ಯದಲ್ಲಿಯೇ ವೆಹಿಕಲ್ ಟ್ಯಾಕ್ಸ್ ಹಾಲಿ ಜಾಸ್ತಿ ಇರುವಾಗ ನೀವೂ ಇನ್ನೂ ಹೆಚ್ಚು ಮಾಡುವುದಕ್ಕೆ ಹೊರಟಿರುವುದು ಸರಿಯಲ್ಲ. ಇದು ಪ್ರವಾಸೋದ್ಯಮಕ್ಕೆ ಹೊಡೆತ ಬಿದ್ದ ಹಾಗೆ ಆಗುತ್ತದೆ. ಏಕೆಂದರೆ ಸುಮಾರು 23 ಲಕ್ಷ ವಿದೇಶಿ ಪ್ರವಾಸಿಗರು ನಮ್ಮ ರಾಜ್ಯಕ್ಕೆ ಇಂದು ಬರುತ್ತಿದ್ದಾರೆ. ಚೈನಾವನ್ನು ಬಿಟ್ಟರೆ ನಮ್ಮ ದೇಶಕ್ಕೆ ಹೆಚ್ಚು ಜನ ವಿದೇಶಿ ಪ್ರವಾಸಿಗರು ಬರುತ್ತಾರೆ. ಕೇವಲ ಪ್ರವಾಸೋದ್ಯಮ ವರಮಾನದಿಂದಲೇ ಇಂದು ಸಿಂಗಾಪುರ್ ಹಾಗೂ ಮಲೇಶಿಯಾಗಳು ಬದುಕು ನಡೆಸುವುದಕ್ಕೆ ಸಾಧ್ಯವಿರುವಂಥ ಪರಿಸ್ಥಿತಿ ಇರುವಾಗ ಅದೇ ರೀತಿ ವಿದೇಶಿ ವಿನಿಮಯವನ್ನು ಹೆಚ್ಚು ಮಾಡುವುದಕ್ಕಾಗಿ ಆ ನಿಟ್ಟಿನಲ್ಲಿ ಪ್ರವಾಸಿ ನೀತಿಯನ್ನು ಅಳವಡಿಸಲು ತಾವು ಪ್ರಯತ್ನ ಮಾಡಬೇಕಾಗಿತ್ತು. ಈ ನಿಟ್ಟಿನಲ್ಲಿ ಮರುಚಿಂತನೆಯನ್ನು ಮಾಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ. ಇನ್ನು ಮೂಲಭೂತ ಸೌಲಭ್ಯಗಳ ಬಗ್ಗೆ ತಾವು ಅನೇಕ ಮಾತುಗಳನ್ನು ಹೇಳಿದ್ದೀರಿ. ನಾನು ಮಂಗಳೂರು ವಿಮಾನ ನಿಲ್ದಾಣಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ನೀವು ಸುಮಾರು

5 ಕೋಟಿ ರೂ.ಗಳನ್ನು ನೀವು ಪುನರ್‌ವಸತಿಗೋಸ್ಕರ ವಿನಿಯೋಗಿಸಿದ್ದರೆ ಸುಮಾರು 120 ಕೋಟಿ ಕೇಂದ್ರ ಸರ್ಕಾರದಿಂದ ನೆರವು ಬರುವುದಕ್ಕೆ ಸಾಧ್ಯವಾಗುತ್ತದೆ. ಇದರಿಂದಾಗಿ ಪ್ರವಾಸೋದ್ಯಮಕ್ಕೆ ಅನುಕೂಲವಾಗುವುದಲ್ಲದೇ ರಫ್ತು ಉದ್ಯಮಕ್ಕೂ ಕೂಡ ಆದ್ಯತೆಯನ್ನು ಕೊಟ್ಟಂತಾಗುವುದರಿಂದ ತಾವು ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ತಮ್ಮ ಭಾಷಣದಲ್ಲಿ ತೆರಿಗೆ ಹಾಗೂ ಟೆಂಡರ್ ಕರೆಯುವುದರಲ್ಲಿ ಪಾರದರ್ಶಕತೆ ನೀತಿಯನ್ನು ಜಾರಿಗೆ ತರುವುದಾಗಿ ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಬಹುಶಃ ನಾಲ್ಕೂವರೆ ವರ್ಷಗಳ ನಂತರವಾದರೂ ತಾವು ಇದರ ಬಗ್ಗೆ ಯೋಚನೆ ಮಾಡುತ್ತಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಇದರ ಬಗ್ಗೆ ನಾಲ್ಕೂವರೆ ವರ್ಷಗಳವರೆಗೂ ಏಕೆ ಯೋಚನೆ ಮಾಡಲಿಲ್ಲ ಎಂಬ ಬಗ್ಗೆ ಕೂಡ ಚಿಂತನೆ ಮಾಡಬೇಕಾಗುತ್ತದೆ. ಇನ್ನು ಥರ್ಡ್ ಪಾರ್ಟಿ ಇನ್ಸ್‌ಪೆಕ್ಷನ್ ಏನಿದೆ ಅದನ್ನು ಎಲ್ಲಾ ಕಾಮಗಾರಿಗಳಿಗೂ ಸಂಬಂಧಪಟ್ಟ ಹಾಗೆ ಕಡ್ಡಾಯವಾಗಿ ಮಾಡಬೇಕು. ಯೂಸರ್ಸ್ ಕಮಿಟಿಯನ್ನು ಮಾಡಿಕೊಂಡು ಇದರ ಪರಿಶೀಲನೆಯಲ್ಲಿ ಅದನ್ನು ಅಳವಡಿಸಿಕೊಂಡು ಅದನ್ನು ತರಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ. ಇನ್ನು ಮಹಾನಗರಪಾಲಿಕೆ ಹಾಗೂ ನಗರಸಭೆಗಳಿಗೆ ಸಂಬಂಧಪಟ್ಟಂತೆ ಪ್ರತಿ ವಾರ್ಡ್‌ಗೂ ಒಂದೊಂದು ಕಮಿಟಿಯನ್ನು ಮಾಡಿ ಅದರಲ್ಲಿ ಚುನಾಯಿತ ಪ್ರತಿನಿಧಿಗಳನ್ನು ಹಾಗೂ ಇನ್ನಿತರ ಸಮಾಜದ ಗಣ್ಯರನ್ನೂ ಕೂಡ ಸೇರಿಸಬೇಕು ಮತ್ತು ಇದರಿಂದ ಥರ್ಡ್ ಪಾರ್ಟಿ ಇನ್ಸ್‌ಪೆಕ್ಷನ್‌ನ್ನು ಎಲ್ಲಾ ಕಾಮಗಾರಿಗಳಿಗೆ ಸಂಬಂಧಪಟ್ಟ ಹಾಗೆ ಮಾಡಿಸುವುದಕ್ಕೆ ಪ್ರಯತ್ನ ಮಾಡಿದರೆ ಇದರಿಂದ ಹೆಚ್ಚು ಉಪಯುಕ್ತವಾಗುತ್ತದೆ. ಇನ್ನು ರಾಷ್ಟ್ರಮಟ್ಟದಲ್ಲಿ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸುವ ಕ್ರೀಡಾ ವಿದ್ಯಾರ್ಥಿಗಳಿಗೆ ಶೇಕಡ 15ರಷ್ಟು ಗ್ರೇಸ್ ಮಾರ್ಕ್ಸ್‌ನ್ನು ಕೊಡಬೇಕು. ಇದರ ಬಗ್ಗೆ ತಾವು ಏನನ್ನೂ ಹೇಳಿಲ್ಲ. ಪಕ್ಕದ ರಾಜ್ಯವಾದ ಕೇರಳದಲ್ಲಿ ಇಂಥ ವಿದ್ಯಾರ್ಥಿಗಳಿಗೆ ಗ್ರೇಸ್ ಮಾರ್ಕ್ಸ್‌ನ್ನು ಕೊಡುತ್ತಿದ್ದಾರೆ. ಆ ರೀತಿ ನೀವೂ ಮಾಡಿದರೆ ಹಳ್ಳಿಗಾಡುಗಳ ವಿದ್ಯಾರ್ಥಿಗಳಿಗೆ ಕ್ರೀಡೆಯಲ್ಲಿ ಪಾಲ್ಗೊಳ್ಳಲು ಅನುಕೂಲವಾಗುತ್ತದೆ. ಆ ನಿಟ್ಟಿನಲ್ಲಿ ಯೋಚನೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಇನ್ನು ಮೀನುಗಾರರಿಗೆ ಡೀಸೆಲ್ ಸಬ್ಸಿಡಿಯನ್ನು ಏನು ತೋರಿಸಿದ್ದೀರಿ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಇದರ ಜೊತೆಗೆ ಕರಾವಳಿ ಪ್ರದೇಶಕ್ಕೆ ಸೀಮಿತವಾದಂತೆ ವಿಶೇಷ ಅಭಿವೃದ್ಧಿ ಕೆಲಸವನ್ನು ಮಾಡುವ ನಿಟ್ಟಿನಲ್ಲಿ ಅಲ್ಲಿರುವಂಥ ಡ್ರೆಜ್ಜಿಂಗ್ ವ್ಯವಸ್ಥೆ ಅದೇ ರೀತಿ ಜೆಡ್ಡು ನಿರ್ಮಾಣಕ್ಕೋಸ್ಕರ ಮೈನರ್ ಇರಿಗೇಷನ್‌ನ್ನು ಬಂದರು ಇಲಾಖೆಗೆ ತಾವು ಹಸ್ತಾಂತರಿಸಬೇಕು. ಮೀನುಗಾರ ಸಚಿವರಿಗೆ ಹೆಚ್ಚು ಕೆಲಸವನ್ನು ಕೊಡುವ ಶಕ್ತಿಯನ್ನು ಮಾಡಿದರೆ ಮಾತ್ರ ಇದು ಹೆಚ್ಚು ಉಪಯುಕ್ತವಾಗಬಹುದು. ಈ ಬಗ್ಗೆ ಕೂಡ ತಾವು ಪರಿಶೀಲನೆ ಮಾಡುವುದು ಸೂಕ್ತವೆಂದು ವಿನಂತಿಸುತ್ತೇನೆ. ಇನ್ನು 13ನೇ ಪುಟದಲ್ಲಿ ತಾವು ದುರ್ಬಲ ವರ್ಗದವರ ಕಲ್ಯಾಣಕ್ಕೆ ಸಾಮಾಜಿಕ ನ್ಯಾಯವನ್ನು ಒದಗಿಸಲು ನಾವು ಬದ್ಧರಾಗಿದ್ದೇವೆ ಎಂದು ಹೇಳಿದ್ದೀರಿ. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯದ ಬಗ್ಗೆ ತಾವು

ಉಲ್ಲೇಖ ಮಾಡಿದ್ದೀರಿ. 239 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳನ್ನು ಮಾಡುವಂತಹ ಸಂದರ್ಭದಲ್ಲಿ ನನ್ನ ಕ್ಷೇತ್ರದಲ್ಲಿ ನಾಲ್ಕು ಜನ ಮಂತ್ರಿಗಳು ಬಂದು ಪರಿಶೀಲನೆ ಮಾಡಿಕೊಂಡು ಹೋಗಿದ್ದೀರಿ. ಇವತ್ತಿನವರೆಗೂ ಅಲ್ಲಿ ವಿದ್ಯಾರ್ಥಿ ಹಾಸ್ಟೆಲ್ ಕಂಪ್ಲೀಟ್ ಮಾಡುವುದಕ್ಕಾಗಿಲ್ಲ. ಇದನ್ನೂ ಕೂಡ ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿ ಯುವ ಜನ ಸೇವೆಗೆ ಸಂಬಂಧಪಟ್ಟ ಹಾಗೆ ಅನೇಕ ರೀತಿಯಲ್ಲಿ ಸಲಹೆ ಸೂಚನೆಗಳನ್ನು ಕೊಡುವಂತಹ ಆಸಕ್ತಿ ಇದ್ದರೂ ಕೂಡ ಸಮಯಾವಕಾಶ ಕಡಿಮೆ ಇರುವುದರಿಂದ ಕೊಟ್ಟಿರುವಂತಹ ಅವಕಾಶಕ್ಕೆ ಧನ್ಯವಾದಗಳನ್ನು ಹೇಳುತ್ತಾ, ಬಹುಶಃ ಬೀಡಿ ಎಲೆ ಮತ್ತು ಗೋಡಂಬಿಗೆ ಸಂಬಂಧಪಟ್ಟ ಹಾಗೆ ತಾವು ಹೆಚ್ಚಿನ ಆದ್ಯತೆ ಕೊಡುತ್ತೀರಿ, ದಕ್ಷಿಣ ಕನ್ನಡ ಜಿಲ್ಲೆಯ ತೋಟಗಾರರ ಉತ್ಪನ್ನ ಏನಿದೆ ಅದಕ್ಕೆ ಒಳ್ಳೆಯ ಮಾರಾಟ ಸಿಗುವ ರೀತಿಯಲ್ಲಿ ರಫ್ತು ಉದ್ಯಮಕ್ಕೆ ಅದು ಕೂಡ ಸೇರ್ಪಡೆ ಆಗುವ ದಿಕ್ಕಿನಲ್ಲಿ ತಾವು ಹೆಚ್ಚು ಪ್ರೋತ್ಸಾಹ ಕೊಡುತ್ತೀರಿ ಎಂದು ಹೇಳಿ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) :— ಮಾನ್ಯ ಅಧ್ಯಕ್ಷರೇ ನಾನು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಒಂದೆರಡು ವಿಚಾರಗಳನ್ನು ಅರ್ಥ ಮಂತ್ರಿಗಳಿಗೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಕಳೆದ ಸದನದಲ್ಲಿ ನಾನು ಪ್ರಸ್ತಾಪ ಮಾಡಿದ್ದೆ. ಕಾಫಿ ಬೆಳೆಗಾರರಿಗೆ ಫಾರಂ ನಂಬರ್ 39 ತೆಗೆಯಬೇಕು ನಂತರ 600 ಕೆ.ಜಿ., ಮೇಲೆ ಏನು ನಾವು ಕಾಫಿ ಬೆಳೆಯುತ್ತೇವೆ ಅದಕ್ಕೆ ಟ್ಯಾಕ್ಸ್ ಹಾಕಬಾರದು ಎಂದು ಪ್ರಸ್ತಾಪ ಮಾಡಿದ್ದೆ. ತಾವು ಈ ಸಾರಿ ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದೀರಿ. ಹಾಗೂ ಅದನ್ನು ಬಿಟ್ಟು ಕೊಟ್ಟಿದ್ದೀರಿ. ಆದರೆ ನಮ್ಮ ಹಳ್ಳಿಯಲ್ಲಿ ಒಂದು ಮಾತು ಇದೆ. ತಾವು ಕೊಟ್ಟಿದ್ದಕ್ಕೆ ಅಭಿನಂದನೆ. ಬಲದ ಕೈಯಲ್ಲಿ ಕೊಟ್ಟು ಎಡದ ಕೈಯಲ್ಲಿ ತೆಗೆದುಕೊಂಡ ಎಂದು ಹೇಳುತ್ತಾರೆ. ತಾವು ಏನು ಮಾಡಿದ್ದೀರಿ ಎಂದರ ಫಾರಂ ನಂಬರ್ 28, ಇದನ್ನು ಕ್ಯೂರಿಂಗ್ ವರ್ಕ್ಸ್‌ನಲ್ಲಿ ಇಟ್ಟಿದ್ದೀರಿ. ತೆಗೆಯಲಿಲ್ಲ. ತೆಗೆಯುವುದಿದ್ದರೆ ಎರಡು ತೆಗೆಯಬೇಕು. ಈಗ ಏನಾಗುತ್ತದೆ ಎಂದರೆ ನಾನು ಕಳುಹಿಸಿದ ಕಾಫಿ ಕ್ಯೂರಿಂಗ್ ವರ್ಕ್ಸ್‌ನಲ್ಲಾ ಸ್ಟಾಕ್ ಆಗುತ್ತದೆ. ಅದಕ್ಕೆ ಟ್ಯಾಕ್ಸ್ ತೆಗೆದುಕೊಳ್ಳುತ್ತೀರಿ. ಇಲ್ಲಿ ಬಿಟ್ಟಿರಿ, ಅಲ್ಲಿ ತಾವು ತೊಂದರೆ ಮಾಡುವಂತಹ ವ್ಯವಸ್ಥೆ ಮಾಡಿದ್ದೀರಿ. ಅದು ಆಗಬಾರದು. ಫಾರಂ 28 ತೆಗೆಯಬೇಕು. ಇನ್ನೊಂದು ತೊಂದರೆ ನಮ್ಮನ್ನು ಸಿಕ್ಕಿಸಿದ್ದೀರಿ ಎಂದರೆ ಎಕ್ಸ್‌ಪೋರ್ಟ್ ಕಾಫಿ,

ಶ್ರೀ ಮಲ್ಲಿಕಾರ್ಜುನ ಖರ್ಗೆ :— ತಾವು ಈಗ ಥ್ಯಾಂಕ್ಸ್ ಕೊಟ್ಟಿರುವುದನ್ನು ವಾಪಸ್ಸು ತೆಗೆದುಕೊಳ್ಳಿ.

ಶ್ರೀ ಬಿ.ಬಿ. ಶಿವಪ್ಪ :— ಈ ಎಕ್ಸ್‌ಪೋರ್ಟ್ ಕಾಫಿ ಏನಿದೆ ಇದರ ಮೇಲೆ ತಾವು ಸೇಲ್ಸ್‌ಟ್ಯಾಕ್ಸ್ ಹಾಕಿದ್ದೀರಿ. ಕೇಂದ್ರದಲ್ಲಿ ಕೂಡ ಎಕ್ಸ್‌ಪೋರ್ಟ್ ಕಾಫಿ ಬಗ್ಗೆ ಒಂದು ವ್ಯವಸ್ಥೆ ಇದೆ. ಕಾಫಿ ಎಕ್ಸ್‌ಪೋರ್ಟ್ ಆದಮೇಲೆ ಕೊನೇಪಕ್ಷ ಅವರಿಗೆ ಆರು ತಿಂಗಳು ಸಮಯ ಕೊಟ್ಟು ಆರು ತಿಂಗಳ ಒಳಗೆ ಅವರು ಎಕ್ಸ್‌ಪೋರ್ಟ್ ಮಾಡದೇ ಇದ್ದರೆ ಆಗ ಟ್ಯಾಕ್ಸ್ ಹಾಕಬಹುದು. ಅಕೌಂಟ್ ಇದ್ದೇ ಇರುತ್ತದೆ. ಎಕ್ಸ್‌ಪೋರ್ಟರ್ಸ್‌ಗೆ ಕೊನೇಪಕ್ಷ ಒಂದು ಆರು ತಿಂಗಳು ಸಮಯ ಕೊಡುವಂತಹ ವ್ಯವಸ್ಥೆಯಾಗಬೇಕು. ತಮಗೆ ಗೊತ್ತಿದೆ, ಕಳೆದ ವರ್ಷ 50 ಕೆ.ಜಿ. ಒಂದು ಮೂಟೆ ಕಾಫಿಗೆ ಏಳೂವರೆ ಸಾವಿರ ರೂಪಾಯಿ ಇತ್ತು. ಆದರೆ ಇವತ್ತು 2,800 ರೂಪಾಯಿಗೆ ಬಂದಿದೆ. ಇವತ್ತು ಈ ಸದನದಲ್ಲಿ ಎಲ್ಲಾ ಬೆಳೆಗಳ ಬಗ್ಗೆ ಚರ್ಚೆ ಮಾಡುತ್ತೀರಿ. ಆದರೆ ಕಾಫಿ ಬೆಳೆ ಬಗ್ಗೆ ಯಾರೂ ಕೂಡ ಚರ್ಚೆ ಮಾಡುವುದಿಲ್ಲ. ಕಾರಣ ಕಾಫಿ ಬೆಳೆಗಾರರು ಎಂದರೆ ಅವರ ಬಗ್ಗೆ ಒಳ್ಳೆಯ ಅಭಿಮಾನ ಇದೆ. ಮೇಲೆ ಹೋದರೂ ಕೇಳುವವರು ಇಲ್ಲ, ಕೆಳಗೆ ಹೋದರೂ ಕೇಳುವವರು ಇಲ್ಲ. ಮೇಲೆ ಏನಾದರೂ ಹೋದರೆ ಟ್ಯಾಕ್ಸ್ ಬಗ್ಗೆ ದೃಷ್ಟಿ ಹರಿಸುತ್ತೀರಿ. ಅದು ನಾವು ಸಿಕ್ಕಿಹಾಕಿಕೊಂಡಿರುವಂತಹ ತೊಂದರೆ. ಇದರ ಬಗ್ಗೆ ಹೇಳುತ್ತಾ ಇನ್ನು ಕೋಲಾರದ ಟೋಮ್ಯಾಟೋ ಬಗ್ಗೆ ಆಗ್ಗಾಗ್ಗೆ ಬರುತ್ತಿದೆ. ಎರಡು ಸಾರಿ ರಸ್ತೆ ಮೇಲೆ ಟೊಮ್ಯಾಟೋ ಹಾಕಿದ್ದಾರೆ. ಎಲ್ಲಿ ಜಾಸ್ತಿ ಹಣ್ಣುಹಂಪಲುಗಳನ್ನು ಬೆಳೆಯುತ್ತೇವೆ ಅಲ್ಲಿ ಸಂಸ್ಕರಣ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕಾಗುತ್ತದೆ. ಅದನ್ನು ಸೊಸೈಟಿ ಮುಖಾಂತರ ಅಥವಾ ಪ್ರೈವೇಟ್ ಆಗಿ ಯಾರಾದರೂ ಬರುವವರಿದ್ದರೆ ಅದನ್ನು ಮಾಡಿದರೆ ಬೆಳೆಯುವಂತಹ ರೈತನಿಗೆ ಅನುಕೂಲವಾಗಬಹುದು ಎಂದು ನನ್ನ ಅನಿಸಿಕೆ. ಇದರ ಬಗ್ಗೆ ತಾವು ಗಮನಹರಿಸಬೇಕು ಎಂದು ಕೇಳುತ್ತೇನೆ. ಕೃಷಿ ಮತ್ತು ತೋಟಗಾರಿಗೆ ಎರಡು ಬೆಳೆಗೆ ತಾವು ಈ ಒಂದು ವ್ಯವಸ್ಥೆ ಮಾಡಿಕೊಡಬೇಕು. ಕೊನೆಯದಾಗಿ ಮಾನ್ಯ ಪ್ರಕಾಶ್‌ರವರು ಇದ್ದಾರೆ. ಅವರು ಕುಡಿಯುವ ನೀರಿನ ಬಗ್ಗೆ ಯಾವುದೇ ಗ್ರಾಮಾಂತರ ಪ್ರದೇಶಗಳಲ್ಲಿ ಇನ್ನು 50 ವರ್ಷವಾದರೂ ಕೂಡ ಸಂಪೂರ್ಣವಾಗಿ ಕುಡಿಯುವ ನೀರಿನ ವ್ಯವಸ್ಥೆ ಆಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಮಾಡಿರುವಂತಹ ಈ ಕುಡಿಯುವ ನೀರು ವ್ಯವಸ್ಥೆ ಕೂಡ ಅವ್ಯವಸ್ಥೆಯಾಗಿದೆ. ಟ್ಯಾಂಕ್ ಆಗಿದೆ. ಆದರೆ ನೀರು ಎಲ್ಲಿ ಸಿಗುತ್ತದೆ ಎಂದು ಹುಡುಕುತ್ತಿದ್ದಾರೆ. ಪಂಪ್, ಪೈಪ್, ಡಿಸ್ಟ್ರಿಬ್ಯೂಷನ್ ಲೈನ್ ಎಲ್ಲಾ ಆಗಿದೆ. ಆದರೆ ಈ ರೀತಿ ಸಂಪೂರ್ಣ ಅವ್ಯವಸ್ಥೆಯಾಗಿದೆ. ಕುಡಿಯುವ ನೀರಿಗೆ ನೀವು ಎಷ್ಟು ಹಣ ಖರ್ಚು ಮಾಡಿದ್ದೀರಿ ಅಷ್ಟು ಉಪಯೋಗವಾಗಲಿಲ್ಲ. ತಾವು ಟ್ಯಾಕ್ಸ್ ಇಳಿಸುವಂತಹ ಸಂದರ್ಭದಲ್ಲಿ ಕೆಲವು ಐಟಂಗಳಲ್ಲಿ ಹೇರಿಕೊಂಡಿದ್ದೀರಿ. ಯಾವುದೂ ಕೂಡ ಸಾಮಾನ್ಯ ಜನರಿಗೆ ಅನುಕೂಲವಾಗುವಂತಹ ಯಾವುದೇ ವಸ್ತು ಮೇಲೆ ಟ್ಯಾಕ್ಸ್ ಇಳಿಸಲಿಲ್ಲ. ಉದಾಹರಣೆಗೆ ಹೇಳುವುದಾದರೆ ಬೀರಿನ ಮೇಲೆ ಇಳಿಸಿದಿರಿ. ಏಕೆ ಇಳಿಸಿದಿರಿ ಎಂದು ನನಗೆ ಅರ್ಥವಾಗಲಿಲ್ಲ. ಬೀರ್ ಎಂದರೆ ನನಗೆ ಒಂದು ಘಟನೆ ನೆನಪಿಗೆ ಬರುತ್ತದೆ. ಯಾವುದೋ ಒಂದು ಹಳ್ಳಿಗೆ ಹೋಗಿ ಭಾಷಣ ಎಲ್ಲಾ ಮಾಡಿ ಸುಸ್ತಾಗಿ ಒಂದು ಕಪ್ ನೀರು ಕೊಡು ಎಂದು ಒಬ್ಬನನ್ನು

ಕೇಳಿದೆವು. ಅವನು ನಮ್ಮಲ್ಲಿ ನೀರು ಇಲ್ಲ ಎಂದು ಹೇಳಿದ. ಎಂದರೆ ನೀವು ಹೇಗೆ ಜೀವನ ಮಾಡುತ್ತೀರಿ ಎಂದು ಕೇಳಿದೆವು. ಇಲ್ಲ ಸ್ವಾಮಿ ನಾವೂ ಬೀರ್ ಕುಡಿಯುತ್ತೇವೆ ಎಂದು ಹೇಳಿದ. ಅದಕ್ಕೆ ನಾವು ಸಂತೋಷ, ನಿಮ್ಮ ದನಕರುಗಳು ನೀರು ಕುಡಿಯುವುದಕ್ಕೆ ಏನು ಮಾಡುತ್ತೇವೆಂದು ಕೇಳಿದಾಗ, ಅವುಗಳು ಫಾಂಟ, ಕೋಕೋಕೋಲ ಕುಡಿಯುತ್ತೇವೆ ಎಂದು ಹೇಳಿದ. ಎಂದರೆ ರಿಫೋಟ್ ವಿಲೇಜಸ್‌ಗೆ ನೀವು ಹೋದರೆ ಬೀರ್, ಫಾಂಟ, ಕೋಕೋಕೋಲ ಸಿಗುತ್ತದೆ. ಆದರೆ ನೀರು ಸಿಗುವುದಿಲ್ಲ. ಇವತ್ತಿನ ಪರಿಸ್ಥಿತಿ ಈ ರೀತಿ ಇದೆ. ನೀವೇನು ಖರ್ಚು ಮಾಡುತ್ತೀರಿ ಅದರ ಮೇಲೆ ಹಿಡಿತ ಕಡಿಮೆ ಆಗುತ್ತಿದೆ. ಖರ್ಚ ಅನಾವಶ್ಯಕವಾಗಿ ಖರ್ಚು ಆಗುತ್ತಿದೆ. ಆದರೆ ಉಪಯೋಗ ಕಡಿಮೆ ಆಗುತ್ತಿದೆ. ಕೆಲವು ಅಂಶಗಳನ್ನು ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ತಾವು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಫಾರಂ 39 ತೆಗೆದರೆ ಅದೇ ರೀತಿ ಫಾರಂ ನಂಬರ್ 28 ಅನ್ನೂ ತೆಗೆಯಬೇಕು. ಪ್ರಯೋಜನ ಇಲ್ಲದೆ ಇರತಕ್ಕಂಥ ಹೆರ್‍ಯಾಸ್‌ಮೆಂಟ್ ಆಗುತ್ತದೆ. ಅದಕ್ಕೆ ಏನು ಸರ್ಕಾರಕ್ಕೆ ಭಾರಿ ಬರುತ್ತದೆ ಎಂದ ಲೆಕ್ಕ ಹಾಕಬೇಡಿ. ಮತ್ತು ಟ್ಯಾಕ್ಸ್ ಬಗ್ಗೆ ತಾವು ಗಮನಹರಿಸಬೇಕೆಂದು ಹೇಳಿ, ತಮ್ಮ ಈ ಬಜೆಟ್, ಇದು ಚುನಾವಣಾ ಬಜೆಟ್ ಎಂದು ಹೇಳುತ್ತಾ ನಾನು ಇದರ ಬಗ್ಗೆ ಹೆಚ್ಚಿಗೆ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಇಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು :— ಈಗ ಮಾನ್ಯ ಮುನಿಯಪ್ಪನವರು ಮಾತನಾಡಿ. ಮಾನ್ಯ ಬೈರೇಗೌಡರೇ ಈಗ ತಾವು ಫಸ್ಟ್ ಬೆಂಚಿಗೆ ಬನ್ನಿ

ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ) :— ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ತಡವಾದರೂ ಸಹ ತಾವು ನನ್ನ ಮನವಿಗೆ ಪುರಸ್ಕರಿಸಿ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದಿಸಿ, ನಿನ್ನೆ ಪ್ರಶ್ನೋತ್ತರ ವೇಳೆಯಲ್ಲಿ ಕಾರಣಾಂತರದಿಂದ ನಾನು ಹಾಕಿದಂತಹ ಪ್ರಶ್ನೆಗೆ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ನಾನು ಅದಕ್ಕೆ ಉತ್ತರ ಸರಿಯಿಲ್ಲ...

ಅಧ್ಯಕ್ಷರು :— ಬಿಡಿ, ಅದನ್ನು ಮನಸ್ಸಿಗೆ ಏತಕ್ಕೆ ಇಟ್ಟುಕೊಳ್ಳುತ್ತೀರಿ? ನಾನು ಮರೆತು ಹೋಗಿ ಯಾವ ಕಾಲವಾಯಿತು. ಮುಂದೆ ಹೋಗಿ.

ಶ್ರೀ ವಿ. ಮುನಿಯಪ್ಪ :— ನನಗೆ ಸ್ವಲ್ಪ ಉದ್ವೇಗವಾಗಿತ್ತು ನಿಜ. ಆದರೆ ನಾನು ಯಾವುದೇ ಕಾರಣಕ್ಕೂ ಅನ್‌ಪಾರ್ಲಿಮೆಂಟರಿ ಅಥವಾ ಅನ್‌ಲಾಫುಲ್ ಆಗಿ ಮಾತನಾಡಲಿಲ್ಲ. ಆದರೆ ಅನುಚಿತವಾಗಿ ವರ್ತನೆ ಮಾಡಿದರು ಎಂದು ಹೇಳಿ ಪತ್ರಿಕೆಗಳಲ್ಲಿ ಬಂದಾಗ ನನ್ನ ಮನಸ್ಸಿಗೆ ಸ್ವಲ್ಪ ನೋವಾಯಿತು. ನಾನು ಯಾವ ರೀತಿಯಲ್ಲೂ ಅನುಚಿತವಾಗಿ ವರ್ತನೆ ಮಾಡಲಿಲ್ಲ.

ಅಧ್ಯಕ್ಷರು :— ಯೋಚನೆ ಮಾಡಬೇಡಿ.

ಶ್ರೀ ವಿ. ಮುನಿಯಪ್ಪ :— ನಾನು ಒಬ್ಬ ಸದಸ್ಯನಾಗಿ ಸರ್ಕಾರದಲ್ಲಿ ಇರತಕ್ಕಂಥ ವೈಫಲ್ಯತೆ ಬಗ್ಗೆ ಗಮನ ಸೆಳೆಯುವುದಕ್ಕೆ ಪ್ರಯತ್ನಪಟ್ಟೆನೇ ಹೊರತು ಬೇರೆ ಯಾವುದೇ ಕಾರಣದಿಂದ ಅಲ್ಲ ಎನ್ನುವ ಮಾತನ್ನು ತಮ್ಮ ಮುಖಾಂತರ ಹೇಳುತ್ತಾ, ವಿಶೇಷವಾಗಿ ಅಧ್ಯಕ್ಷ ಸ್ಥಾನಕ್ಕೆ ಸದಾಕಾಲ ಗೌರವ ನನಗೆ ಇದೆ. ಯಾವುದೇ ರೀತಿಯಲ್ಲಿ ಆ ಸ್ಥಾನಕ್ಕೆ ಧಕ್ಕೆ ಬರದ ಹಾಗೆ ನಡೆದುಕೊಳ್ಳತಕ್ಕಂಥಾದ್ದು, ನನಗೂ ಸಹ ಜವಾಬ್ದಾರಿ ಇದೆ ಎನ್ನುವ ಮಾತನ್ನು ನಾನು ಇವತ್ತು ತಿಳಿಸುತ್ತಾ, ಬಹಳ ಕಾಲಾವಕಾಶ ಕಡಿಮ ಇರುವುದರಿಂದ ಕೆಲವು ವಿಚಾರಗಳನ್ನು ಮಾತ್ರ ತಿಳಿಸುತ್ತೇನೆ. ನಾವು ಕೋಲಾರ ಜಿಲ್ಲೆಯಿಂದ ಬಂದಿರತಕ್ಕಂಥವರು. ಅದರ ನೈಜ ಪರಿಸ್ಥಿತಿ ತಮಗೆ ಗೊತ್ತಿದೆ ನಮಗೆ ನದಿ, ನಾಲೆ ಏನೂ ಇಲ್ಲ. ನಾವು ಸಂಪೂರ್ಣವಾಗಿ ಪ್ರಕೃತಿಯ ಆಶೀರ್ವಾದದಿಂದ ಬಂದಿರುವಂತಹ ವಾತಾವರಣಕ್ಕೆ ಅಳವಡಿಸಿಕೊಂಡಿರುವುದು. ಕೋಲಾರ ಜಿಲ್ಲೆ ಒಂದು ಕಡೆ ಹಾಲು ಉತ್ಪಾದನೆ ಹಾಗೂ ರೇಷ್ಮೆ ಉತ್ಪಾದನೆ ಮಾಡುತ್ತಾರೆ. ನೂರಕ್ಕೆ 85 ಭಾಗ ಸಣ್ಣ ಹಿಡುವಳಿದಾರರಿಂದ ಜೀವನ ಮಾಡುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ನನಗೆ ಏನೋ ಸಂಶಯ ಬರುತ್ತಿದೆ. ಪ್ರತಿಯೊಬ್ಬರೂ ಏಕೋ ನಿಮಗೆ ಕಾಗದ ಕೊಡುತ್ತಿದ್ದಾರೆ. ಅವರು ಏನು ಕೊಡುತ್ತಾರೆ ಸ್ವಲ್ಪ ಬಹಿರಂಗ ಪಡಿಸಬೇಕು. ಎಸ್.ಎಸ್. ಪಾಟೀಲ್ ಅವರು ಕೊಟ್ಟರು ನಂತರ ಕೃಷಿ ಮಂತ್ರಿ ಕೊಟ್ಟರು, ಕತ್ತಿಯವರು ಕೊಟ್ಟರು, ಮಾನ್ಯ ಪ್ರಕಾಶ್‌ರವರು ಕೊಟ್ಟರು, ಮುಂಜಾನೆಯಿಂದ ಒಂಬತ್ತು ಲೆಟರ್ ನಾನು ನೋಡುತ್ತಿದ್ದೇನೆ. ಅದು ಯಾವುದು ಕಾಗದ, ಏನು ವಿಷಯ ಎಂದು ಈ ಸಭೆಗೆ ಬಹಿರಂಗಪಡಿಸಬೇಕು ಎಂದು ನಾನು ಕಳಕಳಿಯಿಂದ ಮನವಿ ಮಾಡುತ್ತೇನೆ.

ಅಧ್ಯಕ್ಷರು :— ನಾನು ತಿಳಿಸುತ್ತೇನೆ. ಎಲ್ಲರಿಗಿಂತ ಬಹಳ ಡೇಂಜರಸ್ ಲೆಟರ್ ನನಗೆ ಬಂದಿದ್ದು ಎಂದರೆ ಎಸ್.ಎಸ್. ಪಾಟೀಲ್ ಅವರ ಕಡೆಯಿಂದ ಬಂದಿದ್ದು.

ಶ್ರೀ ವಿ. ಮುನಿಯಪ್ಪ :— ಎಲ್ಲಾ ವರ್ಗಗಳಲ್ಲಿ ಒಂದು ಸಂಘಟನೆ ಇದೆ. ಆದರೆ ದುರಾದೃಷ್ಟ ನಮ್ಮ ರೈತರಲ್ಲಿ ಒಂದು ಸಂಘಟನೆ ಇಲ್ಲ. ಯಾವುದಾದರೂ ಒಂದು ಅಸಂಘಟಿತ ವರ್ಗವಿದೆ ರಾಜ್ಯದಲ್ಲಿ ಅಥವಾ ರಾಷ್ಟ್ರದಲ್ಲಿ ಎಂದರೆ ಅದು ರೈತ ಸಮುದಾಯ. ಅವರ ಒಂದು ವ್ಯವಸ್ಥೆ ಹಾಗೆ ಇದೆ. ಬದುಕು ಹಾಗೆ ಇದೆ. ಯಾವುದೇ ಕಾರಣಕ್ಕೂ ಸಂಘಟನೆಗಳಲ್ಲಿ ತನ್ನನ್ನು ತಾವು ಅಳವಡಿಸಿಕೊಳ್ಳುವಂತಹ ವಾತಾವರಣ ಇಲ್ಲ. ಆ ದೃಷ್ಟಿಯಿಂದ ಉತ್ಪಾದನೆ ಮಾಡುವುದಕ್ಕೆ ಉತ್ಪಾದನೆ ವೆಚ್ಚಕ್ಕೆ ತಕ್ಕಂತೆ ಕಷ್ಟಕ್ಕೆ ತಕ್ಕಂತೆ ಫಲ ಸಿಗತಕ್ಕಂಥ ವ್ಯವಸ್ಥೆ ಈಗ ರೈತನಿಗೆ ಉದ್ಭವವಾಗಿರತಕ್ಕಂಥಾದ್ದು ನೋಡುತ್ತಿದ್ದೇವೆ. ಅದರಲ್ಲಿ ವಿಶೇಷವಾಗಿ ಇವತ್ತು ಹಾಲು ಎಂದರೆ ಬಹುಶಃ ಭೂಲೋಕದಲ್ಲಿ ಅಥವಾ

ಈ ಕಲಿಯುಗದಲ್ಲಿ ಅದೇ ಅಮೃತವೆಂದು ಹೇಳುತ್ತಾರೆ. ಅದಕ್ಕೆ ಕಾರಣ ಕೂಡ ಇದೆ. ಮಗುವಿಗೆ ಹುಟ್ಟುತ್ತಲೇ ಹಾಲು ಕೊಡುತ್ತಾರೆ. ಅಥವಾ ಮನುಷ್ಯ ಸಾಯುತ್ತಿದ್ದಾರೆ ಎಂದರೆ ಹಾಲು ಕೊಡುತ್ತಾರೆ, ಕಾರಣ ಶಕ್ತಿ ಬರುತ್ತದೆ, ಅವನು ಇನ್ನು ಕೆಲವು ಕಾಲ ಉಳಿಯುತ್ತಾನೆ ಎಂದು. ಹಾಲಿನ ಒಂದು ಶಕ್ತಿ ಪ್ರಾಮುಖ್ಯತೆ ಬಹಳ ಮಹತ್ತರವಾದುದು. ಅಂತಹ ಮಹತ್ತರವಾದಂತಹ ಹಾಲಿಗೆ ಕೊಡುತ್ತಿರತಕ್ಕಂಥ ಬೆಲೆಯನ್ನು ನಾವು ವಿಚಾರ ಮಾಡಿದರೆ ಬಹಳ ನೋವಾಗುತ್ತದೆ. ರಿಮೋಟ್ ಪ್ಲೇಸಸ್‌ನಲ್ಲಿರುವ ಹಳ್ಳಿಗಳಿಗೆ ಐದು

6.50 ಪಿ.ಎಂ.

ಗಂಟೆಗೆ ಲಾರಿ ಹೋಗುತ್ತದೆ. ಹಾಲು ಕರೆಯುವುದಕ್ಕೆ ಮಹಿಳೆಯರು ಮುಂಜಾನೆ ಮೂರು ಗಂಟೆಗೆ ಏಳಬೇಕು. ಅಷ್ಟು ಹೊತ್ತಿಗೆ ಎದ್ದು ಹಾಲು ಕರೆದು ಅದನ್ನು ಕೇಂದ್ರಕ್ಕೆ ತೆಗೆದುಕೊಂಡು ಹೋಗಬೇಕಾದರೆ ಹಳ್ಳಿಯಲ್ಲಿರುವ ತೊಂದರೆಗಳು ಸಾಮಾನ್ಯವಾಗಿ ಯಾರಿಗೂ ಬರತಕ್ಕಂಥಾದ್ದಲ್ಲ. ಆದರೂ ತಮಗಿರುವ ಕಷ್ಟವನ್ನು ಮೆಟ್ಟಿ ನಿಂತು ಅನಿವಾರ್ಯ ಪರಿಸ್ಥಿತಿಯಲ್ಲೂ ಆ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ ಎನ್ನುವುದಾದರೆ ಇದರ ಬಗ್ಗೆ ಸರ್ಕಾರ ತೀವ್ರವಾಗಿ ಗಮನಹರಿಸಲಿಲ್ಲವೆಂದರೆ, ಮತ್ತು ಅದಕ್ಕಿಂತ ಮುಖ್ಯವಾಗಿ ಯಾವುದೇ ಸರ್ಕಾರವಿರಲಿ ವಾಸ್ತವವಾಗಿ ಹಾಲಿನ ಉತ್ಪಾದನಾ ವೆಚ್ಚವೇನಿದೆ, ಅದರ ಆಧಾರದ ಮೇಲೆ ಸರ್ಕಾರ ಹಾಲಿನ ದರ ನಿಗದಿಪಡಿಸದೆ ಹೋದರೆ ರೈತರ ಪರವಾಗಿ ಇಲ್ಲಿ ಬಂದು ಪ್ರತಿನಿಧಿಸುವಂಥ ಜನರಾದ ನಾವು ಖಂಡಿತವಾಗಿಯೂ ಮಹಾಪಾಪ ಮಾಡಿದಂತಾಗುತ್ತದೆಂಬ ವಿಷಯವನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲು ಇಷ್ಟಪಡುತ್ತೇನೆ. ಕುಡಿಯುವ ನೀರಾದ ಬಿಸ್ಲೇರಿ ಮಿನರಲ್ ವಾಟರ್‌ಗೆ ಲೀಟರ್‌ವೊಂದಕ್ಕೆ ರೂ. 15, ರೂ.16 ನಿಗದಿಪಡಿಸಿದ್ದು, ಒಂದು ಲೀಟರ್ ಹಾಲಿಗೆ ರೂ. 10, ರೂ. 9, ರೂ. 8.00 ರಂತೆ ಕೊಡುತ್ತಿದ್ದೇವೆ. ಇವೊತ್ತು ಪಶುವಿನ ಆಹಾರ ಪದಾರ್ಥಗಳ ಬೆಲೆಗಳೆಲ್ಲವೂ ಗಗನಕ್ಕೇರಿದ್ದು ಕೊಳ್ಳುವುದಕ್ಕಾಗುತ್ತಿಲ್ಲ. ಹಸುಗಳನ್ನು ಸಾಕಿ ಹಾಲು ಕರೆದು ಅದರಿಂದ ಬರುವ ದುಡ್ಡು ಕೇವಲ ಪಶು ಆಹಾರಕ್ಕಷ್ಟೇ ಸಾಕಾಗುತ್ತಿದ್ದು ಅವರ ಬಳಿ ಬಿಡಿಗಾಸು ಉಳಿಯುವ ಪರಿಸ್ಥಿತಿಯಿಲ್ಲ. ಅವರ ಕೂಗು ಮುಟ್ಟುತ್ತಿಲ್ಲ. ಬೆಂಗಳೂರಿನಲ್ಲಿ ಸುಮಾರು ಎರಡು ಲಕ್ಷ ಸಂಘಟಿತ ವರ್ಗವಿದ್ದು ಒಂದು ಕಡೆ ಪತ್ರಿಕಾ ಸ್ನೇಹಿತರು ಅದಕ್ಕೆ ಬೆಂಬಲ ಕೊಟ್ಟರೆ ಇನ್ನೊಂದೆಡೆ ಕಾರ್ಮಿಕ ವರ್ಗವಿದೆ. ನಗರ ಪ್ರದೇಶಗಳಲ್ಲಿ ಐವತ್ತು ಲಕ್ಷ ಜನಸಂಖ್ಯೆದಷ್ಟಿರುವ ಜನರ ಕೂಗು ತತ್‌ಕ್ಷಣ ವಿಧಾನಸೌಧದ ಕಿವಿಗೆ ಕೇಳಿಸುತ್ತದೆ, ಆದರೆ, ಹಾಲಿನ ಬೆಲೆ ಹೆಚ್ಚಿಸಬೇಕೆಂದರೆ ಸರ್ಕಾರ ಹಿಂದೆ ಸರಿಯುತ್ತದೆ. ವಾಸ್ತವವಾಗಿ ಹಾಲಿನ ಉತ್ಪಾದನೆಗೆ ಇರುವ ಕಷ್ಟವನ್ನು ಮನವರಿಕೆ ಮಾಡಿಕೊಂಡರೆ ನಿಜವಾಗಿಯೂ ಹಾಲಿಗೆ ನಿಗದಿಪಡಿಸಿರುವ ದರ ಏನೇನೂ ಸಾಲದಾಗಿದೆ. ಆದುದರಿಂದ, ದಯಮಾಡಿ ಬಿಸ್ಲೇರಿ ನೀರಿಗೆ ಕೊಡುತ್ತಿರುವಂತೆ ಒಂದು ಲೀಟರ್ ಹಾಲಿಗೆ ಕನಿಷ್ಠ ರೂ. 15ಕ್ಕೆ ಕಡಿಮೆಯಿಲ್ಲದಂತೆ ದರವನ್ನು ನಿಗದಿಪಡಿಸುವ ವ್ಯವಸ್ಥೆ ಮಾಡಿದರೆ ಹಾಲಿಗೆ ಇರುವ ಒಂದು ಪ್ರಾಮುಖ್ಯತೆ,

ಮಹತ್ವ ಗೊತ್ತಾಗುತ್ತದಲ್ಲದೆ ಆರೋಗ್ಯಕ್ಕೆ ನಿಜವಾಗಿಯೂ ಬೆಂಬಲ ಕೊಟ್ಟಂತಾಗುತ್ತದೆ ಮತ್ತು ಇದರಿಂದಾಗಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಹಾಲು ಉತ್ಪಾದನೆಗೆ ಅವಕಾಶವಾಗುತ್ತದೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುತ್ತಾ ದಯಮಾಡಿ ಹಾಲಿನ ಬೆಲೆಯನ್ನು ಹೆಚ್ಚಿಸಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಎರಡನೆಯದಾಗಿ, ಬಯಲುಸೀಮೆ ಅಭಿವೃದ್ಧಿ ಮಂಡಳಿ ವಿಚಾರದಲ್ಲಿ ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿರುವುದರಿಂದ ನಾನು ಅದರ ಬಗ್ಗೆ ಹೆಚ್ಚಿಗೆ ಪ್ರಸ್ತಾಪಿಸುವುದಿಲ್ಲ. ಮೈನರ್ ಇರಿಗೇಷನ್‌ಗೆ ಕೇವಲ ರೂ. 125 ಕೋಟಿ ಕೊಟ್ಟಿದ್ದೀರಿ. ಈ ಸಲ ಡಿ-ಸಿಲ್ಟಿಂಗ್ ವಿಚಾರದಲ್ಲಿ ಕೆರೆ ಕಲ್ಯಾಣ ಕಾರ್ಯಕ್ರಮ ಹಮ್ಮಿಕೊಂಡಿದ್ದು ಕಳೆದ ವರ್ಷ ಇದಕ್ಕಾಗಿ ರೂ. 10 ಕೋಟಿ ಕೊಟ್ಟಿದ್ದಿರಿ. ಆದರೆ, ಇವೊತ್ತಿನವರೆವಿಗೂ ಯಾರಿಗೂ ಒಂದು ಬಿಡಿಗಾಸಿನ ಪೇಮೆಂಟ್ ಆಗಿಲ್ಲ. ಕಾರಣವೇನೆಂದರೆ, ಅದನ್ನು ಬಜೆಟ್‌ನಲ್ಲಿ ಸೇರಿಸಿಲ್ಲ ಮತ್ತು ಹಣಕಾಸು ಇಲಾಖೆಯವರು ಇದಕ್ಕೆ ಅಬ್ಜೆಕ್ಷನ್ ಹಾಕಿರುವುದರಿಂದ ಮೈನರ್ ಇರಿಗೇಷನ್‌ನ ಯಾವುದೇ ಕೆರೆಗಳಿಗೆ ಇವೊತ್ತಿನವರೆಗೆವಿಗೂ ಒಂದು ರೂಪಾಯಿಯನ್ನೂ ಕೊಟ್ಟಿಲ್ಲ. ಆದ್ದರಿಂದ, 'ಕೆರೆ ಕಲ್ಯಾಣ' ಯೋಜನೆಯನ್ನು ಬಜೆಟ್‌ನಲ್ಲಿ ಸೇರಿಸಿ ಅದಕ್ಕೆ ನಿಗದಿತವಾದ ಅಲೋಕೇಷನ್ ಕೊಟ್ಟರೆ ಮಾತ್ರ ಪೇಮೆಂಟ್ ಆಗುತ್ತದೆ ಇಲ್ಲದಿದ್ದರೆ ಕಾರ್ಯಕ್ರಮ ಸುಮ್ಮನೆ ನಾಮಕಾವಸ್ತೆಯಾಗಿ ಉಳಿಯುತ್ತದೆ. ಬಯಲುಸೀಮೆ ಅಭಿವೃದ್ಧಿ ಮಂಡಳಿಯಿಂದ ನಮ್ಮ ತಾಲ್ಲೂಕಿನಲ್ಲಿರುವ ಕೆರೆಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಕೇವಲ ನಾಲ್ಕೂವರೆ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು. ಕಾರಣಾಂತರಗಳಿಂದ ಕಳೆದ ವರ್ಷ ಕೆರೆಗಳಲ್ಲಿನ ಹೂಳೆತ್ತುವ ಕಾರ್ಯಕ್ರಮವನ್ನು ಪ್ರಾರಂಭಿಸುವುದಕ್ಕಾಗಲಿಲ್ಲ. ಮಧ್ಯೆ ಮಧ್ಯೆ ಮಳೆ ಬಂದಿದ್ದರಿಂದ ಕಾರ್ಯಕ್ರಮ ಸರಿಯಾಗಿ ಅನುಷ್ಠಾನವಾಗಲಿಲ್ಲ. ಈ ಸಲ ಸದರಿ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದರೆ ಕೇವಲ ಎರಡು ಲಕ್ಷ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಲಾಯಿತು. ರೈತರುಗಳು ಸುಮಾರು 50-60 ಟ್ರ್ಯಾಕ್ಟರುಗಳನ್ನು ವಾಲಂಟರಿಯಾಗಿ ಹೂಳನ್ನು ತೆಗೆದುಕೊಂಡು ಹೋಗಲು ಬರುತ್ತಿದ್ದಾರೆ ಕೆರೆಗಳು ಆರು ಅಡಿಗಳಷ್ಟು ಹೂತು ಹೋಗಿದ್ದು, ಮಾನ್ಯ ಮಂತ್ರಿಗಳಿಗೆ ಮತ್ತು ಮಾನ್ಯ ಅಧ್ಯಕ್ಷರಿಗೆ ಯಾವತ್ತಾದರೂ ಪುರಸೊತ್ತಿದ್ದರೆ ಅರ್ಧ ಗಂಟೆ ಬಂದು ನೋಡಬೇಕು. ಸುಮಾರು ಆರು ಅಡಿಗಳಷ್ಟು ಸಿಲ್ಟ್ ಡಿಪಾಸಿಟ್ ಆಗಿದೆ. ಅಂತಹದನ್ನು ತೆಗೆದುಕೊಂಡು ಹೋಗುವುದಕ್ಕೆ ಇವೊತ್ತು ರೈತರುಗಳು ವಾಲಂಟರಿಯಾಗಿ ಟ್ರ್ಯಾಕ್ಟರುಗಳನ್ನು ತರುತ್ತಿರುವುದರಿಂದ ಇಂತಹುದಕ್ಕೆ ನಾವು ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹ ಕೊಡಬೇಕೆಂಬ ಮನಸ್ಸು ನಮಗೆ ಬರುತ್ತದೆ. ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಸುಮಾರು 600 ರಿಂದ 650 ಅಡಿಗಳಷ್ಟು ಆಳದವರೆಗೆ ಬೋರ್‌ವೆಲ್‌ಗಳನ್ನು ಕೊರೆದಿದ್ದಾರೆ. ಇದರಿಂದ ಮುಂದಿನ ಪೀಳಿಗೆ ಏನಾಗಬಹುದೆಂಬುದನ್ನು ಯೋಚನೆ ಮಾಡಿದರೆ ಮುಂದೊಂದು ದಿನ ಎಲ್ಲಿ ಮರಳುಗಾಡಾಗುತ್ತದೆನ್ನುವ ಅನುಮಾನ ಕಾಡುತ್ತಿದ್ದು ನೆನೆಸಿಕೊಂಡರೆ ನಮಗೆ ಭಯವಾಗಿ ನಡುಕವುಂಟಾಗುತ್ತದೆ. ಇಂತಹ ಸಂದರ್ಭದಲ್ಲಿ ನಮಗಿರುವ ಜೀವನಾಡಿಗಳೆಂದರೆ ಸಣ್ಣ

ಕೆರೆಗಳು ಮಾತ್ರ. ತಮಗೆ ಗೊತ್ತಿರುವಂತೆ ಕೋಲಾರ ಜಿಲ್ಲೆಯಲ್ಲಿ 3,650 ಕೆರೆಗಳಿದ್ದು, ಮೂರು ವರ್ಷಗಳಿಗೊಮ್ಮೆ ಯಾವಾಗಲಾದರೊಮ್ಮೆ ಮಳೆ ಬಂದಾಗ ಪ್ರತಿಯೊಂದು ಕೆರೆಗಳು ತುಂಬಿ ಕೋಡಿ ಹರಿಯುತ್ತವೆ ಮತ್ತು ಮಾರನೇ ತಿಂಗಳಿಗೆ ಎಲ್ಲಾ ಕೆರೆಗಳು ಒಣಗಿಹೋಗಿರುತ್ತವೆ. ಕಾರಣ, ಕೆರೆಗಳೆಲ್ಲವೂ ಶೇಕಡ 75 ಭಾಗದಷ್ಟು ಸಿಲ್ಟ್-ಆಫ್ ಆಗಿರುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಆದುದರಿಂದ, ಸಣ್ಣ ಕೆರೆಗಳೇ ನಮಗೆ ಜೀವಾಳವಾಗಿದ್ದು ಅವುಗಳನ್ನು ಬಿಟ್ಟರೆ ಜೀವನ ಮಾಡುವುದಕ್ಕೆ ನಮಗೆ ಬೇರೆ ದಾರಿಯೇ ಇಲ್ಲ. ಆ ಕಾರಣಕ್ಕಾಗಿ ಕೆರೆಗಳಲ್ಲಿರುವ ಹೂಳನ್ನು ತೆಗೆಯುವ ಕಾರ್ಯಕ್ರಮಕ್ಕೆ ಹೆಚ್ಚಿನ ಆದ್ಯತೆ ನೀಡಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಕೆರೆ ಕಲ್ಯಾಣ ಕಾರ್ಯಕ್ರಮಕ್ಕಾಗಿ ಪ್ರತ್ಯೇಕವಾಗಿ ಬಜೆಟ್ ಅಲೋಕೇಷನ್ ಮಾಡಿ ಹಣ ನೇರವಾಗಿ ಅಲ್ಲಿಗೇ ಹೋಗುವಂಥ ವ್ಯವಸ್ಥೆ ಮಾಡಬೇಕು ಇಲ್ಲದಿದ್ದರೆ ತಾಂತ್ರಿಕ ತೊಂದರೆಯುಂಟಾಗಿ ಕಾರ್ಯಕ್ರಮ ಅನುಷ್ಠಾನಗೊಳಿಸುವುದಕ್ಕೆ ಕಷ್ಟವಾಗುತ್ತದೆಂದು ಹೇಳುತ್ತಿದ್ದೇನೆ. ಇನ್ನು ರಸ್ತೆಗಳ ಪರಿಸ್ಥಿತಿ ಬಗ್ಗೆ ಹೇಳುವುದಾದರೆ, ರಸ್ತೆಗಳ ಅಭಿವೃದ್ಧಿಗೆ ಜಾಸ್ತಿ ಹಣ ಕೊಟ್ಟಿದ್ದೇವೆಂದು ಸರ್ಕಾರದವರಾದ ನೀವು ಬಹಳ ಜೋರಾಗಿ ಹೇಳುತ್ತಿದ್ದೀರಿ. ಆದರೆ, ಅಂದಾಜು ಸಮಿತಿಯ ವರದಿ ಹಾಗೂ ನಿಮ್ಮ ಇಲಾಖಾಧಿಕಾರಿಗಳು ಕೊಟ್ಟಿರುವ ವರದಿ ಬಗ್ಗೆ ಸಂಕ್ಷಿಪ್ತವಾಗಿ ನಾನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ನಮ್ಮಲ್ಲಿ ಬಾಗೇಪಲ್ಲಿ-ಬಂಗಾರಪೇಟೆ ರಸ್ತೆಯಿದ್ದು ಯಾರಾದರೂ ಮಂತ್ರಿಗಳು ಕಾರು ತೆಗೆದುಕೊಂಡು ಒಮ್ಮೆ ಆ ರಸ್ತೆಯಲ್ಲಿ ಹೋಗಿ ಬಂದರೆ ಪುನಃ ಈ ರಸ್ತೆಯಲ್ಲಿ ಬರಬಾರದೆಂದು ವಾಪಸ್ಸು ಹೋಗುತ್ತಾನೆ. ಸಾದಿಲಿಯಿಂದ ಮಿಟ್ಟೇಮರಿ ಮಾರ್ಗವಾಗಿ ಬಾಗೇಪಲ್ಲಿಗೆ ಮತ್ತು ಸಾದಿಲಿಯಿಂದ ಬೈರಸಂದ್ರಕ್ಕೆ ಹೋಗುವ ರಸ್ತೆ ಮಾರ್ಗ ಬಹಳಷ್ಟು ಕೆಟ್ಟಿದ್ದು ಸುಗಮವಾಗಿ ಸಂಚರಿಸುವುದಕ್ಕಾಗುವುದಿಲ್ಲ. ರಸ್ತೆ ದುರಸ್ತಿಗೆ ಯಾವ ಹೆಡ್‌ನಲ್ಲಿ ಹಣ ಕೇಳಿದರೂ ಇಲ್ಲವೆನ್ನುತ್ತಾರೆ. 1995-96ರಲ್ಲಿ ರೂ.71 ಕೋಟಿ 28 ಲಕ್ಷ ರೂಪಾಯಿ ಅನುದಾನವಿದ್ದುದು 97-98ರಲ್ಲಿ ರೂ. 56 ಕೋಟಿ 45 ಲಕ್ಷಕ್ಕೆ ಇಳಿದಿದೆ. ಅದರ ವೆಚ್ಚ 1995-96, 96-97 ಮತ್ತು 97-98ರಲ್ಲಿ ಕ್ರಮವಾಗಿ ರೂ. 60 ಕೋಟಿ 15 ಲಕ್ಷ, 85 ಕೋಟಿ 78 ಲಕ್ಷ ಮತ್ತು ರೂ.63 ಕೋಟಿ 38 ಲಕ್ಷವಾಗಿದೆ. 1997-98ರಲ್ಲಿ ನೀಡಿದ್ದ ರೂ.56 ಕೋಟಿ 45 ಲಕ್ಷ ರೂಪಾಯಿಗಳ ಅನುದಾನದಲ್ಲಿ ರೂ.12 ಕೋಟಿ ಕಡಿತವಾಗಿದೆ. 1998-99ರ ಸಾಲಿಗೆ ರೂ.37 ಕೋಟಿ 10 ಲಕ್ಷ ಅನುದಾನ ನೀಡಿದ್ದು 95-96ನೇ ಸಾಲಿಗೆ ಹೋಲಿಸಿದಾಗ ಶೇಕಡ 52ರಷ್ಟಾಯಿತು. 1994-95ಕ್ಕಿಂತ ಮುಂಚಿತವಾಗಿ ನೀವು ಏನು ಅನುದಾನ ಕೊಡುತ್ತಿದ್ದೀರಿ, ಅದರಲ್ಲಿ ಶೇಕಡ 48 ರಷ್ಟು ರಸ್ತೆಗಳಿಗೆ ಸಂಬಂಧಿಸಿದಂತೆ ಕಡಿಮೆ ಮಾಡಿದ್ದೀರಿ. ಆದುದರಿಂದ, ಇವೊತ್ತು ರಸ್ತೆಗಳ ದುರಸ್ತಿ ಇನ್ನೂ ಮಾಡಬೇಕಾಗಿರುತ್ತದೆ. ಅಷ್ಟೇ ಅಲ್ಲದೆ, ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ ಮತ್ತು ದುರಸ್ತಿ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸುವುದಕ್ಕಾಗುತ್ತಿಲ್ಲವೆಂದು ನಿಮ್ಮ ಇಲಾಖೆಯಾದ ಪಿಡಬ್ಲ್ಯೂಡಿ ವರದಿ ನೀಡಿದೆ. ಅಂದರೆ ಕೆಟ್ಟಿರುವ ರಸ್ತೆಗಳ

ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ನಮಗಂತೂ ಯಾವುದೇ ಹೆಡ್‌ನಲ್ಲೂ ಹಣ ಸಿಗುತ್ತಿಲ್ಲ. ಆ ರಸ್ತೆಗಳ ಗತಿ ನೋಡಿದರೆ, ಆ ಮಾರ್ಗವಾಗಿ ಪ್ರಯಾಣಿಸಲು ನಮಗೆ ನಾಚಿಕೆಯಾಗುತ್ತದೆ. ಆದುದರಿಂದ, ರಾಜ್ಯ ಹಾಗೂ ಜಿಲ್ಲಾ ಹೆದ್ದಾರಿಗಳೇನಿವೆ, ಇವುಗಳು ಸಂಪರ್ಕ ಕಲ್ಪಿಸುವ ಬಹಳ ಪ್ರಾಮುಖ್ಯ ರಸ್ತೆಗಳಾಗಿದ್ದು ಇವುಗಳ ಅಭಿವೃದ್ಧಿಗೆ ನಿರ್ದಿಷ್ಟ ಹಣ ನಿಗದಿಪಡಿಸುಕೊಡುವ ವ್ಯವಸ್ಥೆಯಾಗಬೇಕು. ಇನ್ನು ಆಹಾರ ವಸ್ತುಗಳ ವಿತರಣೆಗೆ ಸಂಬಂಧಿಸಿದಂತೆ ಹೇಳುವುದಾದರೆ, ತಮಗೆ ಗೊತ್ತಿರುವಂತೆ ಸುಮಾರು 85 ಲಕ್ಷದಷ್ಟು ಹಸಿರು ಕಾರ್ಡುಗಳಿದ್ದುದನ್ನು 66 ಲಕ್ಷಕ್ಕೆ ಇಳಿಸಿದ್ದೀರಿ. ತಾವು ಬೋಗಸ್ ಕಾರ್ಡ್‌ಗಳನ್ನು ಸರ್ವೆ ಮಾಡಿ ಮುಟ್ಟುಗೋಲು ಹಾಕಿಕೊಂಡಿರುವುದಕ್ಕೆ ನನ್ನದೂ ಪ್ರೋತ್ಸಾಹವುಂಟು. ಆದರಲ್ಲಿ ಬೇರೆ ಮಾತಿಲ್ಲ. ಬಹಳ ವಿಚಿತ್ರವಾದ ಸಂಗತಿಯೆಂದರೆ, ಹಸಿರು ಕಾರ್ಡಿನ ಬೆಲೆ ರೂ. 3.50 ಪೈಸೆಯಿದ್ದು, ಈಗ ಮಾರುಕಟ್ಟೆಯಲ್ಲಿ ಅಕ್ಕಿಯ ಬೆಲೆ ರೂ.1,500ರಿಂದ 1,600 ಆಗಿದೆ. ಇದರಿಂದ ಫೇರ್ ಪ್ರೈಸ್ ಡಿಪೋ ಹೋಲ್ಡರ್ಸ್‌ಗೆ ಮತ್ತು ಹೋಲ್‌ಸೇಲ್ ಪಾಯಿಂಟ್‌ನವರಿಗೆ ಬಹಳ ಹಬ್ಬವಾಗಿದೆ. ಹಬ್ಬವೆಂದರೆ ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ, ಅದರಲ್ಲಿ ಅಷ್ಟೊಂದು ವ್ಯತ್ಯಾಸವಾಗಿದೆ. ಮಾರುಕಟ್ಟೆ ದರಕ್ಕೂ ಮತ್ತು ಪಡಿತರ ವ್ಯವಸ್ಥೆ ಮೂಲಕ ಹಂಚುವ ಅಕ್ಕಿಯ ದರಕ್ಕೂ ಕಳೆದ 2-3 ವರ್ಷಗಳಿಂದ ಮಾತ್ರ ವ್ಯತ್ಯಾಸವಾಗಿದೆ. ಮೊದಲಿ ಇಷ್ಟೊಂದು ವ್ಯತ್ಯಾಸವಿರಲಿಲ್ಲ. ಅಕ್ಕಿ ದರ ಇಲ್ಲಿ ರೂ.300, ರೂ. 400 ಇದ್ದರೆ ಅಲ್ಲಿ ರೂ. 600, ರೂ.700ಕ್ಕೆ ಸಿಗುತ್ತಿತ್ತು ಮತ್ತು ಆಗ ಅಕ್ಕಿ ದುರುಪಯೋಗವಾಗುವ ಸಂಭವ ಬಹಳ ಕಡಿಮೆ ಇತ್ತು. ಆಗ ಏನಾಗಿಯೆಂದರೆ, ಒಂದು ಮೂಟೆ ಅಕ್ಕಿಗೆ ಒಂದು ಸಾವಿರ ರೂಪಾಯಿಗಳಷ್ಟು ಲಾಭ ಸಿಗುತ್ತದೆ. ಅಂದರೆ, ವ್ಯತ್ಯಾಸ ರೂ.1,500ಗಳಾಗಿ ಅವರು ರೂ,1,200 ರಿಂದ ರೂ.1300ಗಳಿಗೆ ಮಾರಿಕೊಂಡರು. ಇವೊತ್ತು ಫೇರ್ ಪ್ರೈಸ್ ಡಿಪೋನವರು, ಹೋಲ್‌ಸೇಲ್ ಪಾಯಿಂಟ್‌ನವರು ಮತ್ತು ಜಿಲ್ಲಾ ಮಟ್ಟದಲ್ಲಿರುವ ಅಧಿಕಾರಿಗಳು ಒಂದಾಗಿದ್ದು ಈ ಕುರಿತು ನೀವು ಎಷ್ಟೇ ದೂರುಗಳನ್ನು ಕೊಟ್ಟರೂ ಅವರಿಂದ ಹುಡುಕುವುದಕ್ಕಾಗುವುದಿಲ್ಲ. ಎರಡು ಕೋಟಾವನ್ನು ಒಂದೇ ಬಾರಿ ತರುತ್ತಾರೆ. ಅನೇಕ ಟಿ.ಎ.ಪಿ.ಸಿ.ಎಂ.ಎಸ್.ನಲ್ಲಿ ಬಂಡವಾಳವೇ ಇಲ್ಲ. ಇವೊತ್ತು ಹತ್ತನೇ ತಾರೀಖಿನಂದು ಹಣ ತೆಗೆದುಕೊಂಡು ಹೋದರೆ ಇಪತ್ತು ದಿವಸಗಳಾದರೂ ಫೇರ್ ಪ್ರೈಸ್ ಡಿಪೋನವರು ಅವರಿಗೆ ಆಹಾರಧಾನ್ಯಗಳನ್ನು ತಂದುಕೊಡುವುದಿಲ್ಲ. ಅನಂತರ ಏನು ಮಾಡುತ್ತಾರೆಂದರೆ ಮುಂದಿನ ತಿಂಗಳು ಬಂದಾಗ ಆ ತಿಂಗಳಿನ ಹಣ ಕಟ್ಟಿಸಿಕೊಂಡು ಒಂದು ತಿಂಗಳ ಆಹಾರ ಪಡಿತರ ವಿತರಿಸಿ ಇನ್ನೊಂದು ತಿಂಗಳಿನದು ಯಾರಿಗೂ ಹೇಳುವುದಿಲ್ಲ. ಅವರೂ ಅಷ್ಟೆ ಫೇರ್ ಪ್ರೈಸ್ ಡಿಪೋಗೆ ಎರಡು ತಿಂಗಳಿನದು ಒಂದೇ ಸಾರಿ ತೆಗೆದುಕೊಂಡು ಹೋಗುತ್ತಾರೆ ಮತ್ತು ಎರಡು ತಿಂಗಳಿನದು ಎಂಟ್ರಿ ಮಾಡಿಕೊಡುತ್ತಾರೆ. ಹಳ್ಳಿಯಲ್ಲಿರುವ ರೈತರುಗಳು ಅಶಿಕ್ಷಿತರಾಗಿದ್ದು ಅವರುಗಳಿಗೆ ಹಸಿರು ಕಾರ್ಡುಗಳಿದ್ದರೂ ನೂರಕ್ಕೆ ತೊಂಭತ್ತು ಭಾಗ ಗೊತ್ತಾಗುವುದಿಲ್ಲ. ಆ ತರಹದ ಮೋಸ ನಡೆಯುತ್ತಿದೆ. ಹಸಿರು ಕಾರ್ಡು ಉಳ್ಳವರಿಗೆ ಸರ್ಕಾರ ಸಬ್ಸಿಡಿ

ಸಹ ಕೊಡುತ್ತಿದ್ದು ಇದರ ಬಗ್ಗೆ ನನ್ನ ವಿವಾದವೇನೂ ಇಲ್ಲ. ಬಡವರ ಬಗ್ಗೆ ನೀವು ವಿಶೇಷವಾದ ಕಾಳಜಿಯನ್ನೇ ವಹಿಸಿದ್ದೀರಿ. ಆದರೆ, ಆದರ ನಿಜವಾದ ಪ್ರತಿಫಲ ಬಡವರಿಗೆ ಸಿಗುತ್ತಿಲ್ಲ. ಇದರಲ್ಲಿ ಶೇಕಡ 50ಕ್ಕಿಂತ ಮೇಲ್ಪಟ್ಟು ದುರುಪಯೋಗವಾಗುತ್ತಿರುವುದರಿಂದ ಇದರ ಬಗ್ಗೆ ನೀವು ಸರ್‌ಪ್ರೈಸ್ ಚೆಕ್ ಮಾಡಬೇಕೆಂದು ಹೇಳುತ್ತಿದ್ದೇನೆ. ನೀವು ಕಾರ್ಡ್ ಹೋಲ್ಡರ್‌ಗಳ ಒಂದು ಸ್ಕ್ವಾಡ್ ಮಾಡಿ ಜಿಲ್ಲಾವಾರು ಮತ್ತು ಗ್ರಾಮವಾರುಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಸರ್‌ಪ್ರೈಸ್ ಚೆಕ್ ಮಾಡಬೇಕು. ಈ ತರಹ ಮಾಡಿ ನೋಡಿದರೆ ನಿಮಗೆ ರಿಯಾಲಿಟಿ ಗೊತ್ತಾಗುತ್ತದೆ. ಈ ಬಗ್ಗೆ ಯಾವುದೇ ಜಿಲ್ಲಾಧಿಕಾರಿಯನ್ನು ಕೇಳಿದರೆ ಗೊತ್ತಾಗುವುದಿಲ್ಲ. ನೂರು ಮೂಟೆಗಳಿವೆಯೆಂದರೆ ಒಂದು ಲಕ್ಷ ರೂಪಾಯಿ ಬರುತ್ತದೆ ಅಥವಾ ಎಂಬತ್ತು ಸಾವಿರ ರೂಪಾಯಿಗಳು ಬರುತ್ತದೆ. ಒಂದೊಂದು ತಾಲ್ಲೂಕಿಗೆ 40 ರಿಂದ 50 ಲೋಡ್ ಅಕ್ಕಿ ಬರುತ್ತದೆ. ಇದು ಎಷ್ಟರಮಟ್ಟಿಗೆ ವಿತರಣೆಯಾಗುತ್ತದೆ ಮತ್ತು ಎಷ್ಟರಮಟ್ಟಿಗೆ ದುರುಪಯೋಗವಾಗಲು ಅವಕಾಶವುಂಟಾಗುತ್ತದೆ ಎಂಬುದನ್ನು ತಾವು ಊಹಿಸಿಕೊಳ್ಳಿ. ಕಾರಣ, ಮಾರುಕಟ್ಟೆ ಬೆಲೆಗೆ ಬಹಳ ಹತ್ತಿರವಿದೆ. ಆದರ ಅನ್‌ಡ್ಯೂ ಅಡ್ವಾಂಟೇಜ್ ತೆಗೆದುಕೊಳ್ಳುವ ಪ್ರಯತ್ನವಾಗುತ್ತಿದ್ದು, ನಾವು ಅನೇಕ ಸಾರಿ ಈ ಕುರಿತು ಸರ್ಕಾರದ ಗಮನಕ್ಕೆ ತಂದರೂ ಸಹ ಸರ್ಕಾರದ ಯಾವುದೇ ಅಧಿಕಾರಿ ಗಮನಕ್ಕೆ ತೆಗೆದುಕೊಳ್ಳುವುದಿಲ್ಲವೆನ್ನುವ ಮಾತನ್ನು ಅನಿವಾರ್ಯವಾಗಿ ಹೇಳಬೇಕಾಗಿದೆ. ಈಗ ಹೆಚ್ಚು ಸಮಯವಾಗಿರುವುದರಿಂದ, ಕೃಷಿ ಬಗ್ಗೆ ಮಾತನಾಡಲು ಹೆಚ್ಚು ಸಮಯ ತೆಗೆದುಕೊಳ್ಳದೆ ಅದರ ಬಗ್ಗೆ ಸ್ವಲ್ಪ ಮಾತನಾಡಬೇಕಾಗಿದೆ.

ಅಧ್ಯಕ್ಷರು :— ನೀವು ಹಾಗು ಬೈರೇಗೌಡರು ತುಂಬ ಒಳ್ಳೆಯ ಸ್ನೇಹಿತರು.

ಶ್ರೀ ವಿ. ಮುನಿಯಪ್ಪ :— ಅಧ್ಯಕ್ಷರೆ, ಅವರಲ್ಲಿ ಆ ತರಹದ ಸ್ನೇಹ ಸೌಜನ್ಯತೆಯೇ ಇಲ್ಲ. ಅವರ ಹತ್ತಿರ ಇದ್ದಿದ್ದರೆ ನಾನು ಆ ಕುರಿತು ಮಾತನಾಡುವುದಕ್ಕೆ ಹೋಗುತ್ತಿರಲಿಲ್ಲ. ಅವರು ಸಚಿವರಾಗಿ ನಾಲ್ಕು ವರ್ಷ ಕಳೆದಿದ್ದರೂ "ಏನು ಮುನಿಯಪ್ಪ, ನಿನ್ನ ಕಷ್ಟವೇನು? ನಿನ್ನ ಕ್ಷೇತ್ರದ ಪರಿಸ್ಥಿತಿ ಹೇಗಿದೆ?" ಎಂದು ಅವರೂ ಬಾಯಿ ಬಿಟ್ಟು ಕೇಳಲಿಲ್ಲ, ನಾವು ಕೇಳುವುದಕ್ಕೆ ಹೋಗಲಿಲ್ಲ. ಆದಕ್ಕೆ ಈ ಸೌಜನ್ಯತೆಗೆ ಧಕ್ಕೆ ಬಂದು ಈಗ ಕಷ್ಟವಾಗಿರುವುದು.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿ) :— ನೀವು ಮಂತ್ರಿಗಳಾಗಿದ್ದಾಗ ಇದೇ ರೀತಿ ಮಾಡಿದ್ದಿರಬೇಕು.

ಶ್ರೀ ವಿ. ಮುನಿಯಪ್ಪ :— ಇಲ್ಲ ನಾನು ಮಾಡಿಲ್ಲ. ಬೇಕಾದರೆ ಅವರನ್ನು ಕೇಳಿ, ನಾನು ಅವರ ಹಿರಿತನಕ್ಕೆ ಎಷ್ಟು ಗೌರವವನ್ನು ಕೊಡಬೇಕೋ ಆದಕ್ಕೆ ಎರಡರಷ್ಟು ಕೊಟ್ಟು ನಡೆದುಕೊಂಡು ಹೋಗಿದ್ದೇನೆ. ಆದರೆ ನಾವು ಕಿರಿಯರಾಗಿ ಬೆಳೆಯುವುದು ಅವರಿಗೆ

ಮನಸ್ಸಿಲ್ಲ, ಅದೇ ನಮಗೆ ಆಗಿರತಕ್ಕಂಥ ನೋವು, ಅದು ಇರಲಿ ಅದು ಪ್ರತೀಕವಾಗಿರುವ ರಾಜಕಾರಣ, ನಾವು ಮಾಡಿಕೊಳ್ಳುತ್ತೇವೆ ಅದಕ್ಕೆ ನಾವು ತಯಾರಾಗಿದ್ದೇವೆ.

ಅಧ್ಯಕ್ಷರು :— ಏನಪ್ಪ ನೀವು ಸತ್ಯವೆಲ್ಲಾ ಹೇಳಿಬಿಟ್ಟೆಯಲ್ಲಪ್ಪ.

ಶ್ರೀ ಎ. ಮುನಿಯಪ್ಪ :— ಹೌದು ಸಾರ್, ಅದರಲ್ಲಿ ಬೇರೆ ಮಾತಿಲ್ಲ, ಅದನ್ನು ಹೇಗೆ ಮುಚ್ಚಿಡುವುದು. ಈಗ ಕೃಷಿ ವಿಚಾರದ ಬಗ್ಗೆ ಅವರು ಏನೇನೊ ಹೊಸ ನೀತಿಗಳನ್ನು ತರುತ್ತಿದ್ದೇವೆಂದು ಹೇಳುತ್ತಿದ್ದಾರೆ, ಎರಡು ವರ್ಷಗಳ ಹಿಂದೆ ಸಚಿವ ಸಂಪುಟದ ಸಭೆಯಾಯಿತು, ಸಭೆಯ ನಂತರ ಪತ್ರಕರ್ತರನ್ನು ಕಂಡು ಇವತ್ತು ನಾನು ಹೊಸ ಕೃಷಿ ನೀತಿಯನ್ನು ತಂದುಬಿಟ್ಟಿದ್ದೇನೆಂದು ಪತ್ರಕರ್ತರ ಮುಂದೆ ಕುಣಿದಾಡಿಬಿಟ್ಟರೆಂದು ಪತ್ರಿಕೆಯವರು ಬರೆದಿದ್ದರು. ನನಗೂ ಕೂಡ ಬಹಳ ಸಂತೋಷವಾಯಿತು. ನಮ್ಮ ಗೌಡರು, ಇದ್ಯಾವುದೊ ಹೊಸ ನೀತಿ ತಂದುಬಿಟ್ಟರಪ್ಪ, ಯಾರೋ ಒಂದಿಷ್ಟು ರೈತರಿಗೆ ಅನುಕೂಲವಾಗುತ್ತದೆಂದು ನಾನು ನಿಜವಾಗಿಯೂ ಸಂತೋಷಪಟ್ಟೆ. ಆದರೆ ದುರದೃಷ್ಟ ಆ ಕೃಷಿನೀತಿ, ಆ ಕೃಷಿ ನೀತಿಯ ಪ್ರತಿಫಲ ಏನಿದ್ದರೂ ಇದ್ಯಾವುದೋ ನೇಗಿಲಯೋಗಿ ಎಂದು ತಾಲ್ಲೂಕು ಕಛೇರಿಗಳಲ್ಲಿ ದೊಡ್ಡ ದೊಡ್ಡ ಬೋರ್ಡ್‌ಗಳನ್ನು ಹಾಕಿದ್ದಾರೆ ಅದರಲ್ಲಿ ಎಲ್ಲಾ ಪ್ರಚಾರವಿದೆ. ಇದೆಲ್ಲಾ ಇದ್ದರೂ ಕೂಡ ಪುನ: ನೇಗಿಲಯೋಗಿ ಎಂದು ಹೊಸ ಪ್ರದರ್ಶನವನ್ನು ಮಾಡಿದರು ಇರಲಿ; ಪಾಪ ಅದೊಂದು ರೀತಿ ಪ್ರಚಾರ ಮಾಡಬೇಕಾಗಿದೆ. ಎರಡನೆಯದಾಗಿ, ತಮಗೆ ಗೊತ್ತಿರುವಂತೆ, ಶಿವಮೊಗ್ಗದಲ್ಲಿ ಪ್ರಫುಲ್ಲಚಂದ್ರ ಎಂಬುವವರು ಹದಿನೈದು ಇಪ್ಪತ್ತು ವರ್ಷಗಳಿಂದ 42 ಟನ್ ಕಬ್ಬಿನ ಬೆಳೆಯನ್ನು ಬೆಳೆದರೆಂದು ಅವರಿಗೆ ಅಲ್ಲಿ ಬಹುಮಾನ ಕೊಟ್ಟರು. ಬಹುಮಾನ ಕೊಟ್ಟಂಥ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಎಲ್ಲೆಲ್ಲಿ ಕಬ್ಬನ್ನು ಹೆಚ್ಚಿಗೆ ಬೆಳೆಯುತ್ತಾರೆ ಅವರನ್ನೆಲ್ಲಾ ಕರೆದುಕೊಂಡು ಹೋಗಿ ಅಲ್ಲಿ ಕ್ಷೇತ್ರೋತ್ಸವ ಮಾಡಿದರು. ಎಲ್ಲಿ ಮಾಡಬೇಕಾಗಿರುವುದು ಕ್ಷೇತ್ರೋತ್ಸವ? ಪ್ರಗತಿಪರವಾದ ಬೆಳೆ ಎಲ್ಲಿ ಬೆಳೆದಿದೆ ಆ ಸ್ಥಳಕ್ಕೆ ರೈತರನ್ನು ಕರೆದುಕೊಂಡು ಹೋಗಿ ಆತ ವೈಜ್ಞಾನಿಕ ರೀತಿಯಲ್ಲಿ ಹೇಗೆ ಆ ಬೆಳೆಯನ್ನು ಬೆಳೆದ, ಹೆಚ್ಚಿನ ಇಳುವರಿಯನ್ನು ಪಡೆಯಲು ಆತ ಏನೇನು ವೈಜ್ಞಾನಿಕ ಕ್ರಮಗಳನ್ನು ಅನುಸರಿಸಿದ ಎನ್ನುವ ವಿಚಾರಗಳನ್ನು ಪ್ರಾಕ್ಟಿಕಲ್ಲಾಗಿ ಆ ಜಾಗದಲ್ಲಿ ನೋಡಬೇಕು. ಆದರೆ ದುರಾದೃಷ್ಟ ನನಗೆ ತಮಾಷೆ ಏನೆಂದರೆ, ವಿಧಾನಸೌಧಕ್ಕೆ ಕರೆದುಕೊಂಡು ಬಂದು ನಾನು ವಿಧಾನಸೌಧದಲ್ಲಿ ಊಟ ಹಾಕಿಸಿದೆ, ನನಗಿಂತ ರೈತರಿಗೆ ಯಾರು ಸಹಾಯ ಮಾಡಿಲ್ಲವೆಂದರೆ, ಯಾವಾಗಲೋ ಇಪತ್ತು ಮುವತ್ತು ವರ್ಷಗಳ ಹಿಂದೆ ಒಂದು ಮಾತು ಹೇಳಿದ್ದರು, ಯಾರು ರೈತರು ವಿಧಾನಸೌಧವನ್ನು ನೋಡಿರುವುದಿಲ್ಲ ವಿಧಾನಸೌಧಕ್ಕೆ ಹೋದೆವು ಎಂದರೆ ಅವರಿಗೆ ಸಂತೋಷ. ಸರ್ ಈಗ ವಿಧಾನಸೌಧಕ್ಕೆ ಬಂದು ನಾನು ಊಟ ಹಾಕಿಸಿದೆ ಎಂದರೆ ಯಾವ ರೈತ ಊಟಕ್ಕೆ ಕಾಯ್ದುಕೊಳ್ಳುತ್ತಾನೆ ಹೇಳಿ? ಇವರು ಪ್ರಗತಿಪರ ರೈತರನ್ನು ಕರೆದುಕೊಂಡು ಬರುತ್ತಾರೆ, ಬಡ ರೈತರನ್ನು ಕರೆದುಕೊಂಡು ಬರುವುದಿಲ್ಲ. ಪ್ರಗತಿಪರ ರೈತರು ಇವರೇನೋ ವಿಧಾನಸೌಧದ ಮುಂದೆ

ದೊಡ್ಡ ಕಾರ್ಯಕ್ರಮ ಮಾಡುತ್ತಿದ್ದಾರೆಂದು ಅವರು ಬರುತ್ತಾರೆ, ಇವರು ಬೆನ್ನುತಟ್ಟುತ್ತಾರೆ ಹೊರಟುಹೋಗುತ್ತಾರೆ; ಇದರಲ್ಲಿ ಏನು ಫಲಾತಾಂಶವಿಲ್ಲ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :— ಸಭಾಧ್ಯಕ್ಷರೆ, ಇವರು ಹೇಳುವುದರಲ್ಲಿ ಏನಾದರೂ ಅರ್ಥವಿದೆಯಾ ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ, ಇಂತಹವರು ರೈತರ ಬಗ್ಗೆ ಮಾತನಾಡುವುದು ಬೇಡ. ಯಾರು ಹೆಚ್ಚಿಗೆ ಉತ್ಪಾದನೆ ಮಾಡಿದ್ದರೋ ಅಂತಹವರನ್ನು ವಿಧಾನಸೌಧದ ಕಾರ್ಯಕ್ರಮಕ್ಕೆ ಕರೆಯಿಸಿದ್ದು.

ಶ್ರೀ ವಿ. ಮುನಿಯಪ್ಪ :— ಇರಲಿ, ನಿಮ್ಮ ಅರ್ಥ ನೀವೇ ಇಟ್ಟುಕೊಂಡು ಜನರಿಗೆ ಹೇಳಿ, ನಮ್ಮ ಅರ್ಥ ನಾವು ಹೇಳುತ್ತೇವೆ, ಮಾತನಾಡುವುದಕ್ಕೆ ಸಮಯವಿಲ್ಲ. ಮೂಲಭೂತವಾಗಿ ರೈತನ ಉತ್ಪಾದನೆಗೆ ನಾವು ಯಾವ ನೀತಿಯನ್ನು ತರಬೇಕಾದರೂ, ಅವನು ಏನು ಉತ್ಪಾದನೆ ಮಾಡುತ್ತಾನೆ, ಅವನು ಬೆಳೆಯನ್ನು ತೆಗೆಯುವಲ್ಲಿ ಪ್ರಸ್ತುತ ಕ್ಲೈಮೇಟಿಕ್ ಕಂಡಿಷನ್ಸ್ ಹೇಗಿದೆ ಅದಕ್ಕೆ ಯಾವ ಬೆಳೆಯನ್ನು ಬೆಳೆಯುವುದಕ್ಕಾಗುತ್ತದೆ, ಅದಕ್ಕೆ ಯಾವ್ಯಾವ ತಂತ್ರಜ್ಞಾನವನ್ನು ಪ್ರಸ್ತುತ ಕ್ಲೈಮೇಟಿಕ್ ಕಂಡಿಷನ್ಸ್‌ಗೆ ಅಳವಡಿಸಿದರೆ ನಾವು ಉತ್ತಮವಾದ ಬೆಳೆಯನ್ನು ಬೆಳೆಯುವುದಕ್ಕಾಗುತ್ತದೆ, ಅದಕ್ಕೆ ಯಾವ್ಯಾವ ತಂತ್ರಜ್ಞಾನವನ್ನು ಪ್ರಸ್ತುತ ಕ್ಲೈಮೇಟಿಕ್ ಕಂಡಿಷನ್ಸ್‌ಗೆ ಅಳವಡಿಸಿದರೆ ನಾವು ಉತ್ತಮವಾದ ಬೆಳೆಯನ್ನು ಬೆಳೆಯಲು ಸಾಧ್ಯವಿದೆ ಎನ್ನುವುದರ ಬಗ್ಗೆ ರೀಸರ್ಚ್ ಆಗಬೇಕಾಗಿತ್ತು. ಎಲ್ಲೋ ಇಸ್ರೇಲ್ ಮಾಡಿದ್ದಾರೆಂದು, ಇಸ್ರೇಲ್ ವಾತಾವರಣಕ್ಕೂ ನಮ್ಮ ಕೋಲಾರದಲ್ಲಿರುವ ವಾತಾವರಣಕ್ಕೂ ಒಂದೇ ರೀತಿ ಹೋಲಿಕೆ ಮಾಡುವುದಕ್ಕಾಗುತ್ತದೆಯೇ? ನಾನು ಏತಕ್ಕೆ ಈ ಮಾತನ್ನು ಹೇಳುತ್ತೇನೆಂದರೆ, ಇವತ್ತು ಜಿಕೆವಿಕೆಯಲ್ಲಿರುವ ನಮ್ಮದೇ ಆದ ರಿಸರ್ಚ್ ಸೆಂಟರ್‌ಗೆ ನಲ್ವತ್ತು, ಐವತ್ತು ಲಕ್ಷ ರೂ. ಗಳನ್ನು ಖರ್ಚು ಮಾಡುತ್ತಿದ್ದಾರೆ. They are Spending only for research purposes... ಅಲ್ಲಿಂದ ಏನು ಫಲಿತಾಂಶವಿದೆ? ಅಲ್ಲಿಂದ ಫಲಿತಾಂಶವೆಷ್ಟಿದೆ ಎನ್ನುವುದನ್ನು ನಾವು ವಿಚಾರ ಮಾಡಬೇಕಾಗಿದೆ. ಅದರ ಬಗ್ಗೆ ನಾನು ಅವರನ್ನು ದೂಷಿಸುತ್ತಿಲ್ಲ, ಆದರೆ ಎಷ್ಟರಮಟ್ಟಿಗೆ ಬಿಳಿ ಆನೆ ಸಾಕಿದಂತಿದೆ ಎನ್ನುವುದನ್ನು ಹೇಳುತ್ತಿದ್ದೇನೆ. ಇವತ್ತು ಸೀಡ್ ಟೆಕ್ನಾಲಜಿ ಬಗ್ಗೆ ಹೇಳುವುದಾದರೆ, ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಮೊದಲು ನಾವು ಬಿತ್ತನೆಗೆ ಜೋಳವನ್ನು ಬೆಳೆಯುತ್ತಿದ್ದೆವು, ಅದೆಲ್ಲಾ ನಮ್ಮ ಪ್ರದೇಶದಲ್ಲಿ ಬೆಳೆಯುತ್ತಿದ್ದರು, ಕಮರ್ಷಿಯಲ್ ಆಗುತ್ತಿದ್ದದ್ದು ಧಾರವಾಡ, ಹುಬ್ಬಳ್ಳಿ, ಬೆಳಗಾಂ ಕಡೆಯಾಗುತ್ತಿತ್ತು. ಐಸೋಲೇಟೆಡ್ ಆಗಿರಬೇಕು, ಸೀಡ್ ಬಹಳ ಪ್ಯೂರಿಟಿ ಆಗಿರಬೇಕು, ಕ್ವಾಲಿಟಿ ಮೆಂಟೇನ್ ಆಗಬೇಕಾಗಿರತಕ್ಕಂಥದ್ದೇ ಸೀಡ್ ಏರಿಯಾದ ಮೂಲ ಉದ್ದೇಶವಿದ್ದು. ಅಂತಹದ್ದನ್ನು ಬಿಟ್ಟು ಇವತ್ತು ಎಲ್ಲಿ ಕಮರ್ಷಿಯಲ್ ಬೆಳೆಯುತ್ತಿದ್ದಾರೋ ಅಲ್ಲೇ ಸೀಡ್ ಬೆಳೆಯುತ್ತಿದ್ದಾರೆ, ಆ ಸೀಡ್ ಸರ್ಟಿಫಿಕೇಷನ್ ಎನ್ನುವುದಕ್ಕೆ ಬೆಲೆಯೇ ಇಲ್ಲ. ಬಹುಶಃ ಆ ಸೀಡ್ ಸರ್ಟಿಫಿಕೇಷನ್‌ದ್ದು ಐಡೆಂಟಿಫಿಕೇಷನ್ನೇ ಹೋಗಿಬಿಟ್ಟಿದೆ. ಅದಕ್ಕೆ ಇವತ್ತು ನೂರಕ್ಕೆ ತೊಂಬತ್ತು ಭಾಗ ಇವತ್ತು ಕಳಪೆ ಬೀಜ ಬರತಕ್ಕಂಥದ್ದು. ಇದು ಏತಕ್ಕೆ

ಆಗುತ್ತಿದೆ ಎಂದರೆ ಆ ಸೀಡ್ ಐಡೆಂಟಿಫಿಕೇಷನ್ ಏಜೆನ್ಸಿ ಏನಿತ್ತು ಅದು ಇವತ್ತು ಸಂಪೂರ್ಣವಾಗಿ ನಶಿಸಿ ಹೋಗಿದೆ; ಆದರ ಐಡೆಂಟಿಪೇಷನ್ ಇಲ್ಲದೆ ಆದರ ರೆಕಗ್ನಿಷನ್ ಇಲ್ಲದಂತಾಗಿದೆ. ಅದು ಬಹಳ ಸ್ಟ್ರಾಂಗ್ ಆಗಿ ಆಗಬೇಕು, ಯಾವತ್ತು, ಮೂಲ ಬಿತ್ತನೆ ಉತ್ಪಾದನೆ ಏನಿದೆ ಅದನ್ನು ಬಹಳ ಪ್ರತ್ಯೇಕವಾಗಿ ಬೆಳೆದು ಅದರ ಪ್ಯೂರಿಟಿಯನ್ನು ಹಾಗೂ ಕ್ವಾಲಿಟಿಯನ್ನು ಮೈಂಟೇನ್ ಮಾಡಿ ಒಳ್ಳೆಯ ಉತ್ತಮವಾದ ತಳಿಯನ್ನು ಕೊಟ್ಟರೆ ಮಾತ್ರ ರೈತನಿಗೆ ಆದರಿಂದ ಉತ್ಪತ್ತಿ ಅವನ ನಿರೀಕ್ಷೆಗಿಂತ ಹೆಚ್ಚಿಗೆ ಬರುವುದಕ್ಕೆ ಸಾಧ್ಯವಿದೆ. ಆ ದೃಷ್ಟಿಯಲ್ಲಿ ಕೆಲಸ ಮಾಡಬೇಕಾಗಿತ್ತು, ಅದು ಆಗಲಿಲ್ಲವೆನ್ನುವ ಮಾತನ್ನು ಹೇಳುತ್ತಿದ್ದೇನೆ. ಈಗ ಮತ್ತೊಂದು ಹೊಸ ನೀತಿಯನ್ನು ಆಯವ್ಯಯದಲ್ಲಿ ಪ್ರಕಟಣೆ ಮಾಡಿದ್ದಿರಿ. ಅದೇನೆಂದರೆ, ಈ ಕೃಷಿ ಪರಿಷ್ಕೃತ ನೀತಿಯನ್ನು ಜಾರಿಗೆತರುತ್ತೇವೆಂದು ಸುಮಾರು ನಾಲ್ಕೂವರೆ ವರ್ಷದಿಂದ ಪ್ರಯತ್ನಪಟ್ಟು ಆದೆಲ್ಲಾ ಹೊರಟುಹೋಗಿ ಈಗ ಹೊಸ ನೀತಿಯನ್ನು ಪ್ರಸ್ತಾಪ ಮಾಡಿದ್ದಾರೆ, ಆದನ್ನು ತರುತ್ತೇವೆಂದು ಹೇಳಿದ್ದಾರೆ. ನಾನು ಒಂದು ಮಾತನ್ನು ಹೇಳುತ್ತೇನೆ, ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಎಂದು ಕೃಷಿ ಕೈಗಾರಿಕಾ ನೀತಿಗೆ ಸಂಬಂಧಿಸಿದಂತೆ 1967 ರಲ್ಲಿ ಸ್ಥಾಪನೆ ಮಾಡಲಾಯಿತು. ಅದರಲ್ಲಿ ಎಲ್ಲಾ ಆಧುನಿಕ ಕೃಷಿ ಉಪಕರಣಗಳನ್ನು ಕಾಲದಿಂದ ಕಾಲಕ್ಕೆ ಬದಲಾವಣೆಯಾಗುವ ಒಂದು ತಂತ್ರಜ್ಞಾನವನ್ನು ಅಳವಡಿಸಿ ಆದರ ಮೂಲಕ ರೈತರಿಗೆ ಯಾವ್ಯಾವ ಪ್ರದೇಶದಲ್ಲಿ ಗದ್ದೆಗೆ ಯಾವರೀತಿ ಮಾಡಬೇಕು, ಡ್ರೈಲ್ಯಾಂಡ್ ಯಾವರೀತಿ ಮಾಡಬೇಕು ಮತ್ತೆ ವೆಟ್ ಲ್ಯಾಂಡ್‌ಗೆ ಯಾವ ರೀತಿ ಮಾಡಬೇಕು ಇತ್ಯಾದಿಗಳಿಗೆ ಬೇಕಾದ ತಂತ್ರಜ್ಞಾನ ಅದಕ್ಕೆ ಬೇಕಾದಂಥ ಉಪಕರಣಗಳನ್ನು ಉತ್ಪಾದನೆ ಮಾಡತಕ್ಕಂಥ ಒಂದು ಸಂಸ್ಥೆ ಅದರ ಜೊತೆಗೆ, ಪೆಸ್ಟಿಸೈಡ್ಸ್, ಇನ್‌ಸೆಕ್ಟಿಸೈಡ್ಸ್ ಉತ್ಪಾದನೆ ಮಾಡತಕ್ಕಂಥ ಒಂದು ಘಟಕವು ಕೂಡ ಅದರಲ್ಲಿದೆ. ಬೇರೆ ಬೇರೆ ಕಾರಣಗಳಿಂದ ಪಬ್ಲಿಕ್ ಸೆಕ್ಟಾರ್ ಉದ್ದಿಮೆಗಳು ರೋಗಗ್ರಸ್ತವಾಗಿವೆ. ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಆ ರೋಗಗ್ರಸ್ತ ಸಂಸ್ಥೆಯನ್ನು ಪುನರ್ವಸತಿ ಮಾಡಬೇಕಾದರೆ ಯಾವ್ಯಾವ ಕಾರ್ಯಕ್ರಮಗಳನ್ನು ತಾವು ತೆಗೆದುಕೊಂಡಿದ್ದೀರಿ? ಸುಧಾರಣೆಗಳನ್ನು ತರಬೇಕಾದರೆ ಮೊದಲು ಆ ಬಿಳಿ ಆನೆಗಳಾದ ಸಿಬ್ಬಂದಿಗಳೇನಿದ್ದರು ಅವರನ್ನು ಕಡಿಮೆ ಮಾಡಬೇಕಾಗಿತ್ತು, ಅಲ್ಲಿರುವ ಟೆಕ್ನಾಲಜಿ ಏನಿತ್ತು ಅವನ್ನು ಸರಿಯಾಗಿ ತಾಂತ್ರಿಕವಾಗಿ ಇನ್ನು ಆಧುನಿಕ ರೀತಿಯಲ್ಲಿ ಅಭಿವೃದ್ಧಿಪಡಿಸತಕ್ಕಂಥ ಪ್ರಯತ್ನವಾಗಬೇಕಾಗಿತ್ತು. ಇಲ್ಲಿ ಟ್ರಾಕ್ಟರ್ ಕಮಿಷನ್ ತೆಗೆದುಕೊಂಡರು, ಪಂಪ್‌ಸೆಟ್ ಕಮಿಷನ್ ತೆಗೆದುಕೊಂಡರು, ಇವೆಲ್ಲವನ್ನೂ ಕಂಪನಿ ಉಳಿಯಬೇಕೆನ್ನುವ ದೃಷ್ಟಿಯಿಂದ ಮಾಡಿದರು, ಆ ವಿಚಾರ ಬೇರೆ. ಆದರೆ, ಅಲ್ಲಿ ಏನಾಗಿದೆ ಎಂದರೆ, ಅಲ್ಲಿರುವ ಸಿಬ್ಬಂದಿಗೆ ಸಂಬಳವಿಲ್ಲದಿರುವ ಪರಿಸ್ಥಿತಿಯಲ್ಲಿ ಅಲ್ಲಿರುವ ಅನೇಕರಿಗೆ ಸಣ್ಣ ಆನೆಯಾಗಿದಂಥವರಿಗೆ ದೊಡ್ಡ ಆನೆಗಳಾಗಿ ಪ್ರಮೋಷನ್ ಕೊಟ್ಟರು; ಅವರಿಗೆ ಕೆಲಸವಿಲ್ಲ, ಜನರಲ್ ಮ್ಯಾನೇಜರ್ ಇತ್ಯಾದಿಗಳು ಜಾಸ್ತಿಯಾದವು. ಸಿಬ್ಬಂದಿ ವೆಚ್ಚ ಕಡಿಮೆ ಮಾಡುವುದಕ್ಕೆ ಪ್ರಯತ್ನವೇ ಮಾಡಲಿಲ್ಲ. ಆಮೇಲೆ ಇವರು ಹೊಸ

ಚಟುವಟಿಕೆಯನ್ನು ತಂದರು. ಅದೇನೆಂದರೆ ಫ್ಲೋರಿಕಲ್ಚರ್ ಡಿವಿಷನ್ ಮಾಡಿದರು. ಬಹುಶಃ ಇಡೀ ವಿಶ್ವದಲ್ಲೇ ಅದರ ಎಕ್ಸಿಸ್ಟೆನ್ಸ್ ಕಡಿಮೆಯಾಗುತ್ತಿದೆ, ಬಹುಶಃ ಅದು ಇಲ್ಲಿ ಸರಿಯಾಗಿ ಆಗುತ್ತಿದೆಯೊ ಏನೋ ಗೊತ್ತಿಲ್ಲ, ಇಲ್ಲಂತು ನಷ್ಟವಾಗಿ ಉಳಿತಿದೆ. ಎರಡನೆಯದು ಪ್ರೊಕ್ಯೂರ್‌ಮೆಂಟ್ ಅಂಡ್ ಎಕ್ಸ್‌ಪೋರ್ಟ್ ಡಿವಿಷನ್ ಎಂದು ಆರಂಭ ಮಾಡಿದರು. ನಮ್ಮ ಕೃಷಿ ಇಲಾಖೆಗೆ ಸಂಬಂಧಪಡದೆ ಇರುವ ಮೊಲಾಸಿಸ್ ವ್ಯಾಪಾರ ನಡೆಸುತ್ತಿದ್ದರು. ಮೊಲಾಸಿಸ್ ವ್ಯಾಪಾರದಿಂದ ಅಗ್ರೊ ಇಂಡಸ್ಟ್ರೀಸ್ ಇಂಪ್ರೂವ್ ಆಗಿ ಅದರಿಂದಲಾದರೂ ರೈತರಿಗೆ ಅನುಕೂಲವಾಗುತ್ತದೆ ಎಂದು ನಾನು ತಿಳಿದುಕೊಂಡೆ; ಆದರೆ ಅದೂ ಆಗಲಿಲ್ಲ. ಇದ್ದದ್ದನ್ನು ನೈಜವಾಗಿ ಹೇಳಿದ್ದೇವೆ, ತಾವು ಹೇಗೆ ಬೇಕಾದರೂ ನಿಮ್ಮ ಅನುಕೂಲಕ್ಕೆ ತಕ್ಕಂತೆ ಟ್ವಿಸ್ಟ್ ಮಾಡಿಕೊಳ್ಳಿ. ಪ್ರೊಕ್ಯೂರ್‌ಮೆಂಟ್ ಅಂಡ್ ಎಕ್ಸ್‌ಪೋರ್ಟ್ ಡಿವಿಷನಲ್ಲಿ ಮೊಲಾಸಿಸ್ ಎಂದು ಮಾಡಿದರು, ಅದಕ್ಕೆ ಒಬ್ಬ ಅಧಿಕಾರಿಯನ್ನು ಬೇರೆಕಡೆಯಿಂದ ತಂದರು, ಅವನಿಗೆ ಒಂದು ಲಕ್ಷ ಖರ್ಚು, ಒಂದು ವರ್ಷಕ್ಕೆ ಒಟ್ಟು ಹದಿನೈದು ಲಕ್ಷ ಅವನಿಗೆ ಖರ್ಚು ಎಷ್ಟು ಹೋಯಿತು, ಎಷ್ಟು ವ್ಯಾಪಾರ ಮಾಡಿದ ಎನ್ನುವುದಕ್ಕೆ ಇದುವರೆವಿಗೂ ಆಡಿಟ್ ಆಗಿಲ್ಲ, ದಯಮಾಡಿ ಅದನ್ನು ವಿಚಾರ ಮಾಡಿಸಿ. ಆಮೇಲೆ, Factory on wheels-mobile unit for fruit processing ಅನ್ನು ರಾಷ್ಟ್ರದ ಪ್ರಧಾನಮಂತ್ರಿಗಳಾಗಿದ್ದಂಥ ಸನ್ಮಾನ್ಯ ದೇವೇಗೌಡರು ಬಂದು ಅದನ್ನು ಉದ್ಘಾಟನೆ ಮಾಡಿದರು. ನನಗೂ ಬಹಳ ಸಂತೋಷವಾಯಿತು, ಏಕೆಂದರೆ ನಾನು 25 ವರ್ಷಗಳಿಂದ ಟೊಮ್ಯಾಟೊ ಬೆಳೆಗಾರ. ಈ ಫ್ರೂಟ್ ಪ್ರೋಸೆಸಿಂಗ್ ಹಳ್ಳಿ ಹಳ್ಳಿಗೆ ಬರುತ್ತದೆ, ಎಲ್ಲೆಲ್ಲಿ ಹಣ್ಣುಗಳು ಸಿಗುತ್ತವೆಯೊ ಅಲ್ಲಲ್ಲಿ ಕ್ರಷ್ ಮಾಡಿ ಸ್ಥಳದಲ್ಲಿ ಹಣದ ಪಾವತಿ ಎಂದರು. ಇದೇನೋ ಬಹಳ ಒಳ್ಳೆಯ ಕೆಲಸವೆಂದು ನನಗೆ ಬಹಳ ಸಂತೋಷವಾಯಿತು. ಒಳ್ಳೆಯ ಕೆಲಸ ಆಯಿತೆಂದು ನನಗೆ ಬಹಳ ಸಂತೋಷವಾಯಿತು. ಸಣ್ಣ ಸಣ್ಣ ರೈತರು ಎಂದರೆ ಅರ್ಧ ಎಕರೆ, ಒಂದು ಎಕರೆ ಜಾಗದಲ್ಲಿ ಬೆಳೆಯತಕ್ಕಂಥ ರೈತರಿಗೆ ಅದರೂ ಅನುಕೂಲವಾಗುತ್ತದೆ. ಆದರೆ ಆ ಯಂತ್ರ ತುಕ್ಕು ಹಿಡಿದುಬಿಟ್ಟಿದೆ.

ಅಧ್ಯಕ್ಷರು :— ಅದಕ್ಕೆ ನೀವು ಏನು ಮಾಡಬೇಕೆಂದರೆ, ನಮ್ಮ ಊರಿಗೆ ಬನ್ನಿ, ಒಂದು ಎಕರೆ ಜಮೀನೂ ಕೂಡ ಇಟ್ಟುಕೊಂಡಿಲ್ಲ ಎಲ್ಲಾ ಮಾರಿಬಿಟ್ಟಿದ್ದೇವೆ. ಸುಮ್ಮನೆ ಜಮೀನು ಮಾರುತ್ತಾ ಹೋಗಿ ಆ ಸಮಸ್ಯೆ ಯಾವುದೂ ಇರುವುದಿಲ್ಲ.

ಶ್ರೀ ವಿ. ಮುನಿಯಪ್ಪ :— ಫಾರ್ಮರ್ಸ್‌ಗೆ ಹೊಸ ಹೊಸ ತಂತ್ರಜ್ಞಾನವನ್ನು ಕನ್‌ಸಲ್ಟೆನ್ಸಿ ಮುಖಾಂತರ ಕೊಡತಕ್ಕಂಥದ್ದು ಇದೆ. ಇದಕ್ಕೆ ಸಂಬಂಧಪಟ್ಟ ಅಗ್ರೋ ಇಂಡಸ್ಟ್ರೀ ಕಟ್ಟಡ ಜೆ.ಸಿ. ರೋಡ್‌ನಲ್ಲಿ ಇದೆ. ಮತ್ತು ಅದು ಕಲ್ಲಿನ ಕಟ್ಟಡವಾಗಿರುತ್ತದೆ. ಇಲ್ಲಿ ಒಂದು ವಿಪರ್ಯಾಸ ಎಂದರೆ ಕಲ್ಲು ಕಟ್ಟಡಕ್ಕೆ ವೈಟ್ ವಾಷ್ ಮಾಡುವುದು ನಾನು ಎಲ್ಲೂ ನೋಡಿಲ್ಲ. ಆ ಕಟ್ಟಡಕ್ಕೆ ಹಸಿರು ಬಣ್ಣವನ್ನು ಹೊಡೆದಿದ್ದಾರೆ. ಕಲ್ಲಿನ ಕಟ್ಟಡಕ್ಕೆ ಯಾರಾದರೂ

ಸುಣ್ಣಬಣ್ಣ ಹೊಡೆಯುತ್ತಾರೆಯೇ? ಮಾನ್ಯ ಅಧ್ಯಕ್ಷರೆ, ಕಲ್ಲಿನ ಕಟ್ಟಡವಾದ ವಿಧಾನಸೌಧಕ್ಕೆ ಸುಣ್ಣಬಣ್ಣ ಹೊಡೆಯುತ್ತಾರೆಯೇ? ನೀವೇ ಹೇಳಿ. ರೈತರ ಹೆಸರಿನಲ್ಲಿ ಇವರು ಕೆಲಸ ಮಾಡಿಕೊಂಡುಬಿಟ್ಟಿದ್ದಾರೆ. ಇಲ್ಲಿ ಸಾರ್ವಜನಿಕರ ಹಣ ಪೋಲು ಆಗಿದೆ. ಇದೇ ಆಗ್ರೋ ಇಂಡಸ್ಟ್ರೀಯಲ್ಲಿ ಶಂಕರ್ ಶೆಟ್ಟಿ ಮತ್ತು ಅವನ ಗುಂಪಿನಿಂದ ಸುಮಾರು 50 ಲಕ್ಷ ರೂ.ಗಳ ದುರುಪಯೋಗವಾಗಿದೆ. ಇದನ್ನು ಸಂಬಂಧಪಟ್ಟ ಮಂತ್ರಿಗಳು ತನಿಖೆ ಮಾಡಲು ಸಿ.ಓ.ಡಿ.ಗೆ ಒಪ್ಪಿಸಿದ್ದಾರೆ. ಇಲ್ಲಿಯವರೆಗೆ ಸಿ.ಓ.ಡಿ. ಯಿಂದ ತನಿಖೆ ಆಗಲಿಲ್ಲ. ಇತ್ತೀಚೆಗೆ ಆ ಶಂಕರ್ ಶೆಟ್ಟಿ ನಿವೃತ್ತವಾಗಿ ಮನೆಗೆ ಹೋಗಿದ್ದಾರೆ. prima facie our Hon'ble Minister himself knows those facts. Based on those facts, enquiry into Rs.50 laks misappropriation case against Shankar Shetty and others is not allowed to complete due to non-cooperation from the higher authority. This is the fact. There was a domestic enquiry against one Mr. Vittal Rao. ರೈತರಿಗೆ ಅನುಕೂಲವಾಗಲು ಪರಿಷ್ಕೃತ ಕೃಷಿ ಕೈಗಾರಿಕೆ ತರಬೇಕು ಎಂದು ಇದ್ದಾರೆ. ಅದಕ್ಕೆ the same institution is meant for particular purpose. There is no need to bring new processing units. Almost all required technology is there. That should be strengthened. That is my interest.

ಶ್ರೀ ಬೈರೇಗೌಡ :— ಮಾನ್ಯ ಅಧ್ಯಕ್ಷರೆ, ಕೃಷಿ ಕೈಗಾರಿಕಾ ನಿಗಮದಲ್ಲಿ ನಡೆದಿರತಕ್ಕಂಥ ಕೆಲವು ವ್ಯವಹಾರಗಳ ಬಗ್ಗೆ ನನಗೂ ಕೂಡ ಸಂಪೂರ್ಣವಾದಂಥ ತೃಪ್ತಿ ಇಲ್ಲ. ಮತ್ತು ಏನೋ ಅನುಮಾನ ಇದೆ. ಆದಕ್ಕೋಸ್ಕರ ಒಬ್ಬ ಮೇಲ್ಮಟ್ಟದ ಅಧಿಕಾರಿಗೆ ಇದನ್ನು ವಹಿಸಿ ವಿಚಾರಣೆ ನಡೆಸಬೇಕು, ಯಾರು ತಪ್ಪಿತಸ್ಥರು ಇದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿದ್ದೆ. ಇದು ರೆಕಾರ್ಡ್‌ನಲ್ಲಿ ಇದೆ. ಏನಾಗುತ್ತದೆ ಎಂದರೆ ಅನೇಕ ಸಲ ಏನು ಹೇಳುತ್ತಾರೆ ಎನ್ನುವುದನ್ನು ಕೇಳಿಕೊಳ್ಳುವುದೇ ಇಲ್ಲ. ಇದು ಬಹುಶಃ ಶ್ರೀ ಮುನಿಯಪ್ಪನವರ ಸ್ಪೆಷಾಯಾಲಿಟಿ ಎಂದು ತೋರುತ್ತದೆ. ಆದನ್ನು ವಿಚಾರಣೆ ನಡೆಸುವುದಕ್ಕೆ ಸಿದ್ಧತೆ ನಡೆಸಿದ್ದೇವೆ ತಪ್ಪಿತಸ್ಥರು ಯಾರೇ ಇರಲಿ, ಅವರು 5ರೂ. ದುರುಪಯೋಗ ಮಾಡಿರಲಿ ಅಥವಾ 50 ಲಕ್ಷ ರೂ.ಗಳನ್ನು ದುರುಪಯೋಗ ಮಾಡಿರಲಿ that amount is immaterial. ಯಾರು ಯಾರು ಹಣವನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಮತ್ತು ಮಾಡಬೇಕಾಗಿರತಕ್ಕಂಥ ಕೆಲಸ ಮಾಡಿಲ್ಲ. ಅಂಥವರ ಮೇಲೆ ಬಹಳ ಕಠಿಣವಾದ ಕ್ರಮವನ್ನು ಖಂಡಿತವಾಗಿ ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಮಾತನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

SRI V. MUNIYAPPA: If you would have taken those steps, I would be very much grateful to you in the interst of public. ನಾನು ವರ್ಷವಾರು ನಷ್ಟ ಆಗಿರುವುದನ್ನು ಹೇಳುವುದಕ್ಕೆ ಹೋಗುವುದಿಲ್ಲ. 1990 ರಿಂದ 1998-99ರ ವರೆಗೆ ಒಟ್ಟು 78 ಕೋಟಿ ರೂಪಾಯಿಗಳು ನಷ್ಟವಾಗಿವೆ. ಅದರಲ್ಲಿ 1995-96 ರಿಂದ ಇಲ್ಲಿಯವರೆಗೆ 35 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ. ಮಾನ್ಯ ಮಂತ್ರಿಗಳಿಗೆ ರೈತರ ಬಗ್ಗೆ ಆಸಕ್ತಿ ಇದೆ. ಆ ಆಸಕ್ತಿ ತಾನು ಅಧಿಕಾರಕ್ಕೆ ಬಂದಮೇಲೆ ಎಷ್ಟರಮಟ್ಟಿಗೆ ಅದರ ಪ್ರತಿಫಲ ರೈತರಿಗೆ ಸಿಕ್ಕಿದೆ ಎನ್ನುವಂಥ ವಿಚಾರವನ್ನು ನೋಡಿದಾಗ ಅದರ ಬಗ್ಗೆ ಕಂಪ್ಲೀಟ್ ನಿರ್ಲಕ್ಷ್ಯ ಆಗಿದೆ. ಇದಕ್ಕೆ ಯಾರು ಜವಾಬ್ದಾರರು ಎನ್ನತಕ್ಕಂಥ ಮಾತನ್ನು ಅವರೇ ಹೇಳಬೇಕು. ನಾನು ಈ ಮಾತನ್ನು ಹೇಳುವುದಿಲ್ಲ.

ಶ್ರೀ ಸಿ. ಭೈರೇಗೌಡ :— ಮಾನ್ಯ ಅಧ್ಯಕ್ಷರೇ, 133 ಕೋಟಿ ರೂಪಾಯಿಯ ಯೂರಿಯಾ ಏನಾಯಿತೆಂದು ಈ ದೇಶದಲ್ಲಿರತಕ್ಕಂಥ ಎಲ್ಲರಿಗೂ ಗೊತ್ತಿದೆ.

ಶ್ರೀ ವಿ. ಮುನಿಯಪ್ಪ :— ಮಾನ್ಯ ಅಧ್ಯಕ್ಷರೆ, ಇದು ಎಲ್ಲಾ ಏನೆಂದರೆ ಯಾವ ಊರು ಗೌಡ ಎಂದು ಕೇಳಿದರೆ ಕಂಬಳಿಗೆ ಮೂರು ಆಣೆ ಎಂದರಂತೆ. ನಾನು ಕೇಳುವುದು ಏನು, ಎಲ್ಲೋ ಹೋಗಿರುವುದು ಎಂದರೆ ಏನು, ಅದಕ್ಕೆ ಅವರು ಅನುಭವಿಸುತ್ತಾ ಇರುವುದು. ಅದರ ಬಗ್ಗೆ ಪ್ರಶ್ನೆ ಬೇಡ. ಇರತಕ್ಕಂಥದ್ದನ್ನು ನಾನು ಹೇಳುತ್ತೇನೆ.

ಶ್ರೀ ಸಿ. ಭೈರೇಗೌಡ :— ಆ ರೀತಿಯಾಗಿ ನಡೆದಿದ್ದರೆ ಅವರ ಮೇಲೆ ಕಾಠಿಣ್ಯವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನು ಹೇಳಿದ್ದೇನೆ. ಎಲ್ಲಿ ಹೋಯಿತು ಯೂರಿಯಾ ಎಲ್ಲಿ ಹೋಯಿತು ಯೂರಿಯಾ ಎಂದು ಈ ದೇಶದ 97ರಿಂದ 98 ಕೋಟಿ ಜನ ಹುಡುಕುತ್ತಲೇ ಇದ್ದಾರೆ. ಆದರೆ ಒಂದು ಕಾಳು ಯೂರಿಯಾ ಕೂಡ ಸಿಕ್ಕಿಲ್ಲ. ಎಲ್ಲಿ ಹೋಯಿತು ಎನ್ನುವುದೂ ಕೂಡ ಗೊತ್ತಿಲ್ಲ.

ಶ್ರೀ ವಿ ಮುನಿಯಪ್ಪ :—.......ನಾವು ಎಸ್.ಸಿ.:ಎಸ್.ಟಿ. ಕಾರ್ಪೋರೇಷನ್‌ನಿಂದ 7 ಕೋಟಿ 11 ಲಕ್ಷ ರೂ. ಇದೆಯೇ ಎಂದು ಕೇಳಿದರೆ, ಯಾವ ಯಾವುದೋ ಸಾಲ ಇದೆ ಅದು ತಂದ ಮೇಲೆ ಇವರಿಗೆ ಕೊಡುತ್ತೇವೆ ಎಂದು ಹೇಳಿದರೆ ಹೇಗೆ? ಗಂಗಾಕಲ್ಯಾಣ ಯೋಜನೆ ಬಡವರದ್ದು. ಇಂಪ್ಲಿಮೆಂಟ್ ಮಾಡುತ್ತೇವೆಂದು ಆ ಹಣವನ್ನು ತೆಗೆದುಕೊಂಡಿದ್ದೀರಿ, ಅದನ್ನು ನೀವು ತಕ್ಷಣ ಮಾಡಬೇಕು, ನಿಮ್ಮ ಕೈಯಲ್ಲಿ ಆಗದೇ ಹೋದರೆ ಅದನ್ನು ವಾಪಸ್ಸು ಕೊಡಬೇಕು. ಅದು ಬಿಟ್ಟು ಆ ಹಣವನ್ನು ತೆಗೆದುಕೊಂಡು ಹೋಗಿ ಯಾವುದೋ ಹಣಕ್ಕೆ ಅಂದರೆ ಎಷ್ಟೋ ವರ್ಷದಿಂದ ಅಕ್ಯುಮಲೇಟ್ ಲಾಸ್‌ನಲ್ಲಿ ಇರತಕ್ಕಂಥದ್ದಕ್ಕೆ ಇದನ್ನೂ ಲಿಂಕ್ ಮಾಡಿ, ಅವರು ಹಣವನ್ನು ಕ್ಯಾಷ್ ರೂಪದಲ್ಲಿ

ಕೊಟ್ಟಿದ್ದರು. ಅದರ ಬಗ್ಗೆ ಅರ್ಬಿಟ್ರೇಷನ್‌ಗೆ ಹೋಗಿದ್ದಾರೆ. ಒಂದು ತಿಂಗಳಿನಲ್ಲಿ ಹಣ ಕೊಡಬೇಕು, ಇಲ್ಲದಿದ್ದರೆ 20 ಪರ್ಸೆಂಟ್ ಬಡ್ಡಿ ಕೊಡಬೇಕು. ಎಂದು 1997ರಲ್ಲಿ ಅರ್ಬಿಟ್ರೇಷನ್‌ನಲ್ಲಿ ತೀರ್ಮಾನವಾಗಿದೆ. ತಮಗೆ ಬೇಕಾದರೆ ಅದರ ಕಾಪಿಯನ್ನು ಕಳುಹಿಸಿಕೊಡುತ್ತೇನೆ. ಬಡವರಿಗೆ ಇರತಕ್ಕಂಥ ಎಸ್.ಸಿ. : ಎಸ್.ಟಿ. ಕಾರ್ಪೊರೇಷನ್‌ನಿಂದ ಹಣ ತೆಗೆದುಕೊಂಡು ಆ ಹಣವನ್ನು ಸರ್ಕಾರದವರು ಬೇರೆ ಕಡೆಗೆ ಉಪಯೋಗ ಮಾಡಿಕೊಂಡು 2 ವರ್ಷ ಕಳೆದರೂ, ಆ ಹಣವನ್ನು ಯಾವ ಉದ್ದೇಶಕ್ಕಾಗಿ ಇಟ್ಟಿದ್ದರು ಎಂದರೆ ಗಂಗಾಕಲ್ಯಾಣ ಯೋಜನೆ ಎನ್ನುವ ದೊಡ್ಡ ಯೋಜನೆ ತಂದಿದ್ದೇವೆಂದು ಸರ್ಕಾರಕ್ಕೆ ಕೀರ್ತಿ ತರುವಂಥ ಈ ಯೋಜನೆಯ ಹಣ ಈ ತರಹ ಆದರೆ ಇದಕ್ಕೆ ದುರುಪಯೋಗವಾಗಿದೆ ಎಂದು ಹೇಳದೆ ಇನ್ನೇನು ಹೇಳಬೇಕು? ಇದಕ್ಕೆ ಮಾನ್ಯ ಮಂತ್ರಿಗಳೇ ಹೇಳಬೇಕು. ಇಷ್ಟೆಲ್ಲಾ ಆದ ಮೇಲೂ ಶ್ರೀ ಪಿ.ವಿ. ರೆಡ್ಡಿ ಎನ್ನುವವರನನ್ನು ಜಿ.ಕೆ.ವಿ.ಕೆಯಯಿಂದ ನಿಯೋಜನೆ ಮೇರೆಗೆ ತೆಗೆದುಕೊಂಡಿದ್ದಾರೆ. ಅವರಿಗೆ ತಿಂಗಳಿಗೆ 50 ರಿಂದ 60 ಸಾವಿರ ಸಂಬಳ ರೂಪದಲ್ಲಿ ಖರ್ಚಾಗುತ್ತಿದೆ. ನಂತರ ಮಿಲ್ಕ್ ಫೆಡರೇಷನ್‌ನಿಂದ ಶ್ರೀ ದಿವಾಕರ ರಾವ್ ಎನ್ನುವ ಒಬ್ಬ ಸ್ಪೆಷಲಿಸ್ಟ್‌ನ್ನು ತೆಗೆದುಕೊಂಡಿದ್ದಾರೆ. There are already experts available in the Corporation. In spite of that they have taken on deputation from other institutions. ಇವರಿಗೆ ಕಾರು ಕೊಡಬೇಕು. ಇವರೆಲ್ಲರಿಗೆ ದೊಡ್ಡ ದೊಡ್ಡ ಸ್ಟೇಟ್ ಆಫಿಸರ್ಸ್ ಅವರ ಸ್ಟೇಟಸ್ ಕೊಡಬೇಕು. ಅದರ ಜೊತೆಗೆ ಮಾರ್ಕೆಟಿಂಗ್ ಫೆಡರೇಷನ್‌ನಿಂದ ಮುನೇಗೌಡ ಅಥವಾ ಮುನಿರಾಜು ಎನ್ನುವವರನ್ನು ತೆಗೆದುಕೊಂಡಿದ್ದಾರೆ. ಅವರಿಗೆ 15ರಿಂದ 20 ಲಕ್ಷ ರೂ.ಗಳ ಖರ್ಚು. ಈ ರೀತಿ ಬೇರೆ ಕಡೆಯಿಂದ ಇಲ್ಲಿಗೆ ಅಧಿಕಾರಿಗಳನ್ನು ತೆಗೆದುಕೊಳ್ಳತಕ್ಕಂಥ ರಿಸರ್ಚ್‌ಗಳನ್ನು ಇಲ್ಲಿ ಟ್ರಯಲ್ ಮಾಡಿಸುವುದಕ್ಕೆ ಹೋಗಿ ಮೊದಲೇ ಮುಳುಗಿರುವಂಥದ್ದಕ್ಕೆ ಇನ್ನೊಂದು ಟ್ರಯಲ್ ಹಾಕಿ ಅದು ಪೂರ್ತಿ ಮುಳುಗಿಸುವುದಕ್ಕೆ ಪ್ರಯತ್ನ ಮಾಡಿ 31 ಕೋಟಿ ರೂಪಾಯಿಗಳಷ್ಟು ನಷ್ಟದಲ್ಲಿ ಇದ್ದ ಅದನ್ನು ಕೇವಲ 3 ವರ್ಷದಲ್ಲಿ 65 ಕೋಟಿ ರೂಪಾಯಿಗಳು ಆಗುವ ಹಾಗೆ ಮಾಡಿದಿರಿ. ಇದು ಈಗ ಆಗಿರತಕ್ಕಂಥ ಪರಿಸ್ಥಿತಿ. ಇದರ ಬಗ್ಗೆ ಪೂರ್ಣ ತನಿಖೆ ಗಬೇಕು. ಸಾಧ್ಯವಾದರೆ ಸಿ.ಓ.ಡಿ. ಅಥವಾ ಸಿ.ಬಿ.ಐ. ಅಥವಾ ಸದನ ಸಮಿತಿ ಮಾಡಿ ಅದರ ಮುಖಾಂತರ ಆದರೂ ತನಿಖೆ ಆಗಬೇಕು, ಅದಕ್ಕೆ ಮಾನ್ಯ ಮಂತ್ರಿಗಳೂ ಸಹ ಸಹಕರಿಸುತ್ತಾರೆ ಏಕೆಂದರೆ ಇದರಲ್ಲಿ ಅನೇಕ ಲೋಪದೋಷಗಳು, ಎನ್ನತಕ್ಕಂಥದ್ದನ್ನೂ ಅವರು ಒಪ್ಪಿಕೊಂಡಿದ್ದಾರೆ.

ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೆ, ಈ ಸದನಕ್ಕೆ ಸಂಬಂಧಪಟ್ಟಿರತಕ್ಕಂಥ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಇದೆ. ಈ ಕೆಲಸವನ್ನು ಆ ಸಮಿತಿಗೆ ವಹಿಸುವುದಕ್ಕೆ ಸರ್ಕಾರ ಈಗಲೇ ಸಿದ್ಧವಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೆ, ಈ ಸದನಕ್ಕೆ ಸಂಬಂಧಪಟ್ಟಿರತಕ್ಕಂಥ ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ವಹಿಸುವುದಕ್ಕೆ ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಒಪ್ಪಿಕೊಂಡಿದ್ದಾರೆ. ಅದನ್ನು ಪಿ.ಎ.ಸಿ. ಕಮಿಟಿಗೆ ರೆಫರ್ ಮಾಡಬೇಕು. ಮಾನ್ಯ ಮಂತ್ರಿಗಳು ತಮ್ಮ ಮುಖಾಂತರ ಸದನಕ್ಕೆ ತಿಳಿಸಿರುವುದರಿಂದ ಇದು ರೆಫರ್ ಆದಹಾಗೆ ಅಲ್ಲವೇ?

ಅಧ್ಯಕ್ಷರು :— ರೆಫರ್ ಆದಹಾಗೆ. ಇದಕ್ಕೆ ನನ್ನದೇನೂ ಆಕ್ಷೇಪಣೆ ಇಲ್ಲ.

ಶ್ರೀ ವಿ. ಮುನಿಯಪ್ಪ :— ಮಾನ್ಯ ಅಧ್ಯಕ್ಷರೆ, ಎಕ್ಸೈಜ್ ಕಂಟ್ರಾಕ್ಟರ್‌ಗಳಿಂದ ಸರ್ಕಾರಕ್ಕೆ 285 ಕೋಟಿ ರೂಪಾಯಿನಷ್ಟು ಬಾಕಿ ಬರಬೇಕಾಗಿದೆ. ಇದರಲ್ಲಿ ಒಂದು ವಿಪರ್ಯಾಸವನ್ನು ತಮ್ಮ ಗಮನಕ್ಕೆ ತರುತ್ತೇನೆ. ಸರ್ಕಾರಕ್ಕೆ ಬಾಕಿ ಬರಬೇಕಾದ ಹಣದಲ್ಲಿ ಕೇವಲ 23 ಕೋಟಿ ರೂಪಾಯಿಗಳು ಮಾತ್ರ ಡಿಸ್‌ಪ್ಯೂಟ್ ಆಗಿ ಕೋರ್ಟ್‌ನಲ್ಲಿ ಇದೆ. ಇನ್ನುಳಿದ 201 ಕೋಟಿ ರೂ.ಗಳಿಗೆ ಯಾವ ವಿವಾದವೂ ಇಲ್ಲ. ಆದರೆ ಯಾರ್ಯಾರು ಅಬಕಾರಿ ಗುತ್ತಿಗೆದಾರರು ಇದ್ದಾರೆ ಅವರು ಸರ್ಕಾರಕ್ಕೆ ಕೊಡಬೇಕಾದ ಬಾಕಿಯನ್ನು ಇಟ್ಟುಕೊಂಡು ಪುನ: ಅವರೇ ಹರಾಜಿನಲ್ಲಿ ಪಾಲ್ಗೊಳ್ಳುತ್ತಾರೆ. ಇದು ಎಲ್ಲರಿಗೂ ಗೊತ್ತಿದೆ. ಒಂದು ಸಲ ಅವರು ಸರ್ಕಾರಕ್ಕೆ ಬಾಕಿ ಕೊಡದೆ ಡಿಫಾಲ್ಟರ್ ಆದಮೇಲೆ ಪುನ: ಅದೇ ವ್ಯಕ್ತಿಗಳಿಗೆ ಅಬಕಾರಿ ಹರಾಜಿನಲ್ಲಿ ಕಾಂಪಿಟ್ ಮಾಡುವುದಕ್ಕೆ ಏಕೆ ಅವಕಾಶ ಕೊಡುತ್ತೀರಿ? ಸುಮಾರು 200 ಕೋಟಿ ರೂ.ಗಳಿಗಿಂತ ಹೆಚ್ಚು ಸರ್ಕಾರಕ್ಕೆ ಬರಬೇಕು. ಇಂಥಾದ್ದು ಸರ್ಕಾರದಲ್ಲಿ ಗಿದೆ. ಇನ್ನು ಹೊಸ ಸರಾಯಿ ನೀತಿಯಲ್ಲಿ ರಿ-ಆಕ್ಷನ್ ಸಿಸ್ಟಮ್ ಇಂಟ್ರಡ್ಯೂಸ್ ಮಾಡಿರುವುದರಿಂದ 70 ಕೋಟಿ ರೂ.ಗಳಷ್ಟು ಲಾಭ ಬಂತು ಎಂದು ಸರ್ಕಾರದವರು ಹೇಳಿದರು. ಕಳೆದ ಎರಡು ವರ್ಷದಲ್ಲಿ ವರ್ಷಕ್ಕೆ 70 ಕೋಟಿ ರೂ.ನಂತೆ ಸರ್ಕಾರಕ್ಕೆ ಬರತಕ್ಕಂಥ ಒಟ್ಟು 140 ಕೋಟಿ ರೂ.ಗಳ ಆದಾಯ ಹೋರಟುಹೋಯಿತು. ಅಂದರೆ 140 ಕೋಟಿ ರೂ.ಗಳ ನಷ್ಟವಾಯಿತು. ಪ್ರತಿ ವರ್ಷ ಆಕ್ಷನ್ ನೀತಿ ತಂದಿದ್ದರೆ, ಪ್ರತಿ ವರ್ಷ 10 ಪರ್ಸೆಂಟ್ 15 ಪರ್ಸೆಂಟ್ 25 ಪರ್ಸೆಂಟ್ ಹೀಗೆ ಹಂತ ಹಂತವಾಗಿ ಎನ್‌ಹ್ಯಾನ್ಸ್ ಆಗುತ್ತಿತ್ತೆ ಹೊರತು ಕಡಿಮೆ ಆಗತಕ್ಕಂಥದ್ದು ಇಲ್ಲವೇ ಇಲ್ಲ. ಆದರೆ ಮೇಲಿನಂತೆ ಮಾಡದೆ ಈ ತರಹದ ಪರಿಸ್ಥಿತಿ ಉಂಟಾಗಿದೆ. ಈಗಾಗಲೇ ಕೋರ್ಟಿನವರು ಏನು ಮಾಡಿದ್ದಾರೆ ಅದನ್ನು ಖಂಡಿತವಾಗಿ ಮುಂದುವರಿಸಬೇಕು. ಇನ್ನೂ 2-3 ಪಾಯಿಂಟ್‌ಗಳ ಮೇಲೆ ಮಾತನಾಡಬೇಕೆಂದು ಇದ್ದೆ. ಆದರೆ ಸಮಯದ ಅಭಾವವಿರುವುದರಿಂದ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗದೆ ಇಷ್ಟು ಹೊತ್ತು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :— ಕಡೇ ಘಳಿಗೆವರೆಗೆ ಆಡಳಿತ ಮತ್ತು ವಿರೋಧ ಪಕ್ಷದ ಎಲ್ಲಾ ಗೌರವಾನ್ವಿತ ಸದಸ್ಯರು ಕುಳಿತು ಸಹಕರಿಸಿದ್ದಕ್ಕೆ ನನ್ನ ಧನ್ಯವಾದಗಳನ್ನರ್ಪಿಸಿ, ಈಗ ಸದನವನ್ನು ಮುಂಡೂಡುತ್ತಿದ್ದೇನೆ. ಸದನವು ಪುನ: ಮಂಗಳವಾರ ಬೆಳಿಗ್ಗೆ 10 ಗಂಟೆ 30 ನಿಮಿಷಕ್ಕೆ ಸೇರುವುದು.

(ಸದನವು ಸಂಜೆ 7 ಗಂಟೆ 21 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನ: ದಿನಾಂಕ: 30-3-1999ರ ಮಂಗಳವಾರದಂದು ಬೆಳಿಗ್ಗೆ 10-30 ಗಂಟೆಗೆ ಸೇರಲು ನಿಶ್ಚಯಿಸಿತು.

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.